

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 3 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 17 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರಲ್ಲಿ ದಿನೇ ದಿನೆ ಎಲೆಕ್ಟ್ರಿಕ್ ವಾಹನ ಬಳಕೆ ಪ್ರಮಾಣ ಹೆಚ್ಚಳ


●ಇಂಧನ ದರ ಏರಿಕೆಯಿಂದ ರೋಸಿ ಹೋದ ಜನ ಇವಿಗಳ ಮೊರೆ ●ಸೆಸ್ಕ್ ವ್ಯಾಪ್ತಿಯಲ್ಲಿ 36 ಕಡೆ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆ

ಮೈಸೂರು, ಮೇ 2(ಆರ್‌ಕೆ)–ದಿನೇ ದಿನೆ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯಾಗುತ್ತಿರುವುದರಿಂದ ಜನರು ವಿದ್ಯುತ್ ಚಾಲಿತ ವಾಹನಗಳ ಖರೀದಿಗೆ ಮುಂದಾಗುತ್ತಿದ್ದಾರೆ.

ನಗರಗಳು ಬೆಳೆದಂತೆ ಜನಸಂಖ್ಯೆಗನುಗುಣವಾಗಿ ಡೊಮೆಸ್ಟಿಕ್ ಹಾಗೂ ವಾಣಿಜ್ಯ ಬಳಕೆ ವಸ್ತುಗಳ ಸಾಗಣೆ ವಾಹನಗಳ ಬಳಕೆಯೂ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಇಂಧನ ಬೆಲೆ ದುಬಾರಿಯಾಗುತ್ತಿರುವುದರಿಂದ ಎಲೆಕ್ಟ್ರಿಕ್ ವಾಹನಗಳ ಖರೀದಿಗೆ ಗ್ರಾಹಕರು ಆಸಕ್ತಿ ತೋರುತ್ತಿದ್ದಾರೆ. ಇ–ವಾಹನಗಳ ಬೇಡಿಕೆಗನುಗುಣವಾಗಿ ಕೇಂದ್ರ ಸರ್ಕಾರವು ಎಲೆಕ್ಟ್ರಿಕ್ ಮೊಬಿಲಿಟಿ ಪ್ರೊಮೋಷನ್ ಸ್ಕೀಂ–2024 ಅನ್ನು ಅನುಷ್ಠಾನಗೊಳಿಸಿ ಮೂಲಸೌಕರ್ಯ ಅಭಿವೃದ್ಧಿಗೊಳಿಸಲು 500 ಕೋಟಿ ರೂ. ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಮೀಸಲಿರಿಸಿದೆ.

ಸರ್ಕಾರದ ವಾಹನ ವೆಬ್‌ಸೈಟ್ ಅಂಕಿ ಅಂಶಗಳ ಪ್ರಕಾರ, ಎಲೆಕ್ಟ್ರಿಕ್ ವಾಹನ ಖರೀದಿಯಲ್ಲಿ ಕರ್ನಾಟಕ ದೇಶದಲ್ಲಿ 3ನೇ ಸ್ಥಾನದಲ್ಲಿದ್ದು, 2021 ರಲ್ಲಿ 0.28 ಮಿಲಿಯನ್ (3,42,690) ಇ–ವಾಹನಗಳು ನೋಂದಣಿಯಾಗಿವೆ ಎಂಬ ಮಾಹಿತಿ ಇದೆ. 6,10,895 ವಾಹನ ಖರೀದಿಸಿ ಉತ್ತರ ಪ್ರದೇಶ ಪ್ರಥಮ ಸ್ಥಾನದಲ್ಲಿದ್ದರೆ, 4,39,936 ವಾಹನ ನೋಂದಣಿಯೊಂದಿಗೆ ಮಹಾರಾಷ್ಟ್ರ 2ನೇ ಸ್ಥಾನದಲ್ಲಿದೆ ಎಂದು ತಿಳಿದು ಬಂದಿದೆ.

2022ರ ಮಾರ್ಚ್‌ವರೆಗೆ ಮೈಸೂರಿನ ಆರ್‌ಟಿಓದಲ್ಲಿ 2,465 ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು, 75 ಆಟೋರಿಕ್ಷಾಗಳು ಹಾಗೂ 208 ಎಲೆಕ್ಟ್ರಿಕ್ ಕಾರುಗಳು ನೋಂದಣಿಯಾಗಿದ್ದವು. 2024ರ ಏಪ್ರಿಲ್ 30ರವರೆಗೆ ಮೈಸೂರಿನ ಪಶ್ಚಿಮ ಆರ್‌ಟಿಓ ಕಚೇರಿಯಲ್ಲಿ 13,324 ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು, 65 ಪ್ಯಾಸೆಂಜರ್ ಆಟೋ, 117 ಗೂಡ್ಸ್ ಆಟೋ ಹಾಗೂ 786 ಕಾರುಗಳು ನೋಂದಣಿಯಾಗಿವೆ. ಪೂರ್ವ ಆರ್‌ಟಿಓ ಕಚೇರಿಯಲ್ಲಿ ಒಟ್ಟು 1,292




ವಾಹನಗಳು ನೋಂದಣಿಯಾಗಿದ್ದು, ಆ ಪೈಕಿ 30 ಲಘು ಮೋಟಾರು ವಾಹನಗಳು, 24 ಆಟೋ ರಿಕ್ಷಾಗಳು ಹಾಗೂ 1,238 ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು 2024ರ ಏಪ್ರಿಲ್ 30ರವರೆಗೆ ನೋಂದಣಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಭಾಗದಲ್ಲಿ ಜನರು ಹೆಚ್ಚಾಗಿ ಎಲೆಕ್ಟ್ರಿಕ್ ದ್ವಿಚಕ್ರ ವಾಹನ ಖರೀದಿಗೆ ಆಸಕ್ತಿ ತೋರುತ್ತಿರುವುದು ಕಂಡುಬಂದಿದೆ.

ವಾಹನಗಳ ಚಾರ್ಜಿಂಗ್ ಸೌಲಭ್ಯ: ವಿದ್ಯುತ್ ಚಾಲಿತ ವಾಹನಗಳ ಖರೀದಿ ಗಣನೀಯವಾಗಿ ಹೆಚ್ಚಾಗುತ್ತಿದ್ದಂತೆಯೇ ಅದಕ್ಕನುಗುಣವಾಗಿ ಎಲೆಕ್ಟ್ರಿಕ್ ವೆಹಿಕಲ್(ಇವಿ) ಚಾರ್ಜಿಂಗ್ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಬೇಡಿಕೆ ಜಾಸ್ತಿಯಾದಂತೆ ಮೂಲ ಸೌಲಭ್ಯದೊಂದಿಗೆ ವಾಹನಗಳ ಚಾರ್ಜಿಂಗ್ ಘಟಕಗಳು ಸಹ ಹೆಚ್ಚಾಗುತ್ತಿವೆ.

2024ರ ಏಪ್ರಿಲ್‌ವರೆಗೆ ಮೈಸೂರು ನಗರದಲ್ಲಿ 15 ಸೇರಿದಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಲಿಮಿಟೆಡ್(ಸೆಸ್ಕ್) ವ್ಯಾಪ್ತಿಯ 5 ಜಿಲ್ಲೆಗಳಲ್ಲಿ 36 ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ. ಸೆಸ್ಕ್‌ನಿಂದ ಮೈಸೂರಿನ ಕೆಸರೆ ರಾಜೇಂದ್ರನಗರದ ಎನ್‌ಆರ್ ಉಪವಿಭಾಗದ ಕಚೇರಿ ಆವರಣ, ಹಿನಕಲ್ ಬಳಿಯ ಪ್ರಾದೇಶಿಕ ಕಚೇರಿ ಆವರಣ, ಕುವೆಂಪುನಗರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿ ಹಾಗೂ ನಂಜನಗೂಡು ರಸ್ತೆಯ ಕಡಕೊಳ ಸಮೀಪದ ಸೆಸ್ಕ್ ಅತಿಥಿ ಗೃಹದ ಆವರಣದಲ್ಲಿ ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸಲಾಗಿದೆ.

ಅಗತ್ಯ ಕನಿಷ್ಠ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದರೆ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಇವಿ ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸಲು ಖಾಸಗಿ ವ್ಯಕ್ತಿಗಳಿಗೆ LT6(C) ಪ್ರಮಾಣದ ಸಂಪರ್ಕ ಕಲ್ಪಿಸಿ ಕೊಡಲಿದ್ದು, ಇದಕ್ಕೆ ಯೂನಿಟ್ ●9ನೇ ಪುಟಕ್ಕೆ



DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ. (T&C)
ಒಂದು ಗ್ರಾಂ ಚಿನ್ನಕ್ಕೆ 7000
8884171888

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 20,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8884304444

REQUIRED
1. General Manager - Sales
2. General Manager - Service
Location @ Mysuru
Profile : Must be a Graduate
Age : 40-45 yrs
Min. 10-15 years experience in Team Handling (Pref. Automobile Industry)
PACKAGE : VERY GOOD SALARY AS PER INDUSTRY + VARIABLE
Please send your CV to bbmotors.md@gmail.com
Con.: 8892585748, 9972827278
B.B. MOTORS
Bajaj Auto Ltd. - Intra City Business

ಲೈಂಗಿಕ ದೌರ್ಜನ್ಯ ಪ್ರಕರಣ

ಪ್ರಜ್ವಲ್ ರೇವಣ್ಣ ವಿರುದ್ಧ ಲುಕ್‌ಔಟ್ ನೋಟಿಸ್

●ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಲು ಪ್ರಧಾನಿಗೆ ಸಿಎಂ ಸಿದ್ದರಾಮಯ್ಯ ಪತ್ರ ●ಪ್ರಜ್ವಲ್, ರೇವಣ್ಣ ವಿಚಾರಣೆಗೆ ನೋಟಿಸ್ ●ಪ್ರಜ್ವಲ್ ವಿರುದ್ಧ ಮತ್ತೋರ್ವ ಮಹಿಳೆ ದೂರು

ಬೆಂಗಳೂರು, ಮೇ 2(ಕೆಎಂಶಿ)– ಸಾಕಷ್ಟು ಮಹಿಳೆಯರ ಮೇಲಿನ ಲೈಂಗಿಕ ಶೋಷಣೆ ಆರೋಪ ಹೊತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಪತ್ತೆ ಹಚ್ಚಿ ಕರೆತರಲು ಲುಕ್‌ಔಟ್ ನೋಟಿಸ್ ಜಾರಿಯಾಗಿದೆ. ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದರು.


ಡಾ.ಜಿ.ಪರಮೇಶ್ವರ್

ಪ್ರಜ್ವಲ್ ವಿದೇಶಕ್ಕೆ ಹೋಗಿರುವುದು ಸತ್ಯ, ಹಾಗಾಗಿ ಲುಕ್‌ಔಟ್ ನೋಟಿಸ್ ನೀಡಲಾಗಿದೆ. ಎಲ್ಲಾ ವಿಮಾನ ನಿಲ್ದಾಣ, ರೈಲು ನಿಲ್ದಾಣ ಮತ್ತು ಬಂದರು ಸೇರಿದಂತೆ ಎಲ್ಲೆಡೆ ನೋಟಿಸ್ ನೀಡಿದ್ದೇವೆ. ಪ್ರಜ್ವಲ್ ಹಾಗೂ ರೇವಣ್ಣ ಪ್ರಕರಣದಲ್ಲಿ ಯಾರನ್ನೂ ಬಿಡುವ ಮಾತಿಲ್ಲ. ಅವರು ನೋಟಿಸ್‌ಗೆ ಗೌರವ ನೀಡಿ ತನಿಖೆಗೆ ಹಾಜರಾಗದಿದ್ದರೆ, ಕಾನೂನಿನಂತೆ ಬಂಧಿಸಲಾಗುವುದು.

ಇಡೀ ವಿಶ್ವವೇ ನಮ್ಮ ಕಡೆ ನೋಡುವಂತಹ ಅಪರಾಧಿಕ ಕೃತ್ಯ ಹಾಸನದಲ್ಲಿ ನಡೆದಿದೆ. ಮೊದಲು ಪ್ರಕರಣವನ್ನು ಸಿಐಡಿಗೆ ವಹಿಸಿ ನಂತರ ವಿಶೇಷ ತನಿಖಾ ದಳ (ಎಸ್‌ಐಟಿ) ರಚನೆ ಮಾಡಿದ್ದೇವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಇಬ್ಬರು ಮಹಿಳೆಯರು ದೂರು ನೀಡಿದ್ದಾರೆ. ಅವರ ದೂರಿನ ಅನ್ವಯ 41(ಎ) ಅಡಿ ನೋಟಿಸ್ ಜಾರಿ ಮಾಡಲಾಗಿದೆ.

ನೋಟಿಸ್ ನೀಡಿದ 24 ಗಂಟೆಯೊಳಗಾಗಿ ವಿಚಾರಣೆಗೆ ಒಳಗಾಗಬೇಕು. ಇಲ್ಲದಿದ್ದರೆ ಪೊಲೀಸರು ಕಾನೂನು ರೀತಿ ಮುಂದುವರೆಯುತ್ತಾರೆ. ಅವರು ಸಮಯ ●9ನೇ ಪುಟಕ್ಕೆ

ರಾಜ್ಯದಲ್ಲಿ ಎರಡನೇ ಹಂತದ ಚುನಾವಣೆ ಮುಗಿದ ನಂತರವಷ್ಟೇ ಪ್ರಜ್ವಲ್ ರಾಜ್ಯಕ್ಕೆ ಮರಳುವ ಸಾಧ್ಯತೆ

● ಮೇ 13 ತಾವಿರುವ ದೇಶದಿಂದ ಸ್ವದೇಶದತ್ತ ಪ್ರಯಾಣ ● ಇದಾದ 2 ದಿನಗಳ ನಂತರ ಎಸ್‌ಐಟಿ ಮುಂದೆ ಹಾಜರಾಗಲು ನಿರ್ಧಾರ

ಬೆಂಗಳೂರು, ಮೇ 2(ಕೆಎಂಶಿ)–ಕರ್ನಾಟಕದಲ್ಲಿ ನಡೆಯುತ್ತಿರುವ ಎರಡನೇ ಹಂತದ ಲೋಕಸಭಾ ಚುನಾವಣಾ ಮತದಾನ ಪ್ರಕ್ರಿಯೆ ಮುಗಿದ ನಂತರ ಪ್ರಜ್ವಲ್ ರೇವಣ್ಣ ರಾಜ್ಯಕ್ಕೆ ಹಿಂತಿರುಗಲಿದ್ದಾರೆ. ಸಾಕಷ್ಟು ಮಹಿಳೆಯರ ಮೇಲಿನ ಲೈಂಗಿಕ ಶೋಷಣೆ ಆರೋಪ ಹೊತ್ತಿರುವ ಪ್ರಜ್ವಲ್ ಅವರನ್ನು ಎಸ್‌ಐಟಿ ವಶಕ್ಕೆ ಪಡೆಯಲು ಕಸರತ್ತು ನಡೆಸಿದೆ. ಅಲ್ಲದೆ



ರಾಜ್ಯ ಸರ್ಕಾರ ಅವರ ವಿರುದ್ಧ ಲುಕ್‌ಔಟ್ ನೋಟಿಸ್ ಹೊರಡಿಸಿದೆ. ಅವರ ನಿಗದಿತ ಕಾರ್ಯಕ್ರಮದಂತೆ ಮೇ 4ರಂದು ರಾಜ್ಯಕ್ಕೆ ಹಿಂತಿರುಗಿ ಅಂದೇ ಎಸ್‌ಐಟಿ ಮುಂದೆ ಹಾಜರಾಗುವ ಉದ್ದೇಶ ಹೊಂದಿದ್ದರು. ಹಾಸನ ಪ್ರಕರಣವನ್ನು ಆಡಳಿತಾರೂಢ ಕಾಂಗ್ರೆಸ್ ಮತ್ತಿತರರು ರಾಜಕೀಯವಾಗಿ ಬಳಸಿಕೊಂಡು ಚುನಾವಣಾ ●9ನೇ ಪುಟಕ್ಕೆ

ಪದವೀಧರ, ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ನ ಆರು ಸ್ಥಾನಕ್ಕೆ ಜೂ.3ರಂದು ಚುನಾವಣೆ

●ಜೂ.6ರಂದು ಮತ ಎಣಿಕೆ ●ಮೇ 9ರಂದು ಅಧಿಸೂಚನೆ ಜಾರಿ ●ಮೇ 16 ನಾಮಪತ್ರ ಸಲ್ಲಿಕೆಗೆ ಕಡೇ ದಿನ; ಮೇ 17 ಪರಿಶೀಲನೆ, ಮೇ 20 ಹಿಂಪಡೆಯಲು ಕಡೇ ದಿನ

ಬೆಂಗಳೂರು, ಮೇ 2(ಕೆಎಂಶಿ)– ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದಿಂದ ತೆರವಾಗುವ ವಿಧಾನ ಪರಿಷತ್ತಿನ ಆರು ಸ್ಥಾನಗಳಿಗೆ ಕೇಂದ್ರ ಚುನಾವಣಾ ಆಯೋಗ ಚುನಾವಣಾ ವೇಳಾಪಟ್ಟಿ ಹೊರಡಿಸಿದೆ.

ಶಿಕ್ಷಕರ ಕ್ಷೇತ್ರದಿಂದ ಡಾ.ವೈ.ಎ. ನಾರಾಯಣಸ್ವಾಮಿ, ಎಸ್.ಎಲ್.ಬೋಜೇಗೌಡ, ಮರಿತಿಬ್ಬೇಗೌಡ, ಪದವೀಧರ ಕ್ಷೇತ್ರದಿಂದ ಡಾ.ಚಂದ್ರಶೇಖರ ಬಿ. ಪಾಟೀಲ್, ಆಯನೂರು ಮಂಜುನಾಥ್ ಹಾಗೂ ಎ.ದೇವೇಗೌಡ ಅವರ ಸದಸ್ಯಾವಧಿ 2024ರ ಜೂ.21ಕ್ಕೆ ಅಂತ್ಯಗೊಳ್ಳಲಿದೆ.


ರಾಜಕೀಯ ಕಾರಣಗಳಿಗಾಗಿ ಮರಿತಿಬ್ಬೇಗೌಡ ಹಾಗೂ ಆಯನೂರು ಮಂಜುನಾಥ್ ಈಗಾಗಲೇ ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಕರ್ನಾಟಕ ದಕ್ಷಿಣ, ಆಗ್ನೇಯ, ನೈಋತ್ಯ ಶಿಕ್ಷಕರ ಕ್ಷೇತ್ರ, ಬೆಂಗಳೂರು, ಈಶಾನ್ಯ, ನೈಋತ್ಯ ಪದವೀಧರ ಕ್ಷೇತ್ರಗಳಿಗೆ ಜೂನ್ 3ರಂದು ಮತದಾನ ನಡೆಯಲಿದೆ. ಜೂನ್ 6ರಂದು ಮತ ಎಣಿಕೆ ಆಯಾ ಕ್ಷೇತ್ರದ ಕೇಂದ್ರ ಸ್ಥಾನಗಳಲ್ಲಿ ನಡೆದು, ಫಲಿತಾಂಶ ಪ್ರಕಟವಾಗಲಿದೆ. ಈ ಆರು ಕ್ಷೇತ್ರಗಳಿಗೆ ಮೇ 9ರಂದು ಅಧಿಸೂಚನೆ ಹೊರಡಿಸಲಿದ್ದು, ಅಂದೇ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭವಾಗಲಿದೆ, ಮೇ 16 ನಾಮಪತ್ರ ಸಲ್ಲಿಕೆಗೆ ಕಡೇ ದಿನವಾಗಿದೆ. 17ರಂದು ನಾಮಪತ್ರ ಪರಿಶೀಲನೆ, ನಾಮಪತ್ರ ಹಿಂತೆಗೆದುಕೊಳ್ಳಲು ಮೇ 20 ಕಡೆಯ ದಿನವಾಗಿರುತ್ತದೆ. ಕಳೆದ ಚುನಾವಣೆಯಲ್ಲಿ ಬಿಜೆಪಿ ಮೂರರಲ್ಲೂ, ಜೆಡಿಎಸ್ ಎರಡರಲ್ಲೂ, ಕಾಂಗ್ರೆಸ್ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿತ್ತು. ●9ನೇ ಪುಟಕ್ಕೆ

ಸ್ಯಾಂಟ್ರೋ ರವಿಗೆ ಮೈಸೂರು ಕೋರ್ಟ್‌ನಿಂದ ಜಾಮೀನು

ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆ

ಮೈಸೂರು, ಮೇ 2–ವೇಶ್ಯಾವಾಟಿಕೆ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿ ಜೈಲಿನಲ್ಲಿದ್ದ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿಗೆ ಮೈಸೂರಿನ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜಾಮೀನು ನೀಡಿದ ಹಿನ್ನೆಲೆಯಲ್ಲಿ ಆತ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆ ಹೊಂದಿದ್ದಾನೆ.

ಪರಿಶಿಷ್ಟ ಜಾತಿಗೆ ಸೇರಿದ ಸಂತ್ರಸ್ತ ಮಹಿಳೆ ನೀಡಿದ ದೂರಿನ ಹಿನ್ನೆಲೆಯಲ್ಲಿ ಸ್ಯಾಂಟ್ರೋ ರವಿ ವಿರುದ್ಧ ಭಾರತೀಯ ದಂಡ ಸಂಹಿತೆ 376, 498 ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ



ದಾಖಲಾಗಿ, ಸಿಐಡಿ ಅಧಿಕಾರಿಗಳು ಈತನನ್ನು 2023ರ ಜ.13ರಂದು ಗುಜರಾತ್‌ನಲ್ಲಿ ಬಂಧಿಸಿದ್ದರು. ಅಂದಿನಿಂದಲೂ ಈತ ಜೈಲಿನಲ್ಲೇ ಇದ್ದಾನೆ. ತನಿಖೆ ಮುಕ್ತಾಯಗೊಳಿಸಿರುವ ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನೂ ಕೂಡ ಸಲ್ಲಿಸಿದ್ದಾರೆ.

ಜಾಮೀನಿಗಾಗಿ ಈ ಹಿಂದೆ ಈತ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್‌ನಲ್ಲಿ ತಿರಸ್ಕೃತಗೊಂಡಿತ್ತು. ಸುಪ್ರೀಂಕೋರ್ಟ್‌ನಲ್ಲಿ ಜಾಮೀನಿಗಾಗಿ ಸಲ್ಲಿಸಿದ್ದ ಅರ್ಜಿಯನ್ನು ಈತನ ವಕೀಲರೇ ಹಿಂಪಡೆದಿದ್ದರು. ಈ ನಡುವೆ ಸ್ಯಾಂಟ್ರೋ ರವಿ ಅನಾರೋಗ್ಯ ಪೀಡಿತನಾಗಿದ್ದು, ಆರೋಗ್ಯದ ದೃಷ್ಟಿಯಿಂದ ಆತನಿಗೆ ಜಾಮೀನು ನೀಡಬೇಕೆಂದು ಹೈಕೋರ್ಟ್ ಹಿರಿಯ ವಕೀಲ ರವೀಂದ್ರ ಕಾಮತ್, ಮೈಸೂರಿನ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ●9ನೇ ಪುಟಕ್ಕೆ




ಗರಿಷ್ಠ ತಾಪಮಾನದ ಹಿಂದೆಯೇ ಜನರ ಕಾಡುತ್ತಿದೆ ಬಿಸಿ ಗಾಳಿ; ಮೈಸೂರು, ಮಂಡ್ಯ ಸೇರಿ 8 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್



●ಗರಿಷ್ಠ ತಾಪಮಾನವಿರುವ ರಾಜ್ಯದ 5 ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ●ಮೈಸೂರಿನಲ್ಲಿ 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲು ●ಇನ್ನು 4 ದಿನ ಶಾಖದ ಅಲೆ ಹೆಚ್ಚಾಗುವ ಸಾಧ್ಯತೆ ● ಬಿಸಿಲಿನ ಝಳಕ್ಕೆ ತತ್ತರಿಸಿರುವ ಜನರು





ಮೈಸೂರು, ಮೇ 2 (ಬಿಎಲ್‌ಯು)–ದಿನ ಕಳೆದಂತೆ ಬೇಸಿಗೆ ಬಿಸಿಲಿನ ತಾಪ ಹೆಚ್ಚಾಗುತ್ತಿದ್ದು, ಬಿಸಿಲಿನ ಝಳಕ್ಕೆ ಜನರು ಹೈರಾಣಾಗುತ್ತಿದ್ದಾರೆ. ಉತ್ತರ ಕರ್ನಾಟಕದ 6 ಜಿಲ್ಲೆಗಳಲ್ಲಿ ತೀವ್ರ ಶಾಖಾಘಾತದ ಕಾರಣ ರೆಡ್ ಅಲರ್ಟ್ ಘೋಷಿಸಿರುವ ಭಾರತೀಯ ಹವಾಮಾನ ಇಲಾಖೆ, ಮೈಸೂರು, ಮಂಡ್ಯ ಸೇರಿದಂತೆ ಕರ್ನಾಟಕದ 8 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಿದೆ. ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಜಿಲ್ಲೆಗಳಲ್ಲಿ ತೀವ್ರ ಶಾಖದ ಅಲೆಯ ಪರಿಸ್ಥಿತಿ ಇದೆ.

ಈ ಹಿನ್ನೆಲೆ ಸದರಿ ಜಿಲ್ಲೆಗಳಲ್ಲಿ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಮೈಸೂರು, ಮಂಡ್ಯ, ಕಲಬುರಗಿ, ಚಿತ್ರದುರ್ಗ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಯಾದಗಿರಿ ಜಿಲ್ಲೆಗಳಲ್ಲಿ ಶಾಖದ ಅಲೆಗಳು ಹೆಚ್ಚಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಆರೆಂಜ್ ಅಲರ್ಟ್ ಘೋಷಣೆ ಮಾಡಿದೆ. ಕರ್ನಾಟಕದಲ್ಲಿ ಇನ್ನು ನಾಲ್ಕು ದಿನ ಬಿಸಿ ಗಾಳಿ ಅಥವಾ ಶಾಖದ ಅಲೆಗಳ ಪರಿಸ್ಥಿತಿ ಹೆಚ್ಚಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯ ವಿಜ್ಞಾನಿ ಸಿ.ಎಸ್.ಪಾಟೀಲ್ ಎಚ್ಚರಿಸಿದ್ದಾರೆ. ಭಾರತೀಯ ●9ನೇ ಪುಟಕ್ಕೆ



ತಾಪಾಘಾತದಿಂದ ಪಾರಾಗುವುದು ಹೇಗೆ?

ಬಿಸಿಲಿನ ತಾಪ ಹೆಚ್ಚಾದ ಸಂದರ್ಭದಲ್ಲಿ ತಾಪಾಘಾತಕ್ಕೆ ಒಳಗಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಭಾರತೀಯ ಹವಾಮಾನ ಇಲಾಖೆ ಕೆಲವು ಸಲಹೆಗಳನ್ನು ನೀಡಿದೆ.

ವಿಶೇಷವಾಗಿ ಮಧ್ಯಾಹ್ನ 12 ರಿಂದ 3 ಗಂಟೆ ತನಕ ಬಿಸಿಲಿನಲ್ಲಿ ಓಡಾಡಬಾರದು, ಹೆಚ್ಚಾಗಿ ಬಾಯಾರಿಕೆ ಇಲ್ಲದಿದ್ದರೂ ಸಾಕಷ್ಟು ನೀರು ಕುಡಿಯಬೇಕು, ಸಾಧ್ಯವಾದಷ್ಟು ಹಗುರವಾದ, ತಿಳಿ ಬಣ್ಣದ, ಸಡಿಲವಾದ ಹಾಗೂ ರಂಧ್ರವಿರುವ ಹತ್ತಿ ಬಟ್ಟೆಗಳನ್ನು ಬಳಸಬೇಕು ಎಂದು ಹವಾಮಾನ ಇಲಾಖೆ ತಿಳಿಸಿದೆ. ಹೊರಗೆ ಶ್ರಮದಾಯಕ ಚಟುವಟಿಕೆ ಮಾಡಬಾರದು, ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ, ಮತ್ತು ಕಾರ್ಬೋನೈಟೆಡ್ ತಂಪು ಪಾನಿಯ ಸೇವಿಸಬಾರದು ಎಂದು ಹೇಳಿದೆ. ತಾಪ ಹೆಚ್ಚಾಗಿರುವ ಸಮಯದಲ್ಲಿ ಹೆಚ್ಚಿನ ಪ್ರೋಟಿನ್‌ಯುಕ್ತ ಆಹಾರ ಹಾಗೂ ತಂಗಳ ಆಹಾರ ಸೇವಿಸಬಾರದು. ಹೊರಗೆ ಓಡಾಡುವಾಗ ಟೋಪಿ ಅಥವಾ ಛತ್ರಿ ಬಳಸಬೇಕು, ಮೂರ್ಛೆ ಆತಂಕ ಅಥವಾ ಅನಾರೋಗ್ಯದ ಲಕ್ಷಣಗಳು ಕಂಡು ಬಂದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು, ಓಆರ್‌ಎಸ್, ಲಸ್ಸಿ, ನಿಂಬೆ ನೀರು, ಮಜ್ಜಿಗೆ ಸೇವಿಸಬೇಕು. ಬಿಸಿಲಿನ ತಾಪದ ದುಷ್ಪರಿಣಾಮದಿಂದ ಪಾರಾಗುವ ಹಲವು ಸಲಹೆಗಳನ್ನು ಹವಾಮಾನ ಇಲಾಖೆ ನೀಡಿದೆ. ಎಲ್ಲಾ ವಯಸ್ಸಿನವರಲ್ಲಿ ಶಾಖಾಘಾತದ ಖಾಯಿಲೆ ಬರುವ ಮುನ್ನೆಚ್ಚರಿಕೆ ವಹಿಸಬೇಕು. ಅದರಲ್ಲೂ ದೈಹಿಕವಾಗಿ ದುರ್ಬಲರಾಗಿರುವ ವ್ಯಕ್ತಿಗಳ ವಿಚಾರದಲ್ಲಿ ತೀವ್ರ ಕಾಳಜಿ ವಹಿಸಬೇಕು ಎಂದು ಹವಾಮಾನ ಇಲಾಖೆ ಸಲಹೆ ನೀಡಿದೆ.





ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಾಘವೇಂದ್ರ ಯಡಿಯೂರಪ್ಪ ಅವರ ಪರ ಶಿವಮೊಗ್ಗ ನಗರದಲ್ಲಿ ಮತಯಾಚನೆ ಮಾಡಲಾಯಿತು. ಈ ವೇಳೆ ಮಾಜಿ ಶಾಸಕರೂ ಆದ ಚಾಮರಾಜನಗರ ಮೀಸಲು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್, ಬಿಜೆಪಿ ಹಿರಿಯ ಮುಖಂಡರಾದ ಗುರುಪಾದಸ್ವಾಮಿ, ಮೈಸೂರು ನಗರ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಬಿಜೆಪಿ ಜಿಲ್ಲಾ ಮುಖಂಡರಾದ ಎನ್.ಎಸ್.ರಾಜೇಂದ್ರ ಹಾಗೂ ದೂರ ರಾಜಣ್ಣ ಇನ್ನಿತರರಿದ್ದರು.

ಮಾಸ್ ರೇಪಿಸ್ಟ್‌ಗೆ ದೇಶ ತೊರೆಯಲು ಅನುಕೂಲ ಮಾಡಿಕೊಡುವುದೇ ಮೋದಿ ಗ್ಯಾರಂಟಿ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ

ಶಿವಮೊಗ್ಗ, ಮೇ 2– ಬಿಜೆಪಿಯವರು ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧರಾಗಿದ್ದಾರೆ. ಭ್ರಷ್ಟ ರಾಜಕಾರಣಿಗಳು, ಅತ್ಯಾಚಾರಿಗಳೇ ಆಗಿದ್ದರೂ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ. ಒಬ್ಬ ಸಾಮೂಹಿಕ ಅತ್ಯಾಚಾರಿಗೆ ದೇಶ ತೊರೆಯಲು ಅನುಕೂಲ ಮಾಡಿಕೊಡುವುದೇ ಪ್ರಧಾನಿ ಮೋದಿಯವರ ಗ್ಯಾರಂಟಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.



ನಗರದ ಅಲ್ಲಮಪ್ರಭು ಮೈದಾನದಲ್ಲಿ ಇಂದು ನಡೆದ ಲೋಕಸಭೆ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಜ್ವಲ್ ರೇವಣ್ಣ 400 ಮಹಿಳೆಯರ ಮೇಲೆ ಅತ್ಯಾಚಾರ ಎಸಗಿ, ವಿಡಿಯೋ ಮಾಡಿದ್ದಾರೆ. ಇದು ಕೇವಲ ಲೈಂಗಿಕ ಹಗರಣವಲ್ಲ. ಇದನ್ನು ಮಾಸ್ ರೇಪ್ ಎನ್ನುತ್ತಾರೆ. ಕರ್ನಾಟಕದ ಜನತೆಯ ಮುಂದೆ ಪ್ರಧಾನಿ ಮೋದಿ ವೇದಿಕೆ ಮೇಲೆಯೇ ಈ ಮಾಸ್ ರೇಪಿಸ್ಟ್ ಅನ್ನು ಬೆಂಬಲಿಸಿದ್ದಾರೆ. ಅಷ್ಟೇ ಅಲ್ಲ, ಪ್ರಜ್ವಲ್ ರೇವಣ್ಣಗೆ ಮತ ನೀಡಿದರೆ, ನನಗೆ ನೆರವಾಗುತ್ತದೆ ಎಂದು ಕರ್ನಾಟಕದ ಜನತೆಗೆ ಹೇಳಿದ್ದಾರೆ. ಪ್ರಧಾನಿ ಯಾವಾಗ ನಿಮ್ಮಿಂದ (ಜನತೆ) ಮತ ಕೇಳುತ್ತಿದ್ದರೋ, ಆಗ ಅವರಿಗೆ ಪ್ರಜ್ವಲ್ ರೇವಣ್ಣ ಏನು ಮಾಡಿದ್ದರು ಎಂಬುದು ಅವರಿಗೆ ಗೊತ್ತಿತ್ತು. ಇದನ್ನು ಕರ್ನಾಟಕದ ಮಹಿಳೆಯರು, ಜನತೆ ಅರ್ಥ ಮಾಡಿಕೊಳ್ಳಬೇಕು ಎಂದರು.

ದೇಶದ ಮಹಿಳೆಯರಲ್ಲಿ ಮೋದಿ, ಅಮಿತ್ ಶಾ ಕ್ಷಮೆ ಕೇಳಲಿ: ಬಿಜೆಪಿ ಮತ್ತು ಬಿಜೆಪಿಯ ಪ್ರತಿಯೊಬ್ಬ ನಾಯಕರಿಗೂ ಪ್ರಜ್ವಲ್ ಒಬ್ಬ ಮಾಸ್ ರೇಪಿಸ್ಟ್ ಎಂಬುದು ಗೊತ್ತಿತ್ತು. ಇದಾದ ಮೇಲೂ ಪ್ರಜ್ವಲ್‌ಗೆ ಸಹಕಾರ ನೀಡಿ, ಅವರ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ. ಹೀಗಾಗಿ ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ದೇಶದ ಪ್ರತಿ ಮಹಿಳೆಯರಲ್ಲೂ ಕ್ಷಮೆ ಕೇಳಬೇಕು ಎಂದು ವಾಗ್ದಾಳಿ ನಡೆಸಿದರು.

ಕೆಲವು ದಿನಗಳ ಹಿಂದೆ ಬಿಜೆಪಿ ಅಧ್ಯಕ್ಷರು ಸಮಾನತೆ ಬೇಕೆನ್ನುವವರು ನಕ್ಸಲರು ಎಂದು ಕರೆದಿದ್ದರು. ಈ ಮೂಲಕ ಇಡೀ ದೇಶದ ಮುಂದೆ ಸಂವಿಧಾನದ ಮೇಲೆ ಮತ್ತೊಮ್ಮೆ ದಾಳಿ ಮಾಡಿದ್ದಾರೆ. ಬಿಜೆಪಿ ಅಧ್ಯಕ್ಷರು ಸಮಾನತೆ ಬೇಡ ಅಂತಿದ್ದರೆ, ಮೋದಿ ಸಂವಿಧಾನ ಉಳಿಸುವ ಬಗ್ಗೆ ಮಾತನಾಡುತ್ತಿದ್ದಾರೆ. ಬಿಜೆಪಿಯುವರು ಸಂವಿಧಾನ ತಿರುಚುವ ಉದ್ದೇಶ ಹೊಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

22 ಜನರಿಗಷ್ಟೇ ಮೋದಿ ಕೆಲಸ: ಕಳೆದ ಹತ್ತು ವರ್ಷಗಳಿಂದ ಕೇವಲ 22 ಜನರಿಗಾಗಿ ಮಾತ್ರ ಮೋದಿ ಕೆಲಸ ಮಾಡಿದ್ದಾರೆ. ದೇಶದ ಸಂಪತ್ತು ಅದಾನಿ, ಅಂಬಾನಿಯವರ ಜೇಬು ಸೇರಿದೆ. ಈ 22 ಜನರ 16 ಲಕ್ಷ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದ್ದಾರೆ. ಮೋದಿ 22 ಜನ ಶ್ರೀಮಂತರಿಗೆ ಕೆಲಸ ಮಾಡಿದ್ದರೆ, ನಾವು ಈ ದೇಶದ ಕೋಟ್ಯಾಂತರ ಜನರಿಗಾಗಿ ಕೆಲಸ ಮಾಡುತ್ತೇವೆ ಎಂದು ರಾಹುಲ್ ತಿಳಿಸಿದರು.

ಮೇ 5ರಂದು ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ

ವ್ಯಂಗ್ಯಚಿತ್ರ, ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನ

ಮೈಸೂರು, ಮೇ2–ಕರ್ನಾಟಕ ವ್ಯಂಗ್ಯ ಚಿತ್ರಕಾರರ ಸಂಘ, ಬೆಂಗಳೂರು ಪ್ರೆಸ್ ಕ್ಲಬ್ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಮೇ 5ರಂದು ಸಂಜೆ 5ಕ್ಕೆ ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ವ್ಯಂಗ್ಯ ಚಿತ್ರಕಾರ ಹಾಗೂ ಫುಲ್‌ಬ್ರೈಟರ್ ಎಂ.ವಿ. ನಾಗೇಂದ್ರ ಬಾಬು ರಚಿಸಿರುವ ವ್ಯಂಗ್ಯಚಿತ್ರ, ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನವನ್ನು ರಾಮಾನುಜ ರಸ್ತೆಯಲ್ಲಿರುವ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಏರ್ಪಡಿಸಲಾಗಿದೆ.

ಪ್ರದರ್ಶನವನ್ನು ಪ್ರಮತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಹೆಚ್.ವಿ.ರಾಜೀವ್ ಉದ್ಘಾಟಿಸುವರು. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಮುಖ್ಯ ಅತಿಥಿಗಳಾಗಿ ಶಿಲ್ಪ ಕಲಾವಿದ ಎಲ್.ಶಿವಲಿಂಗಪ್ಪ ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷ ವಿ.ಆರ್.ಸಿ. ಶೇಖರ್, ಕಲಾ ಪೋಷಕ ಡಾ.ಕೆ. ರಘುರಾಂ ವಾಜಪೇಯಿ, ಯೋಗ ವಿತ್ ಶ್ರೀನಾಥ್ ಸಂಸ್ಥಾಪಕ ಶ್ರೀನಾಥ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಭಾಗವಹಿಸಲಿದ್ದಾರೆ. ಈ ಪ್ರದರ್ಶನವನ್ನು ಮೇ 6ರವರೆಗೆ ಬೆಳಗ್ಗೆ 11ರಿಂದ ಸಂಜೆ 6ರವರೆಗೆ ವೀಕ್ಷಿಸಬಹುದು.



ನಾಗೇಂದ್ರ ಬಾಬು

ಜನಸೇವಕ ಯುವ ಬ್ರಿಗೇಡ್‌ನಿಂದ ಗಿಡ ನೆಟ್ಟು ಕಾರ್ಮಿಕರ ದಿನಾಚರಣೆ



ಜನಸೇವಕ ಯುವ ಬ್ರಿಗೇಡ್ ವತಿಯಿಂದ ಅರವಿಂದನಗರದಲ್ಲಿ ಕಾರ್ಮಿಕರ ದಿನಾಚರಣೆ ಅಂಗವಾಗಿ ವಿವಿಧ ಜಾತಿಯ ಗಿಡ ನೆಡಲಾಯಿತು.

ಮೈಸೂರು, ಮೇ 2– ಜನಸೇವಕ ಯುವ ಬ್ರಿಗೇಡ್ ವತಿಯಿಂದ ಅರವಿಂದ ನಗರದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆ ಅಂಗವಾಗಿ ವಿವಿಧ ಜಾತಿಯ ಗಿಡ ನೆಟ್ಟು ಹಾಗೂ ಸಿಹಿ ವಿತರಿಸಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಂತರ ಮಾತನಾಡಿದ ಜನಸೇವಕ ಯುವ ಬ್ರಿಗೇಡ್ ಪ್ರಧಾನ ಕಾರ್ಯದರ್ಶಿ ಮಹೇಶ್‌ಕುಮಾರ್, ಶ್ರಮ ಸಂಸ್ಕೃತಿಯ ಪ್ರತಿನಿಧಿಗಳಾಗಿ, ಹಗಲಿರುಳು ಕಷ್ಟಪಟ್ಟು ದುಡಿಯುವ ಕಾರ್ಮಿಕರು ದೇಶದ ಅಭಿವೃದ್ಧಿಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಾರೆ. ಸುಂದರ ಸಮಾಜ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರ ಮಹತ್ವದಾಗಿದೆ. ಕಾರ್ಮಿಕರಿಗೆ ಗೌರವಯುತ ಬದುಕು ಕಟ್ಟಿಕೊಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು. ಅಧ್ಯಕ್ಷ ರಾಘವೇಂದ್ರ, ಬಿಜೆಪಿ ಮುಖಂಡರಾದ ನಂಜುಂಡಸ್ವಾಮಿ, ಶಿವಕುಮಾರ್, ಮೋಹನ್, ಕುಮಾರ್, ನಿಹಾಲ್, ಬಾಲಾಜಿ ನಾಯಕ್ ಇದ್ದರು.



2023–24ನೇ ಸಾಲಿನ ದಕ್ಷಿಣ ವಲಯ ಅಂತರ ವಿವಿ ಪುರುಷರ ಹ್ಯಾಂಡ್‌ಬಾಲ್ ಪಂದ್ಯಾವಳಿಯು ಮೇ 2ರಿಂದ 6ರವರೆಗೆ ಕೊಟ್ಟಾಯಂನ ಮಹಾತ್ಮ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಸದರಿ ಪಂದ್ಯಾವಳಿಗೆ ಮೈಸೂರು ವಿವಿಯ ಪುರುಷರ ಹ್ಯಾಂಡ್‌ಬಾಲ್ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ ತಂಡದ (ನಿಂತಿರುವವರು: ಎಡದಿಂದ ಬಲ): ಕಾರ್ತಿಕ್, ಮನು, ಮಹಿರ್ ಅರಸ್, ರವಿಕುಮಾರ್, ದರ್ಶನ್, ದುಷ್ಯಂತ್‌ರಾಜ್, ಪ್ರೇಮ್‌ರಾಜ್, ಶಶಾಂಕ್, ಮಹಾದೇವ ಪ್ರಸಾದ್, ಪ್ರಜ್ವಲ್, ಶ್ರೇಯಾಸ್ (ಕುಳಿತಿರುವವರು): ಸಂಜಯ (ನಾಯಕ), ಕಾರ್ತಿಕ್, ವ್ಯವಸ್ಥಾಪಕರು, ಡಾ.ಸಿ.ವೆಂಕಟೇಶ್, ನಿರ್ದೇಶಕರು, ರಘುಚಂದ್ರ (ತರಬೇತುದಾರರು)

ಮೈಸೂರಿನ ಪುರಭವನದಲ್ಲಿ ವಿವಿಧ ಸಂಘಟನೆಗಳಿಂದ ಕಾರ್ಮಿಕರ ದಿನಾಚರಣೆ

ಮೂಲ ಸೌಲಭ್ಯಕ್ಕಾಗಿ ಕಾರ್ಮಿಕರ ಸಂಘಟಿತ ಹೋರಾಟ ಅನಿವಾರ್ಯ

ಸಿಐಟಿಯು ಜಿಲ್ಲಾಧ್ಯಕ್ಷ ಜಯರಾಂ ಅಭಿಮತ





ಮೈಸೂರಿನ ಪುರಭವನದಲ್ಲಿ ಕಾರ್ಮಿಕ ಸಂಘಟನೆಗಳ ವತಿಯಿಂದ ಬುಧವಾರ ಆಯೋಜಿಸಿದ್ದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಿಐಟಿಯು ಜಿಲ್ಲಾ ಘಟಕ ಅಧ್ಯಕ್ಷ ಜೆ.ಜಯರಾಂ ಮಾತನಾಡಿದರು. (ಬಲಚಿತ್ರ) ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿವಿಧ ಕಾರ್ಖಾನೆಗಳ ನೌಕರರು.

ಮೈಸೂರು,ಮೇ2(ಎಂಟಿವೈ)–ಕಾರ್ಮಿಕರಿಗೆ ಆರೋಗ್ಯ, ಶಿಕ್ಷಣ, ಸೇವಾ ಭದ್ರತೆ ಹಾಗೂ ಉತ್ತಮ ಆಹಾರ ಸೇರಿದಂತೆ ಸುಸ್ಥಿರವಾಗಿ ಬದುಕಲು ಅಗತ್ಯ ಮೂಲಸೌಲಭ್ಯ ಪಡೆಯಲು ಕಾರ್ಮಿಕರು ಸಂಘಟಿತರಾಗಿ ಹೋರಾಟ ಮಾಡುವ ಅನಿವಾರ್ಯತೆ ಇದೆ ಎಂದು ಸಿಐಟಿಯು ಜಿಲ್ಲಾ ಘಟಕ ಅಧ್ಯಕ್ಷ ಜೆ.ಜಯರಾಂ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪುರಭವನದಲ್ಲಿ ಕಾರ್ಮಿಕ ಸಂಘಟನೆಗಳಾದ ಎಐಟಿಯುಸಿ, ಎಐಯುಟಿಯುಸಿ, ಎಐಸಿಸಿಟಿಯು ಜಂಟಿ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಇಂದಿಗೂ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಕಾರ್ಮಿಕ ದಿನಾಚರಣೆ ಸಂದರ್ಭದಲ್ಲಿ ನಾವು ಕಾರ್ಮಿಕರ ಸ್ಥಿತಿಗತಿ ಅವಲೋಕನ ಮಾಡಬೇಕು. ಕಾರ್ಮಿಕರನ್ನು ಸಂಕಷ್ಟಕ್ಕೆ ದೂಡುತ್ತಿರುವ ಸಂಗತಿಗಳ ನಿವಾರಣೆಗೆ ಕ್ರಮ ಕೈಗೊಳ್ಳಬೇಕು. ಎಲ್ಲರಿಗೂ ಮನೆ, ಶಿಕ್ಷಣ, ಆರೋಗ್ಯ ಇರಬೇಕು. ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಪಣತೊಡಬೇಕು ಎಂದು ಹೇಳಿದರು.

56 ಇಂಚಿನ ಎದೆ, ವಿಶ್ವಗುರು ಎಂದು ಹೊಗಳಿಸಿಕೊಳ್ಳುವ ಪ್ರಧಾನಿ ನರೇಂದ್ರ ಮೋದಿ ಕಾರ್ಮಿಕರ ದಿನಗೂಲಿಯನ್ನು 176 ರೂ.ಗೆ ನಿಗದಿ ಮಾಡುತ್ತಾರೆ. ಸಂವೇದನೆ ಇಲ್ಲದವರಿಂದ ಮಾತ್ರ ಇಂತಹ ನಿರ್ಧಾರ ಸಾಧ್ಯ. ದೆಹಲಿಯಲ್ಲಿ ಶಿಕ್ಷಣ ಹಾಗೂ ಸಮಾಜಕ್ಕಾಗಿ ಉತ್ತಮ ಕೆಲಸ ಮಾಡಿದ್ದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜೈಲಿಗೆ ಹಾಕಲಾಗಿದೆ. ಇಂತಹ ಸರ್ವಾಧಿಕಾರ ಧೋರಣೆಯನ್ನು ಕಾಂಗ್ರೆಸ್ ಕಾಲದಲ್ಲೂ ವಿರೋಧಿಸಿದ್ದೇವೆ. ಇಂದು ಒಗ್ಗಟ್ಟಾಗಿ ವಿರೋಧಿಸುತ್ತೇವೆ ಎಂದು ತಿಳಿಸಿದರು.

ಕಾರ್ಮಿಕ ಸಂಘಟನೆಗಳ ಮುಖಂಡ ಶೇಷಾದ್ರಿ ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಮೇ ದಿನಾಚರಣೆ ಸಂಭ್ರಮ ಕಾಣುತ್ತಿಲ್ಲ. ಸಾಂಕೇತಿಕವಾಗಿ ಉಳಿದುಕೊಂಡು ಹೋಗುತ್ತಿದ್ದು, ಇಂತಹ ಪರಿಸ್ಥಿತಿ ಮುಂದಿನ ದಿನಗಳನ್ನು ನೋಡಿದಾಗ ಆತಂಕವೂ ಉಂಟಾಗುತ್ತದೆ. ಸರ್ಕಾರ ಕಾನೂನು ಬದಲಾವಣೆ ಮಾಡಿ, ಕಾರ್ಪೋರೇಟ್ ಪರವಾಗಿ ಕೆಲಸ ಮಾಡುತ್ತಿದೆಯೇ ಹೊರತು ಕಾರ್ಮಿಕರ ಪರವಾಗಿ ಯಾವುದೇ ಕೆಲಸವನ್ನೂ ಮಾಡುತ್ತಿಲ್ಲ. ಹುದ್ದೆಯಲ್ಲಿ ಕಾಯಂ ಕಾರ್ಮಿಕರ ಸಂಖ್ಯೆ ಕಡಿಮೆ ಆಗುತ್ತಿದ್ದು, ತಾತ್ಕಾಲಿಕ ನೌಕರರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದನ್ನು ಅಭಿವೃದ್ಧಿ ಎನ್ನಬೇಕೇ? ದೆಹಲಿಯಲ್ಲಿ ನಡೆದ ರೈತರ ಹೋರಾಟವು ಈ ಶತಮಾನ ಕಂಡ ಅದ್ಭುತ ಹೋರಾಟ. ಆದರೆ ಇವತ್ತಿಗೂ ಹೋರಾಟಕ್ಕೆ ಪರಿಹಾರ ದೊರಕಿಸಿಕೊಟ್ಟಿಲ್ಲ. ಅದಾನಿ, ಅಂಬಾನಿ ಆಸ್ತಿ ಹೆಚ್ಚು ಮಾಡಿಕೊಂಡಿದ್ದಾರೆ. ಆದರೆ, ಬಡತನದ ಬೇಗೆಯಿಂದ ಬಳಲುತ್ತಿರುವವರ ಸಂಖ್ಯೆಯೂ ಬೆಳೆಯುತ್ತಾ ಇದೆ. ಕೋವಿಡ್ ಸಂದರ್ಭದಲ್ಲಿ ಲಕ್ಷಾಂತರ ಸಣ್ಣ ಉದ್ಯಮ ಮುಚ್ಚಿಹೋಯಿತು. ಇವತ್ತಿಗೂ ಅವು ಮತ್ತೆ ತೆರೆದು ಚಟುವಟಿಕೆ ಪ್ರಾರಂಭಿಸಿಲ್ಲ. ಹಾಗಾದರೆ ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಜೀವನದ ಕಥೆ ಏನು ಎಂಬುದನ್ನು ನಾವು ಮನನ ಮಾಡಿಕೊಳ್ಳಬೇಕು ಎಂದರು.

ಕಾರ್ಮಿಕ ಮುಖಂಡ ಚಂದ್ರಶೇಖರ ಮೇಟಿ ಮಾತನಾಡಿ, ಬಂಡವಾಳಶಾಹಿಗಳು ತಮ್ಮ ಸಂಸ್ಕೃತಿಯನ್ನು ಕಾರ್ಮಿಕ ವರ್ಗದ ಮೇಲೆ ಹೇರಲು ಯಶಸ್ವಿಯಾಗಿದ್ದಾರೆ. ಇದನ್ನು ವಿಮುಕ್ತಿ ಮಾಡಬೇಕು. ಬಂಡವಾಳಶಾಹಿಗಳು ಇರುವುದೇ ಶೋಷಣೆ ಮಾಡಲು, ಇದಕ್ಕೆ ವಿರುದ್ಧವಾಗಿ ಕಾರ್ಮಿಕ ಸಂಘಟನೆಗಳು ಸಾಂಸ್ಕೃತಿಕ ಹೋರಾಟಗಳನ್ನು ಕಟ್ಟಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಸಂಚಾಲಕ ಎನ್.ಕೆ. ದೇವದಾಸ್, ಸಂಘಟನೆಗಳ ಮುಖಂಡರಾದ ಯಶೋಧರ್, ಅಣ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಕೃಷ್ಣಧಾಮದಲ್ಲಿ ಉಚಿತ ಸಾಮೂಹಿಕ ಉಪನಯನ

ವೇದ ಮಂತ್ರಗಳು ವ್ಯಕ್ತಿ ಜೀವನದ ಸಮಗ್ರ ಚಿತ್ರವನ್ನು ನೀಡಬಲ್ಲವು: ರವಿ ಶಾಸ್ತ್ರಿ

ಮೈಸೂರು, ಮೇ 2– ನಗರದ ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ಟಿ.ಕೆ ಲೇಔಟ್‌ನಲ್ಲಿರುವ ಶ್ರೀ ಕೃಷ್ಣದಾಮದಲ್ಲಿ ಉಚಿತ ಸಾಮೂಹಿಕ ಉಪನಯನ ನಡೆಯಿತು.

ಬೆಳಗ್ಗೆ 6 ಗಂಟೆಗೆ ಪ್ರಾರಂಭವಾಗಿ 10:15 ಗಂಟೆಗೆ ಬ್ರಹ್ಮೋಪದೇಶ ನೆರವೇರಿಸಲಾಯಿತು. ನಂತರ ವಟುಗಳಿಂದ ಶೋಭಾಯಾತ್ರೆ ಮತ್ತು ಅಶ್ವತ್ಥ ಪೂಜೆ ನೆರವೇರಿಸಲಾಯಿತು. ಉಪನಯನ ಉದ್ದೇಶಿಸಿ ಮಾತನಾಡಿದ ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ, ತ್ರಿಮತಸ್ಥ ವಿಪ್ರ ಸಮುದಾಯದವರ ಅನುಕೂಲಕ್ಕಾಗಿ ಹಲವಾರು ವರ್ಷಗಳಿಂದ ಈ ಉಚಿತ ಉಪನಯನ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ವೇದವೆಂದರೆ ಜ್ಞಾನ, ಸಂಸ್ಕೃತಿ, ಪರಂಪರೆಗೆ ಸಾಕ್ಷಿ. ಭಾರತ ಮಾತ್ರವಲ್ಲ; ವಿಶ್ವಮಟ್ಟದಲ್ಲೂ ಮಾನ್ಯತೆ ಗಳಿಸಿದೆ. ವೇದ ಮಂತ್ರಗಳು ವ್ಯಕ್ತಿ ಜೀವನದ ಸಮಗ್ರ ಚಿತ್ರವನ್ನು ನೀಡಬಲ್ಲವು ಎಂದು ಹೇಳಿದರು.

ವಿದ್ವಾನ್ ಸುರೇಶ್ ಭಟ್ ನೂತನ ವಟುಗಳಿಗೆ ಮಾರ್ಗದರ್ಶನ ನೀಡಿ, ಉಪನಯನದ ಮಹತ್ವ ತಿಳಿಸಿಕೊಟ್ಟರು. ಆನಂತರ ವಟುಗಳಿಗೆ ಮತ್ತು ಪೋಷಕರಿಗೆ ಪ್ರಸಾದ ವಿತರಿಸಲಾಯಿತು. ಪಿ.ಎಸ್.ಶೇಖರ್, ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಪಿ.ಎಸ್.ರಮೇಶ್, ಶ್ರೀವತ್ಸ ರಾವ್, ರಾಘವೇಂದ್ರ ಪ್ರಸಾದ್, ಶ್ರೀ ಕೃಷ್ಣ ಮಿತ್ರ ಮಂಡಳಿ ಉಪಾಧ್ಯಕ್ಷ ಪ್ರವೀಣ್, ಶ್ರೀ ಕೃಷ್ಣ ಟ್ರಸ್ಟ್ ಕಾರ್ಯದರ್ಶಿ ಕೆ.ವಿ.ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.



ಸೈನಿಕ್ ಅಕಾಡೆಮಿಯಿಂದ ವಿಶ್ವ ಕಾರ್ಮಿಕರ ದಿನಾಚರಣೆ



ಸ್ವಚ್ಛತಾ ಕಾರ್ಯ, ಸ್ವಚ್ಛತಾ ಕಾರ್ಮಿಕರಿಗೆ ಸನ್ಮಾನ

ಮೈಸೂರು, ಮೇ 2– ವಿಶ್ವ ಕಾರ್ಮಿಕರ ದಿನಾಚರಣೆಯ ಅಂಗವಾಗಿ ಸೈನಿಕ್ ಅಕಾಡೆಮಿ ವತಿಯಿಂದ ಹೂಟಗಳ್ಳಿ ಮತ್ತು ಬೆಳವಾಡಿಯಲ್ಲಿ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳುವುದರ ಜೊತೆಗೆ, ಪ್ರಾಮಾಣಿಕ ಮತ್ತು ಶ್ರಮಜೀವಿಗಳು ಎಂದು ಹೂಟಗಳ್ಳಿ ನಗರಸಭೆಯಿಂದ ಗುರುತಿಸಿರುವ ಮೂವರು ಪೌರಕಾರ್ಮಿಕರಾದ ಮಹದೇವ್. ಆರ್, ಕಮಲಮ್ಮ ಮತ್ತು ಅಶೋಕ ಅವರನ್ನು ಸನ್ಮಾನಿಸಲಾಯಿತು. ಬಳಿಕ ಮಾತನಾಡಿದ ಸೈನಿಕ ಅಕಾಡೆಮಿ ಸಂಸ್ಥಾಪಕ ಮಾಜಿ ಕಮಾಂಡೋ ಸಿ.ಎಂ.ಶ್ರೀಧರ್, ಒಬ್ಬ ಕಸಗುಡಿಸುವ ವ್ಯಕ್ತಿಯಿಂದ ಹಿಡಿದು ದೊಡ್ಡ ಮಟ್ಟದ ಅಧಿಕಾರಿಗಳ ತನಕ ಒಬ್ಬ ಕಾರ್ಮಿಕನಾಗಿರುತ್ತಾನೆ. ಕಾರ್ಮಿಕರಿಲ್ಲದೆ ಯಾವುದೇ ಅಭಿವೃದ್ಧಿ, ಬೆಳವಣಿಗೆ ಇರುವುದಿಲ್ಲ, ಎಲ್ಲಾ ಕಾರ್ಮಿಕರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ಅದರಲ್ಲೂ ಈ ತರಹ ವರ್ಷವಿಡೀ ಸ್ವಚ್ಛಗೊಳಿಸುವ ಪೌರಕಾರ್ಮಿಕರನ್ನೂ ಗೌರವಿಸಬೇಕು ಎಂದರು. ಈ ಸಂದರ್ಭದಲ್ಲಿ ಸಹ ಸಂಸ್ಥಾಪಕಿ ಅನಿತಾ ಶ್ರೀಧರ್, ಅಧ್ಯಾಪಕರಾದ ಕೆ.ವಿಜಯ್‌ಕುಮಾರ್, ಸುನೀತಾ, ಹೂಟಗಳ್ಳಿ ನಗರಸಭೆ ಹೆಲ್ತ್ ಇನ್ಸ್‌ಪೆಕ್ಟರ್ ಅನಿಶ್, ಸಿಬ್ಬಂದಿ, ಪೌರಕಾರ್ಮಿಕರು, ಸೈನಿಕ ಅಕಾಡೆಮಿ ಸಿಬ್ಬಂದಿ ವರ್ಗ ಮತ್ತಿತರರಿದ್ದರು.

ಆನಂದ ಅನುಭೂತಿ ಶಿಬಿರ


ಮೈಸೂರು,ಮೇ 2–ಮೈಸೂರಿನ ಆರ್ಟ್ ಆಫ್ ಲಿವಿಂಗ್ ವತಿಯಿಂದ ಮೇ 7ರಿಂದ 12ರವರೆಗೆ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮ, ವಿಜಯನಗರ 3ನೇ ಹಂತದ ಧ್ಯಾನ ಸುಧಾ ಮತ್ತು ನಳಪಾಕ್ ಹೋಟೆಲ್ ಪಕ್ಕ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30, 11ರಿಂದ 1.30, 3ರಿಂದ 5.30 ಮತ್ತು ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9886186580, 9008043065 ಸಂಪರ್ಕಿಸಿ.

ನೇಮಕ



ಮೈಸೂರು: ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರನ್ನಾಗಿ ಉದಯಗಿರಿಯ ಮುನೇಶ್ವರನಗರ ನಿವಾಸಿ ಸಿ. ವಿಜಯ್ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.05.2024 ಶುಕ್ರವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಥೈರಾಯಿಡ್ ಗ್ರಂಥಿ ವ್ಯಾಧಿಗಳ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ:** ತೊದಲುವಿಕೆಯ ಬಗೆಗಿನ ಇತ್ತೀಚಿನ ಚಿಕಿತ್ಸೆಯ ವಿಧಾನಗಳಲ್ಲಿನ ಪ್ರಗತಿಗಳು ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಉನ್ನತ ಶಿಕ್ಷಣ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ, ಆಯಿಷ್ ಪ್ರಾಧ್ಯಾಪಕ ಎಂ.ಸಂತೋಷ್, ಅಧ್ಯಕ್ಷತೆ : ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ಪ್ರಿನ್ಸಿಪಾಲ್ ಡಾ.ಆರ್.ಸುಮಾ, ಸ್ಥಳ: ಶ್ರೀ ರಾಜೇಂದ್ರ ಭವನ, ಎಂ.ಜಿ. ರಸ್ತೆ, ಬೆಳಗ್ಗೆ 9.30ಕ್ಕೆ

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ :** ಒಂದು ದಿನದ ರಾಜ್ಯ ಮಟ್ಟದ ಸರಣಿ ಉಪನ್ಯಾಸ, ಉದ್ಘಾಟನೆ : ಡಾ. ನರಸಿಂಹ ಕೌಲ್‌ಗುಡ್, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಉಪಸ್ಥಿತರು : ಉಪ ಪ್ರಿನ್ಸಿಪಾಲ್ ಶ್ರೀಮತಿ ಎನ್. ಭಾರತಿ, ಶ್ರೀಮತಿ ಕೆ.ಎಸ್. ಸುಕೃತ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ನರ್ಸಿಂಗ್‌ನ 27ನೇ ಬ್ಯಾಚ್ ವಿದ್ಯಾರ್ಥಿಗಳ ಸಮರ್ಪಣಾ ಸಮಾರಂಭ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಮುಖ್ಯ ಅತಿಥಿಗಳು: ಮೇಜರ್ ಜನರಲ್ (ನಿವೃತ್ತ) ಎಲಿಜಬೆತ್ ಜಾನ್, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ನರ್ಸಿಂಗ್ ಸರ್ವೀಸಸ್ ಚೀಫ್ ಜಾನೆಟ್ ಮೆಥಾಯ್ಸ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತ ವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಹೆಚ್.ಎಂ. ನಂದಿನಿ, ಮುಖ್ಯಸ್ಥರು, ಮಾಹಿತಿ ತಂತ್ರಜ್ಞಾನ ಅಧ್ಯಯನ ಹಾಗೂ ಸಂಶೋಧನಾ ವಿಭಾಗ. ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಮ್ಮ ಆರೋಗ್ಯ, 10.00 ಶಾಸ್ತ್ರೀಯ ಸಂಗೀತ–ಕೆ.ಪಿ.ನಾರಾಯಣ ಮತ್ತು ಸಂಗಡಿಗರಿಂದ–ನಾಗಸ್ವರ, 11.00 ಮಿತ್ರ ಮಾಧುರ್ಯ ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ, 1.00 ಚಿತ್ರಗೀತೆಗಳು, 1.20 ಭಾವಗೀತೆ, 1.30 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿ.ಶ್ರೀಕಾಂತ್ ವಯೋಲಿನ್ ವಾದನ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ ಹಾಗೂ ಅವರ ಶ್ರೀಮತಿ ತಾರಿಣಿ ಚಿದಾನಂದಗೌಡ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಹೆಚ್.ಎಂ.ನಂದಿನಿ, ಮುಖ್ಯಸ್ಥರು, ಮಾಹಿತಿ ತಂತ್ರಜ್ಞಾನ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಪ್ರಸ್ತುತಿ–ಎನ್.ಕೇಶವಮೂರ್ತಿ, 6.55 ಕೃಷಿ ರಂಗ–ನಾಟಕ 'ನಿರ್ಧಾರ', ರಚನೆ–ಡಾ.ಹೆಚ್.ಎ.ಉಪೇಂದ್ರ, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ್, ಕೃಷಿಲೋಕ, ಪ್ರಸ್ತುತಿ–ಆರ್.ಲೋಕೇಶ್ವರಿ, 8.00 ವಿಜ್ಞಾನ ಭಾರತಿ–ಚರ್ಚೆ– 'ಪರಿಸರ ಸಂರಕ್ಷಣೆ ಹಾಗೂ ವೈಜ್ಞಾನಿಕ ಮನೋಭಾವ'–ಭಾಗವಹಿಸಿದ್ದಾರೆ–ವನ್ಯಜೀವಿ ಚಲನಚಿತ್ರ ನಿರ್ಮಾಪಕರಾದ ಕೃಪಕರ ಹಾಗೂ ಸೇನಾನಿ. ಜಿ.ಶಾಂತಕುಮಾರ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ನಿಲಯದ ಕಲಾವಿದರಿಂದ ವಾದ್ಯವೃಂದ, 10.00 ಜನಪದ ಸಂಗೀತ–ದೊಡ್ಡರಾಚಪ್ಪ ಮತ್ತು ಸಂಗಡಿಗರಿಂದ, 10.30 ಸವಿನೆನಪು

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಶ್ರೀ ಶಂಕರಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ರಂಗಾಯಣ :** ಚಿಣ್ಣರ ನಾಟಕೋತ್ಸವ, ತಂಡ–1, ಕಿತ್ತಳೆ ಕೆಂಪು ಹೂ, ರಚನೆ : ಸಫ್ದರ್ ಹಶ್ಮಿ, ಅನುವಾದ : ನಟರಾಜ್ ಹೊನ್ನವಳ್ಳಿ, ಸಹ ನಿರ್ದೇಶನ : ಶ್ರೀವತ್ಸ, ಕೀರ್ತನ್ ಸೋಮಣ್ಣ, ನಿರ್ದೇಶನ : ರೇಖಾ, ತಂಡ–8, ಪಪ್ಪಾಯ ಕುಂಭಕರ್ಣನೆಬ್ಬಿಸಿ, ರಚನೆ : ಕುವೆಂಪು, ಸಹ ನಿರ್ದೇಶನ : ಚರಿತ್, ಆನಂದ ಸುಲದಾಳ, ನಿರ್ದೇಶನ : ರವಿ ಅಥರ್ವ, ಸ್ಥಳ: ವನರಂಗ, ಸಂಜೆ 6.30ಕ್ಕೆ.

■ **ಶ್ರೀ ಪ್ರಸನ್ನ ಸುಂದರ ರಾಮಮಂದಿರ ಸೇವಾ ಸಮಿತಿ ಟ್ರಸ್ಟ್ :** ಶ್ರೀ ಕ್ರೋಧಿನಾಮ ಸಂವತ್ಸರ 88ನೇ ವರ್ಷದ ಶ್ರೀರಾಮೋತ್ಸವ, ಬೆಳಗ್ಗೆ ಅರುಣ ಪೂರ್ವಕ ಸೂರ್ಯ ನಮಸ್ಕಾರ, ಶ್ರೀ ಮದ್ರಾಮಾಯಣ ಪಾರಾಯಣ, ವೇದೋಕ್ತ, ಅಭಿಷೇಕ, ಶ್ರೀ ಸೀತಾ, ಶ್ರೀರಾಮ ಸಹಸ್ರನಾಮ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಗೀತ ವಿದ್ವಾಂಸರುಗಳಿಂದ ತ್ಯಾಗರಾಜರ ಪಂಚರತ್ನ ಕೃತಿ ಹಾಗೂ ಗೋಷ್ಠಿ ಗಾಯನ, ಸ್ಥಳ: ಶ್ರೀರಾಮಮಂದಿರ, ಜಯನಗರ.

ಮೈಸೂರು ಮಿತ್ರ

ಶುಕ್ರವಾರ 3 ಮೇ 2024

ರಾಮಲಲ್ಲಾನ ದರ್ಶನ ಪಡೆದ ರಾಷ್ಟ್ರಪತಿ ದ್ರೌಪದಿ ಮುರ್ಮು!



ಅಯೋಧ್ಯೆ, ಮೇ 2–ರಾಮ ಮಂದಿರ ಉದ್ಘಾಟನೆ ಬಳಿಕ ಮೊದಲ ಬಾರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ರಾಮಲಲ್ಲಾನ ದರ್ಶನ ಪಡೆದಿದ್ದಾರೆ. ರಾಮಲಲ್ಲಾನ ದರ್ಶನದ ನಂತರ ಸಂಜೆಯ ಆರತಿಯಲ್ಲಿಯೂ ಪಾಲ್ಗೊಂಡರು.

ಅಲ್ಲದೆ ಮುರ್ಮು ಅವರು ದೇವಾಲಯದ ಒಳಗೆ ಸಾಕಷ್ಟು ಸಮಯ ಧ್ಯಾನಾಸಕ್ತರಾಗಿದ್ದರು. ಇದಕ್ಕೂ ಮೊದಲು, ಹನುಮಾನ್ ಗರ್ಹಿಯ ದರ್ಶನದ ಜೊತೆಗೆ, ಅವರು ಸರಯೂ ದಡದಲ್ಲಿ ಆರತಿಯನ್ನೂ ಮಾಡಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಅಯೋಧ್ಯಾಧಾಮ ತಲುಪಿ ಮೊದಲು ಹನುಮಾನ್ ಗರ್ಹಿಯಲ್ಲಿ ದರ್ಶನ ಮತ್ತು ಪೂಜೆ ಸಲ್ಲಿಸಿದರು. ಇಲ್ಲಿ ಅರ್ಚಕ ರಾಜು ದಾಸ್ ಅವರಿಗೆ ಬೆಳ್ಳಿ ಗದೆ, ಬೆಳ್ಳಿ ರಾಮ್ ದರ್ಬಾರ್ ಮತ್ತು ಹಸುವಿನ ಪ್ರತಿಕೃತಿಯನ್ನು ನೀಡಿದರು. ಹನುಮಂತನಗರಕ್ಕೆ ಭೇಟಿ ನೀಡಿದ ನಂತರ ರಾಷ್ಟ್ರಪತಿಗಳು ಸರಯೂ ಘಾಟ್‌ನ ಆರತಿ ಸ್ಥಳಕ್ಕೆ ತಲುಪಿದರು. ಅಲ್ಲಿ ಅವರು ಮಹಾ ಆರತಿಯಲ್ಲಿ ಭಾಗವಹಿಸಿದ್ದರು. ಸರಯೂ ಘಾಟ್‌ನ ಸುತ್ತಲೂ ವೇದಮಂತ್ರಗಳ ಪ್ರತಿಧ್ವನಿಗಳು ಕೇಳಿಬರುತ್ತಿವೆ. ರಾಷ್ಟ್ರಪತಿಯವರೊಂದಿಗೆ ರಾಜ್ಯಪಾಲ ಆನಂದಿ ಬೆನ್ ಪಟೇಲ್ ಮತ್ತು ಯುಪಿ ಸರ್ಕಾರದ ಸಚಿವ ಸೂರ್ಯ ಪ್ರತಾಪ್ ಶಾಹಿ ಉಪಸ್ಥಿತರಿದ್ದರು.



ಕಾರ್ಮಿಕರ ದಿನಾಚರಣೆ ಅಂಗವಾಗಿ ಕುಂಬಾರಕೊಪ್ಪಲಿನ ವಾರ್ಡ್ ನಂ. 5ರಲ್ಲಿ ಪೌರಕಾರ್ಮಿಕರಿಗೆ ಜೆಡಿಎಸ್ ವಾರ್ಡ್ ಅಧ್ಯಕ್ಷರಾದ ವಿ.ಶರತ್ (ಶಿವಪ್ರಸಾದ್) ಅವರು ಉಡುಗೊರೆ ನೀಡಿ ಗೌರವಿಸಿದರು. ಈ ವೇಳೆ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಜಯರಾಮಣ್ಣ, ಕುಂಬಾರಕೊಪ್ಪಲಿನ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ಕೇಸರ್‌ಗಂಜ್ ಕ್ಷೇತ್ರದಿಂದ ಬ್ರಿಜ್ ಭೂಷಣ್ ಪುತ್ರನಿಗೆ ಬಿಜೆಪಿ ಟಿಕೆಟ್



ನವದೆಹಲಿ, ಮೇ 2– ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಹಾಲಿ ಸಂಸದ ಮತ್ತು ಮಾಜಿ ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರಿಗೆ ಬಿಜೆಪಿ ಈ ಬಾರಿ ಟಿಕೆಟ್ ನಿರಾಕರಿಸಿದ್ದು, ಉತ್ತರ ಪ್ರದೇಶದ ಕೇಸರ್ ಗಂಜ್ ಕ್ಷೇತ್ರದಿಂದ ಅವರ ಪುತ್ರ ಕರಣ್ ಭೂಷಣ್ ಸಿಂಗ್ ಅವರನ್ನು ಕಣಕ್ಕಿಳಿಸಿದೆ ಎಂದು ಮೂಲಗಳು ತಿಳಿಸಿವೆ.

ಐದನೇ ಹಂತದಲ್ಲಿ ಮೇ 20 ರಂದು ಕೇಸರ್‌ಗಂಜ್ ಕ್ಷೇತ್ರದಲ್ಲಿ ಮತದಾನ ನಡೆಯಲಿದ್ದು, ಮೇ 3 ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ.

ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರಿಗೆ ಟಿಕೆಟ್ ನಿರಾಕರಿಸಲಾಗುತ್ತಿದೆ. ಆದರೆ ಕೇಸರ್‌ಗಂಜ್ ಕ್ಷೇತ್ರದಿಂದ ಆರು ಬಾರಿ ಸಂಸದರಾಗಿರುವ ಠಾಕೂರ್ ನಾಯಕನ ಕುಟುಂಬದಲ್ಲಿ ಒಬ್ಬರಿಗೆ ಕೇಸರಿ ಪಕ್ಷ ಟಿಕೆಟ್ ನೀಡಲು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಬ್ರಿಜ್ ಭೂಷಣ್ ಶರಣ್ ಅವರ ಕಿರಿಯ ಪುತ್ರ ಹಾಗೂ ಉತ್ತರ ಪ್ರದೇಶ ಕುಸ್ತಿ ಫೆಡರೇಷನ್‌ನ ಅಧ್ಯಕ್ಷ ಕರಣ್ ಭೂಷಣ್ ಶರಣ್ ಸಿಂಗ್ ಅವರಿಗೆ ಬಿಜೆಪಿ ಟಿಕೆಟ್ ನೀಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿಯವರು ಸತತ ಐದು ಬಾರಿ ಗೆದ್ದಿರುವ ಗಾಂಧಿ ಕುಟುಂಬದ ಭದ್ರಕೋಟೆಯಾದ ರಾಯ್‌ಬರೇಲಿಯಿಂದ ದಿನೇಶ್ ಪ್ರತಾಪ್ ಸಿಂಗ್ ಅವರನ್ನು ಬಿಜೆಪಿ ತನ್ನ ಅಭ್ಯರ್ಥಿ ಎಂದು ಘೋಷಿಸಿದೆ. ಕಾಂಗ್ರೆಸ್ ಇನ್ನೂ ಈ ಸ್ಥಾನಕ್ಕೆ ತನ್ನ ಅಭ್ಯರ್ಥಿಯನ್ನು ಘೋಷಿಸಿಲ್ಲ.

ರಾಜ್ಯದಲ್ಲಿ ಮೊದಲ ಹಂತದ ಲೋಕಸಭಾ ಚುನಾವಣೆ

ಪುರುಷರಿಗಿಂತ ಮಹಿಳೆಯರಿಂದಲೇ ಹೆಚ್ಚು ಮತದಾನ!

ಬೆಂಗಳೂರು, ಮೇ 2– ಏಪ್ರಿಲ್ 26 ರಂದು ರಾಜ್ಯದ 14 ಕ್ಷೇತ್ರಗಳಿಗೆ ನಡೆದ ಲೋಕಸಭೆ ಚುನಾವಣೆಯಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿದ್ದಾರೆ. ಮಹಿಳಾ ಮತದಾರರು ಹೆಚ್ಚಿನ ಪ್ರಮಾಣದಲ್ಲಿ ಮತ ಚಲಾಯಿಸುವ ಪ್ರವೃತ್ತಿ ಮುಂದುವರೆದಿದೆ. ಭಾರತದ ಚುನಾವಣಾ ಆಯೋಗವು ಹಂಚಿಕೊಂಡಿರುವ ಇತ್ತೀಚಿನ ಅಂಕಿಅಂಶಗಳ ಪ್ರಕಾರ, ಪುರುಷರ ಮತದಾನ ಶೇಕಡಾ 69.48 ಆಗಿದ್ದರೆ, ಮಹಿಳೆಯರು ಶೇ. 69.65 ರಷ್ಟು ಮತದಾನ ಮಾಡಿದ್ದಾರೆ. ಒಟ್ಟು 1,00,16,921 ಪುರುಷ ಮತದಾರರು,1,00,20,796 ಮಹಿಳೆಯರು ಮತದಾನ ಮಾಡಿದ್ದಾರೆ. ಅಂದರೆ 3,875 ಮತದಾರರ ವ್ಯತ್ಯಾಸ ವಿದೆ. ಅಲ್ಲದೆ, ಬೆಂಗಳೂರು ಉತ್ತರ, ಸೆಂಟ್ರಲ್, ದಕ್ಷಿಣ ಮತ್ತು ಗ್ರಾಮಾಂತರ ಹಾಗೂ ದಕ್ಷಿಣ ಕನ್ನಡದ ಎಲ್ಲಾ ಕ್ಷೇತ್ರಗಳಲ್ಲಿ ಹೆಚ್ಚಿನ ಮಹಿಳೆಯರು ಮತ ಚಲಾಯಿಸಿದ್ದಾರೆ. 2019 ರ ಮತದಾನದ ಸಮಯದಲ್ಲಿ, ಪುರುಷರ ಶೇಕಡಾವಾರು ಪ್ರಮಾಣವು ಮಹಿಳೆಯರಿಗಿಂತ ಸ್ವಲ್ಪ ಹೆಚ್ಚಾಗಿತ್ತು. ಶೇ. 69.55 ಪುರುಷರು ಮತ್ತು ಶೇ. 67.65 ರಷ್ಟು ಮಹಿಳೆಯರು ಮತದಾನ ಮಾಡಿದ್ದರು. 2014 ರಲ್ಲಿ, ಮತದಾನದ ಶೇಕಡಾವಾರು ಪ್ರಮಾಣವು ಕ್ರಮವಾಗಿ 68.59 ಮತ್ತು 65.79 ಆಗಿತ್ತು.

ತಾಯಿ–ಮಕ್ಕಳು ಸೇರಿ ನಾಲ್ವರು ನಾಪತ್ತೆ

ಮೈಸೂರು, ಮೇ 2–ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ತಾಯಿ–ಮಕ್ಕಳು ಸೇರಿದಂತೆ ನಾಲ್ವರು ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ.





ಈ ಠಾಣಾ ವ್ಯಾಪ್ತಿಯಲ್ಲಿ ವಾಸವಿರುವ ಶಿವಶಾಂತಿ(23) ಎಂಬುವರು ತಮ್ಮ ಮಕ್ಕಳಾದ ಪುನರ್ವಸು(6) ಮತ್ತು ಪುನರ್ವ (2.5) ಅವರೊಂದಿಗೆ ಏ.27ರಂದು ಮನೆಯಿಂದ ಹೊರ ಹೋದವರು ಈವರೆಗೆ ವಾಪಸ್ಸಾಗಿಲ್ಲ.

ಮತ್ತೊಂದು ಪ್ರಕರಣದಲ್ಲಿ ಯೋಹಾನ್(19) ಎಂಬುವರು ಏ.27ರಂದು ಮುಂಜಾನೆ ಮನೆಯಿಂದ ಹೊರ ಹೋದವರು ಈವರೆಗೆ ವಾಪಸ್ಸಾಗಿಲ್ಲ. ಇವರ ಬಗ್ಗೆ ಮಾಹಿತಿ ಇರುವವರು ನಜರ್‌ಬಾದ್ ಠಾಣೆ ದೂರವಾಣಿ ಸಂಖ್ಯೆ 0821–2418308 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 0821–2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.



ಮೈಸೂರು ಪಾಲಿಕೆಯಿಂದ ಜಾಗೃತಿ ಅಭಿಯಾನ

ನೀರು ಅಮೂಲ್ಯ; ಅಪವ್ಯಯ ಮಾಡದಿರಿ ಪ್ಲೀಸ್...!



ಮೈಸೂರು, ಮೇ 2(ಎಂಕೆ)– 'ಜೀವ ಜಲ ವ್ಯರ್ಥ ಮಾಡದಿರಿ', 'ನೀರಿನ ಮಿತ ಬಳಕೆ ಅವಶ್ಯ' ಎಂಬ ಜಾಗೃತಿ ಸಂದೇಶಗಳ ಪ್ರಚಾರ(ಜಿಂಗಲ್ಸ್)ದ ಮೂಲಕ ಮೈಸೂರು ನಗರದಾದ್ಯಂತ ನೀರಿನ ಮಿತ ಬಳಕೆ ಕುರಿತು ಅಭಿಯಾನ ನಡೆಸಲು ಮೈಸೂರು ನಗರಪಾಲಿಕೆ ಮುಂದಾಗಿದೆ.

ರಾಜ್ಯದಲ್ಲಿ ಆವರಿಸಿರುವ ಬರಗಾಲದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ನೀರು ಪೂರೈಕೆ ಮಾಡುವುದು ಹಾಗೂ ನೀರಿನ ಮಿತ ಬಳಕೆ ಕುರಿತು ಮೈಸೂರಿಗರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನಾಳೆ (ಮೇ 3)ಯಿಂದಲೇ ಕಸ ಸಂಗ್ರಹಣೆ ವಾಹನಗಳ ಮೂಲಕ ಪ್ರಚಾರ ಅಭಿಯಾನ ನಡೆಸಲು ನಿರ್ಧರಿಸಲಾಗಿದೆ.

ದಾನಿಗಳು ಸಹಕರಿಸಲು ಮನವಿ...



"ನಗರದ ಜನಸಂದಣಿ ಹೆಚ್ಚಾಗಿರುವ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆ ಮಾಡಲು ನಗರ ಪಾಲಿಕೆಯೊಂದಿಗೆ ದಾನಿಗಳು ಸಹಕರಿಸಬಹುದು. ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಹೆಚ್ಚಿನ ಜನರು ಸೇರುವ ಸ್ಥಳಗಳಲ್ಲಿ ದಾನಿಗಳು ಕುಡಿಯುವ ನೀರಿನ ವ್ಯವಸ್ಥೆ ಮಾಡಬಹುದು. ಸ್ವ ಇಚ್ಛೆಯಿಂದ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ದಾನಿಗಳಿಗೆ ಸ್ಥಳಾವಕಾಶ ನೀಡಲು ಪಾಲಿಕೆ ಸಹಕಾರ ನೀಡಲಿದೆ. –ಡಾ.ಎನ್.ಎನ್.ಮಧು, ಪಾಲಿಕೆ ಆಯುಕ್ತೆ

ಮನೆ ಮನೆಗೆ ಕಸ ಸಂಗ್ರಹಣೆಗೆ ತೆರಳುವ ವಾಹನಗಳಲ್ಲಿ ಪ್ರಚಾರವಾಗುವ ಕಸ ವಿಂಗಡಣೆ ಮಾಹಿತಿ ಜೊತೆಗೆ ನೀರಿನ ಮಿತಬಳಕೆ ಕುರಿತು ಪ್ರಚಾರ (ಜಿಂಗಲ್ಸ್–ರೆಕಾರ್ಡಿಂಗ್ ಪ್ರಚಾರ) ಮಾಡಲಾಗುವುದು. ಕಾರು–ಸ್ಕೂಟರ್ ಇನ್ನಿತರೆ ವಾಹನಗಳನ್ನು ಮನೆ ಮುಂದೆ ತೊಳೆಯುವುದು, ಅನವಶ್ಯಕವಾಗಿ ರಸ್ತೆಯಲ್ಲಿ ಹಾಗೂ ನಲ್ಲಿಗಳಲ್ಲಿ(ನಲ್ಲಿ ಬಂದ್ ಮಾಡದಿರುವುದು) ನೀರು ಹರಿಸುವುದು ಸೇರಿದಂತೆ ನೀರನ್ನು ವ್ಯರ್ಥಮಾಡುವ ವಿಷಯಗಳ ಬಗ್ಗೆ ತಿಳಿಸಿ, ಎಚ್ಚರಿಸುವ ಜೊತೆಗೆ ನೀರನ್ನು ಮಿತವಾಗಿ ಬಳಕೆ ಮಾಡಬೇಕು ಎಂದು ಜಾಗೃತಿ ಮೂಡಿಸಲಾಗುವುದು ಎಂದು ನಗರ ಪಾಲಿಕೆ ಆಯುಕ್ತರಾದ ಡಾ.ಎನ್.ಎನ್.ಮಧು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರಿನಲ್ಲಿ ಕುಡಿಯುವ ನೀರಿಗೆ ತೊಂದರೆ ಇಲ್ಲದಿದ್ದರೂ ಮುನ್ನೆಚ್ಚರಿಕಾ ಕ್ರಮವಾಗಿ ಜಾಗೃತಿ ಅಭಿಯಾನವನ್ನು ಕಟ್ಟುನಿಟ್ಟಾಗಿ ಹಮ್ಮಿಕೊಳ್ಳಲಾಗಿದೆ. ನೀರಿನ ಅಭಾವ ಇರುವ ಸ್ಥಳಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುವುದು. ಅನವಶ್ಯಕವಾಗಿ ನೀರನ್ನು ವ್ಯರ್ಥ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವುದು. ಬಿಸಿ ವಾತಾವರಣ ಇರುವುದರಿಂದ ಹೋಟೆಲ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡಿರುವಂತೆಯೂ ಹೋಟೆಲ್ ಮಾಲೀಕರಿಗೆ ಸೂಚಿಸಲಾಗಿದೆ ಎಂದರು. ನೀರಿನ ಪೈಪ್ ಮತ್ತು ನಲ್ಲಿಗಳಲ್ಲಿ ಲೀಕೇಜ್, ಯುಜಿಡಿಗೆ ಕುಡಿಯುವ ನೀರು ಹರಿಯುವುದು, ಆರ್‌ಓ ಕುಡಿಯುವ ನೀರಿನ ಘಟಕಗಳನ್ನು ಗಮನಿಸುವುದು ಸೇರಿದಂತೆ ಪಾಲಿಕೆಯ ಪ್ರತಿಯೊಂದು ವಾರ್ಡ್‌ನಲ್ಲಿಯೂ ನೀರಿನ ಪೂರೈಕೆ ಹಾಗೂ ಬಳಕೆ ಕುರಿತು ವೀಕ್ಷಣೆ ಮಾಡುವಂತೆ ಅಧಿಕಾರಿ, ಸಿಬ್ಬಂದಿಗಳಿಗೆ ಸೂಚಿಸಲಾಗಿದೆ. ಹಾಗೆಯೇ ನೀರಿನ ಬಾಕಿ ಶುಲ್ಕವನ್ನು ಕಟ್ಟಿಸಿಕೊಳ್ಳಲು ಕ್ರಮ ವಹಿಸುವಂತೆ ತಿಳಿಸಲಾಗಿದೆ ಎಂದು ಮಾಹಿತಿ ನೀಡಿದರು.



ಖಾಸಗಿ ಬೋರ್‌ವೆಲ್‌ಗಳ ಬಳಕೆ: ಪಾಲಿಕೆಯ 800 ಬೋರ್‌ವೆಲ್‌ಗಳ ಜೊತೆಗೆ ಖಾಸಗಿ ಬೋರ್‌ವೆಲ್‌ಗಳನ್ನು ಗುರ್ತಿಸಲಾಗಿದೆ. ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾದಲ್ಲಿ ಇಂತಹ ಬೋರ್‌ವೆಲ್‌ಗಳನ್ನು ಬಳಕೆ ಮಾಡಿಕೊಳ್ಳಲಾಗುವುದು. ಅನುಮತಿ ಇಲ್ಲದೆ ಬೋರ್‌ವೆಲ್ ತೆಗೆಸುವುದನ್ನು ಗಮನಿಸಿ, ಅನುಮತಿ ಇಲ್ಲದಿದ್ದರೆ ಕ್ರಮವಹಿಸುವಂತೆಯೂ ತಿಳಿಸಲಾಗಿದೆ ಎಂದರು.

ಆರೋಗ್ಯದ ಮೇಲೂ ಗಮನ: ಬೇಸಿಗೆಯಲ್ಲಿ ಕಾಲರಾ, ಡೆಂಗ್ಯೂ ಇನ್ನಿತರೆ ಕಾಯಿಲೆಗಳು ಬಾಧಿಸದಂತೆಯೂ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮೂರು ದಿನಕ್ಕೊಮ್ಮೆ ನಗರದೆಲ್ಲೆಡೆ ಸಂಜೆ ವೇಳೆ ಫಾಗಿಂಗ್(ಹೊಗೆ ಸಿಂಪಡಿಕೆ) ಮಾಡಿಸಲಾಗುವುದು ಎಂದು ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ಎನ್.ಬಿ. ವೆಂಕಟೇಶ್ ತಿಳಿಸಿದರು. ಖಾಸಗಿ ಹೋಟೆಲ್‌ಗಳಲ್ಲಿ ಸ್ವಚ್ಛತೆ ಜೊತೆಗೆ ಗ್ರಾಹಕರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆ ಹಾಗೂ ಶೌಚಾಲಯ ಒದಗಿಸುವಂತೆ ತಿಳಿಸಿದ್ದು, ನೀರಿನ ಕೊರತೆಯಾದಲ್ಲಿ ಕೂಡಲೇ ತಿಳಿಸುವಂತೆಯೂ ಹೇಳಲಾಗಿದೆ. ಒಂದೊಂದು ದಿನ ಒಂದೊಂದು ಏರಿಯಾದಲ್ಲಿ ಫಾಗಿಂಗ್ ಮಾಡಲಾಗುವುದು. ಮತಯಂತ್ರಗಳಿರುವ ಮಹಾರಾಣಿ ವಾಣಿಜ್ಯ ಕಾಲೇಜು ಆವರಣದಲ್ಲಿಯೂ ಮೂರು ದಿನಕ್ಕೊಮ್ಮೆ ಫಾಗಿಂಗ್ ಮಾಡಲಾಗುವುದು ಎಂದರು.

ನಾಳೆಯಿಂದಲೇ ಜಿಂಗಲ್ಸ್ ಪ್ರಚಾರ: ನೀರಿನ ಮಿತ ಬಳಕೆ ಕುರಿತು ಜಿಂಗಲ್ಸ್ ರೆಕಾರ್ಡಿಂಗ್ ಮುಗಿದಿದ್ದು, ನಾಳೆ(ಮೇ 3)ಯಿಂದಲೇ ನಗರದೆಲ್ಲೆಡೆ ಪ್ರಚಾರ ಮಾಡಲಾಗುವುದು. ನೀರಿನ ಬಳಕೆ ಜೊತೆಗೆ ಬಿಸಿ ವಾತಾವರಣದಲ್ಲಿ ಆರೋಗ್ಯದ ಕಡೆಗೂ ಗಮನ ಹರಿಸುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಮೈಸೂರಿನ ನಾಗರಿಕರು ಎಚ್ಚರಿಕೆಯಿಂದ ನೀರನ್ನು ಮಿತ ಬಳಕೆ ಮಾಡುವುದರ ಜೊತೆಗೆ ಮನೆ ಸುತ್ತಲೂ ಸ್ವಚ್ಛತೆ ಕಾಪಾಡಿಕೊಂಡು ಆರೋಗ್ಯ ಕಾಪಾಡಿಕೊಳ್ಳುವುದು ಅವಶ್ಯವಾಗಿದೆ.

ಬಾಮೈದ, ಅತ್ತೆ ಮೇಲೆ ಹಲ್ಲೆ; ಅಪರಾಧಿಗೆ ಏಳು ವರ್ಷ ಸಜೆ

ಮೈಸೂರು, ಮೇ 2– ಬಾಮೈದನ ಮದುವೆ ಹಿಂದಿನ ದಿನ ಆತನ ಹತ್ಯೆಗೆ ಯತ್ನಿಸಿ, ರಕ್ಷಣೆಗೆ ಧಾವಿಸಿದ ಅತ್ತೆ ಮೇಲೂ ಹಲ್ಲೆ ನಡೆಸಿದ್ದ ವ್ಯಕ್ತಿಗೆ, ಮೈಸೂರು 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ್ ಸೋಮಕ್ಕಳವರ್ 7 ವರ್ಷ ಶಿಕ್ಷೆ ವಿಧಿಸಿದ್ದಾರೆ.



ಹೆಚ್.ಡಿ.ಕೋಟೆ ತಾಲೂಕು ಹೆಬ್ಬಲ ಗುಪ್ಪೆ ಗ್ರಾಮದ ಎಂ.ಕೆಂಡಗಣ್ಣ ಎಂಬುವನಿಗೆ ಶಿಕ್ಷೆ ವಿಧಿಸಲಾಗಿದೆ. ಈತ ಒಂದೇ ಊರಿನ ತನುಜಾ ಅವರನ್ನು ವಿವಾಹವಾಗಿದ್ದ. ಮೂರ್‍ನಾಲ್ಕು ವರ್ಷ ದಂಪತಿ ಅನ್ಯೋನ್ಯವಾಗಿದ್ದರು. ತನುಜಾ ಗ್ರಾಮಲೆಕ್ಕಿಗ ಹುದ್ದೆಗೆ ಆಯ್ಕೆಯಾಗಿ ಮಧುಗಿರಿಗೆ ನಿಯೋಜನೆಗೊಂಡರು. ಆಗ ಕೆಂಡಗಣ್ಣ ನನಗೇ ಸಂಬಳ ನೀಡುವಂತೆ ದೈಹಿಕ ಹಾಗೂ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದ. ಈ ಬಗ್ಗೆ ತನುಜಾ ತವರು ಮನೆಯವರು ತಿಳುವಳಿಕೆ ಹೇಳಿದ್ದರು. ಆದರೆ ತನುಜಾ ಸಂಬಳವನ್ನು ತವರು ಮನೆಗೆ ಕೊಡುತ್ತಾರೆಂದು ತಿಳಿದು ಅವರ ತಾಯಿ ಹೇಮಾವತಿ ಹಾಗೂ ಸಹೋದರ ಮನೋಜ್ ಕುಮಾರ್ ಮೇಲೂ ದ್ವೇಷ ಬೆಳೆಸಿ ಕೊಂಡು, ನಿಮ್ಮನ್ನು ನೆಮ್ಮದಿಯಾಗಿರಲು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದ.

ಮನೋಜ್ ಹ್ಯಾಂಡ್‌ಪೋಸ್ಟ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಕಾರಣ ಯರಹಳ್ಳಿಯಲ್ಲಿ ಮನೆ ಮಾಡಿಕೊಂಡು ತಾಯಿಯೊಂದಿಗೆ ವಾಸವಿದ್ದ. ಈ ನಡುವೆ ಮನೋಜ್ ಅವರಿಗೆ ಮದುವೆ ನಿಶ್ಚಯವಾಗಿದ್ದರಿಂದ ಹಿರಿಯರಿಂದ ಕೆಂಡಗಣ್ಣಗೆ ಅನ್ಯೋನ್ಯವಾಗಿರುವಂತೆ ಬುದ್ಧಿವಾದ ಹೇಳಿಸಲಾಗಿತ್ತು. 2020ರ ಜನವರಿ 30ರಂದು ವಿವಾಹ ನಿಗದಿಯಾಗಿದ್ದು, 10 ದಿನ ಮುನ್ನವೇ ಕೆಂಡಗಣ್ಣ ಹಾಗೂ ತನುಜಾ ದಂಪತಿ ಬಂದು ಮದುವೆ ಸಿದ್ಧತೆ ಕಾರ್ಯದಲ್ಲಿ ಭಾಗಿಯಾಗಿದ್ದರು. ಜ.29ರಂದು ಮುಂಜಾನೆ 3.30ರ ಸುಮಾರಿಗೆ ಶೌಚಾಲಯಕ್ಕೆ ಹೋಗಿ ವಾಪಸ್ಸು ರೂಂಗೆ ತೆರಳುವಾಗ ಮಚ್ಚು ತೆಗೆದುಕೊಂಡು ಬಂದು ಹಾಲ್‌ನಲ್ಲಿ ಮಲಗಿದ್ದ ಬಾಮೈದ ಮನೋಜ್ ಮೇಲೆ ಹಲ್ಲೆ ಮಾಡಿದ್ದಾನೆ.

ಈ ವೇಳೆ ಅಲ್ಲಿಯೇ ಮಲಗಿದ್ದ ಅತ್ತೆ ಹೇಮಾವತಿ ಎಚ್ಚರಗೊಂಡು ಕಿರುಚುತ್ತಾ ಮಗನ ರಕ್ಷಣೆಗೆ ಧಾವಿಸಿದ್ದಾರೆ. ಆಗ ಕೆಂಡಗಣ್ಣ, ಅವರ ಕೈಗಳಿಗೂ ಮಚ್ಚಿನಿಂದ ಹೊಡೆದಿದ್ದಾನೆ. ಗಲಾಟೆಯಿಂದ ಎಚ್ಚರಗೊಂಡ ತನುಜಾ ಹಾಗೂ ಹಾಲ್‌ನಲ್ಲೇ ಮಲಗಿದ್ದ ಹೇಮಾವತಿಯವರ ವಾರಗಿತ್ತಿ ರತ್ನಮ್ಮ ರಕ್ಷಣೆಗೆ ಬಂದಿದ್ದಾರೆ. ಆಗ ಕೆಂಡಗಣ್ಣ ತನ್ನ ಪತ್ನಿ ತನುಜಾ ಮೇಲೂ ಹಲ್ಲೆಗೆ ಮುಂದಾದಾಗ ಆಕೆ ಮನೆಯಿಂದ ಹೊರಹೋಗಿ ಕಿರುಚಿಕೊಂಡಿದ್ದಾರೆ. ಆ ವೇಳೆ ನೆರೆ ಹೊರೆಯವರು ಓಡಿ ಬಂದು ಹೇಮಾವತಿ ಕುಟುಂಬವನ್ನು ರಕ್ಷಿಸಿದ್ದಾರೆ.

ಬಳಿಕ ಗಾಯಗೊಂಡಿದ್ದ ಮನೋಜ್ ಹಾಗೂ ಅವರ ತಾಯಿ ಹೇಮಾವತಿ ಅವರನ್ನು ತಾಲೂಕು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಬಳಿಕ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲೇ ಹೇಮಾವತಿ ಅವರಿಂದ ಹೇಳಿಕೆ ಪಡೆದ ಹೆಚ್.ಡಿ. ಕೋಟೆ ಪೊಲೀಸರು ಕೆಂಡಗಣ್ಣ ವಿರುದ್ಧ ಪ್ರಕರಣ ದಾಖಲಿಕೊಂಡಿದ್ದರು. ನಂತರ ವಿಚಾರಣೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರಾದ ಗುರುರಾಜ್ ಸೋಮಕ್ಕಳವರ್, ಕೆಂಡಗಣ್ಣ ವಿರುದ್ಧದ ಆರೋಪ ಸಾಬೀತಾಗಿದ್ದರಿಂದ ಆತನಿಗೆ 7 ವರ್ಷ ಜೈಲು ಶಿಕ್ಷೆ ಹಾಗೂ ಒಟ್ಟು 20 ಸಾವಿರ ರೂ. ದಂಡ ವಿಧಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಈ.ಯೋಗೇಶ್ವರ ವಾದ ಮಂಡಿಸಿದ್ದರು.

ಅಚ್ಚುಕಟ್ಟಾಗಿ ನೆರವೇರಿದ ಶ್ರೀನಿವಾಸಪ್ರಸಾದರ ಅಂತ್ಯಕ್ರಿಯೆ; ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಧನ್ಯವಾದ



ಮೈಸೂರು, ಮೇ 2– ಕಳೆದ ಸೋಮವಾರ ವಿಧಿವಶರಾದ ರಾಜಕೀಯ ಮುತ್ಸದ್ಧಿ ವಿ.ಶ್ರೀನಿವಾಸಪ್ರಸಾದ್ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡ ಎಲ್ಲರಿಗೂ ಅವರ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಅವರು ಧನ್ಯವಾದ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ನನ್ನ ಪತಿಯ ಅಂತ್ಯಸಂಸ್ಕಾರವನ್ನು ಸರ್ಕಾರಿ ಗೌರವಗಳೊಂದಿಗೆ ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟ ರಾಜ್ಯ ಸರ್ಕಾರ, ನಮ್ಮಿಂದ ಸಲಹೆ–ಸೂಚನೆಗಳನ್ನು ಪಡೆದು ಎಲ್ಲಾ ರೀತಿಯ ವ್ಯವಸ್ಥೆಗಳನ್ನೂ ಮಾಡಿ ನೆರವಾದ ಜಿಲ್ಲಾಡಳಿತ, ಎಲ್ಲಾ ಸರ್ಕಾರಿ ಅಧಿಕಾರಿಗಳ ವೃಂದ ಹಾಗೂ ಮಾಧ್ಯಮದವರಿಗೂ ಧನ್ಯವಾದ ಹೇಳಿದ್ದಾರೆ. ನನ್ನ ಪತಿ ಅನುಸರಿಸುತ್ತಿದ್ದ ಬೌದ್ಧ ಧರ್ಮದ ರೀತಿ–ನೀತಿಯಲ್ಲಿ ಅಂತಿಮ ಸಂಸ್ಕಾರ ನೆರವೇರಿಸಿದ ಬೌದ್ಧ ಗುರುಗಳಾದ ಮಹಾಬೋಧಿಯ ಆನಂದ್ ಭಂತೇಜಿ, ಡಾ. ಕಲ್ಯಾಣ ಸಿರಿ ಭಂತೇಜಿ ಹಾಗೂ ಬಿಕ್ಕುಗಳ ವೃಂದ, ನಮ್ಮ ದುಃಖದಲ್ಲಿ ಭಾಗಿಯಾಗಿ ನಮಗೆ ಸಾಂತ್ವನ ಹೇಳಿದ ಪತಿ ಶ್ರೀನಿವಾಸಪ್ರಸಾದ್ ಅವರ ಅಭಿಮಾನಿಗಳು ಹಾಗೂ ಹಿತೈಷಿಗಳಿಗೆ ನಮ್ಮ ಕುಟುಂಬದ ಪರವಾಗಿ ಧನ್ಯವಾದ ತಿಳಿಸುವುದಾಗಿ ಭಾಗ್ಯಲಕ್ಷ್ಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶ್ರೀಮತಿ ಭಾಗ್ಯಲಕ್ಷ್ಮಿ

ಇಂದು ಶ್ರೀನಿವಾಸ ಪ್ರಸಾದ್‌ರಿಗೆ ನುಡಿ ನಮನ

ಮೈಸೂರು, ಮೇ 2– ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಸಂಸದ ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ನುಡಿ ನಮನ ಕಾರ್ಯಕ್ರಮವನ್ನು ನಗರದ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಶುಕ್ರವಾರ ಸಂಜೆ 5 ಗಂಟೆಗೆ ಆಯೋಜಿಸಲಾಗಿದೆ. ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಬಿಜೆಪಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ರೇಣುಕಾ ರಾಜು, ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್, ಜೀವಧಾರ ರಕ್ತನಿಧಿಯ ನಿರ್ದೇಶಕ ಗಿರೀಶ್, ಚಿತ್ರನಟ ಸುಪ್ರೀತ್, ಮುಖಂಡ ದೊರೆಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ತಿಳಿಸಿದ್ದಾರೆ.

ಇಂದು ಶ್ರೀ ವಿಜಯ ಮಹಾ ಗಣಪತಿ ಸ್ವಾಮಿಯ ಬ್ರಹ್ಮ ರಥೋತ್ಸವ

ಮೈಸೂರು, ಮೇ 2– ಮೈಸೂರು ವಿಜಯನಗರ 3ನೇ ಹಂತದ ಎ–1 ಬ್ಲಾಕ್‌ನಲ್ಲಿ ಶ್ರೀ ವಿಜಯ ಮಹಾ ಗಣಪತಿ ಸ್ವಾಮಿಯ ಬ್ರಹ್ಮರಥೋತ್ಸವ ಶುಕ್ರವಾರ ಬೆಳಗ್ಗೆ 10.20ಕ್ಕೆ ಜರುಗಲಿದೆ.

ಬೆಳಗ್ಗೆ 7 ಗಂಟೆಯಿಂದಲೇ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದ ನಂತರ ರಥೋತ್ಸವ ಜರುಗಲಿದ್ದು, ಮಧ್ಯಾಹ್ನ 1ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ವಿಜಯ ಮಹಾಗಣಪತಿ ದೇವಸ್ಥಾನದ ಸಂಸ್ಥಾಪಕ ಅಧ್ಯಕ್ಷ ಸಿ.ಕೆ. ಮಂಜುನಾಥ್ ಶಾಸ್ತ್ರಿ ತಿಳಿಸಿದ್ದಾರೆ.

ನಾಲ್ಕಾರು ಹನಿ ಹಾಕಿ ಮೌನಿಯಾದ ಮಳೆರಾಯ!

ಮೈಸೂರು, ಮೇ 2(ಪಿಎಂ)– ಮೈಸೂರು ನಗರದ ಹೃದಯ ಭಾಗ ಸೇರಿದಂತೆ ಕೆಲ ಪ್ರದೇಶಗಳಲ್ಲಿ ಗುರುವಾರ ಸಂಜೆ ನಾಲ್ಕಾರು ಹನಿ ಹಾಕಿದ ಮಳೆರಾಯ ಮತ್ತೆ ಮೌನಿಯಾಗಿದ್ದು, ಬಿಸಿಲಿನ ತಾಪದಿಂದ ಕಂಗಾಲಾಗಿದ್ದ ಜನ ಆಗಸದತ್ತ ಮುಖ ಮಾಡಿ ಇನ್ನೇನು ಮಳೆ ಸುರಿದು ತಂಪೆರೆಯಬಹುದು ಎಂಬ ನಿರೀಕ್ಷೆ ಹುಸಿಯಾಯಿತು.

ಸಹಿಸಲಾಗದ ಬಿಸಿಲಿನ ಹೊಡೆತಕ್ಕೆ ನಗರದ ಜನ ಕಂಗೆಟ್ಟಿದ್ದು, ಮಳೆಗಾಗಿ ಕಾತುರದಿಂದ ಕಾಯುತ್ತಿದ್ದಾರೆ. ಅಂತೆಯೇ ಗುರುವಾರ ಸಂಜೆ ಮೋಡ ಕವಿದ ವಾತಾವರಣದೊಂದಿಗೆ ಆಗಾಗ್ಗೆ ಅಲ್ಲಲ್ಲಿ ಒಂದೆರಡು ಹನಿ ಆಗಸದಿಂದ ಬೀಳುತ್ತಿದ್ದಂತೆ ಭೂತಾಯಿ ಮಡಿಲು ತಂಪಾಗಿ ತಮ್ಮ ಮೈಮನಸ್ಸು ತಣ್ಣಗಾಗುವ ಬಯಕೆ ಜನತೆಯಲ್ಲಿ ಮೂಡಿತಾದರೂ ಅದು ಈಡೇರಲಿಲ್ಲ.



ಮೈಸೂರಿನ ಕೆಆರ್ ವೃತ್ತದಲ್ಲಿ ಗುರುವಾರ ಸಂಜೆ ನಾಲ್ಕಾರು ಹನಿ ಮಳೆ ಬಿದ್ದಾಗ ಕಂಡುಬಂದ ದೃಶ್ಯವಿದು.

ಮೊದಲೇ ಬಿಸಿಲಿನ ಬೇಗೆಯಿಂದ ಬೆಂದಿರುವ ಭೂತಾಯಿಯ ಮಡಿಲು ನಾಲ್ಕಾರು ಹನಿ ಬಿದ್ದಾಗ ಮತ್ತಷ್ಟು ತಾಪ ಹೊರಹೊಮ್ಮಿತು. ಪರಿಣಾಮ ತಾಪ ದುಪ್ಪಟ್ಟಾಗಿ ಜನತೆ ಮತ್ತಷ್ಟು ಬಸವಳಿಯುವಂತಾಯಿತು. ಮಳೆ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ಪ್ರೊ.ಗೋವಿಂದರಾಜು, ತಾಪಮಾನವು 38 ಡಿಗ್ರಿ ಸೆಲ್ಸಿಯಸ್ ದಾಟಿರುವ ಕಾರಣ ಇಂದು (ಗುರುವಾರ) ರಾತ್ರಿ ಮಳೆ ಬರಬಹುದು. ಇಲ್ಲವೇ ನಾಳೆ (ಶುಕ್ರವಾರ) ಬರುವ ಸಾಧ್ಯತೆ ಇದೆ ಎಂದರು.

ಐಎಂಡಿ ವರದಿಯಲ್ಲಿ ಮೇ 5ರವರೆಗೆ ಮೈಸೂರು ಜಿಲ್ಲೆಯಲ್ಲಿ ಮಳೆ ಮುನ್ಸೂಚನೆ ಇಲ್ಲದೇ ಇರಬಹುದು. ಆದರೆ ಅದು ಮೂರು ದಿನಗಳ ಹಿಂದೆ ಮಾಡಿರುವ ಅಂದಾಜು ಆಗಿರುವ ಹಿನ್ನೆಲೆಯಲ್ಲಿ ಆ ಬಳಿಕ ಮೋಡ ಇದ್ದಲ್ಲೇ ಇರುವುದಿಲ್ಲ. ಅವು ಚಲಿಸುವ ಹಿನ್ನೆಲೆಯಲ್ಲಿ ಹವಾಗುಣದಲ್ಲಿ ಬದಲಾವಣೆಯಾಗಿದೆ. ಮೋಡಗಳು ಸೇರುತ್ತಿರುವ ಹಿನ್ನೆಲೆಯಲ್ಲಿ ಮಳೆ ಬರುವ ಸಂಭವ ಇದೆ. ಈಗಾಗಲೇ ಬೆಂಗಳೂರಿನಲ್ಲಿ (ಗುರುವಾರ ಸಂಜೆ 7ರ ವೇಳೆಯಲ್ಲಿ) ಮಳೆ ಬೀಳುತ್ತಿದೆ ಎಂದು ತಿಳಿಸಿದರು.

ಸಂಸ್ಕಾರಯುತ ಶಿಕ್ಷಣದಿಂದ ಸಾಮರಸ್ಯದ ಬದುಕು

ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ ಅಭಿಮತ

ಮೈಸೂರು, ಮೇ 2–ಸಾಮರಸ್ಯದಿಂದ ಬದುಕಲು ಸಂಸ್ಕಾರಯುತ ಶಿಕ್ಷಣದ ಅಗತ್ಯವಿದೆ ಎಂದು ಖ್ಯಾತ ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿ ತಿಳಿಸಿದ್ದಾರೆ.

ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಶ್ರೀ ಸುತ್ತೂರು ಕ್ಷೇತ್ರ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರದ ಎರಡನೇ ದಿನದ ಉಪನ್ಯಾಸದಲ್ಲಿ 'ಸಾಮರಸ್ಯದ ಬದುಕು' ಕುರಿತು ಮಾತನಾಡಿದರು.

ನಮ್ಮ ಸಂಸ್ಕೃತಿ ಹಾಗೂ ನಂಬಿಕೆ ಗಟ್ಟಿಯಾಗಿದ್ದಲ್ಲಿ ಬದುಕು ಸಾಮರಸ್ಯದಿಂದ ಕೂಡಿರುತ್ತದೆ. ಜೀವನದಲ್ಲಿ ಅಹಂಕಾರ ಮತ್ತು ಕೀಳರಿಮೆ ಬೆಳೆಸಿಕೊಳ್ಳಬಾರದು. ನಮ್ಮ ಚಿಂತನೆಗಳು ಕೇವಲ ಧನಾತ್ಮಕವಾಗಿರಬೇಕು. ಎಲ್ಲರನ್ನು ಸಮಾನವಾಗಿ ಕಾಣುವುದರಿಂದ ಬದುಕನ್ನು ಶಾಂತಗೊಳಿಸಿಕೊಳ್ಳಬಹುದು. ಬದುಕಿನ ಮೌಲ್ಯಗಳನ್ನು ತಿಳಿದು ಸಾರ್ಥಕ ಜೀವನದೆಡೆಗೆ ನಡೆಯಬೇಕಾದುದು ನಮ್ಮೆಲ್ಲರ ಕರ್ತವ್ಯ. ಮನಸ್ಸನ್ನು



ಕೆಡಿಸಲು ಹಲವು ಮಾರ್ಗಗಳಿವೆ ಅವುಗಳನ್ನು ಮೀರಿ ನಮ್ಮಲ್ಲಿರುವ ವಿಷಯಾಸಕ್ತಿಗಳನ್ನು ನಿಯಂತ್ರಿಸಿಕೊಳ್ಳಬೇಕು. ತ್ಯಾಗ ಜೀವನ ಅತ್ಯುತ್ತಮವಾದುದು ಎಂದು ಹೇಳಿದರು.

ರಾಜ್ಯ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ ಮಾತನಾಡಿ, ನಿಯಮಿತ ಆಹಾರ ಮತ್ತು ಉತ್ತಮ ಜೀವನ ವಿಧಾನ ದೀರ್ಘಾಯುಷ್ಯಕ್ಕೆ ಕಾರಣವಾಗಿದೆ. ಆಯುರ್ವೇದದ ಮನೆಮದ್ದಿನ ಬಗ್ಗೆ ತಿಳುವಳಿಕೆ ಪಡೆದುಕೊಂಡು ನಿರೋಗಿಗಳಾಗಿ ಬದುಕುವುದು ಇಂದಿನ ಆಧುನಿಕ ಜಗತ್ತಿನಲ್ಲಿ ಅನಿವಾರ್ಯವಾಗಿದೆ. ವಿಶ್ವದಲ್ಲಿ ಈಗ ಆಯುರ್ವೇದದ ಮಹತ್ವ ಹೆಚ್ಚಾಗಿದೆ. ಇದು ಯಾವುದೇ ಅಡ್ಡ ಪರಿಣಾಮಗಳನ್ನು ಬೀರುವುದಿಲ್ಲ. ನಮ್ಮ ಅಡುಗೆ ಮನೆಯಲ್ಲಿಯೇ ಅನೇಕ ಆಯುರ್ವೇದದ ಔಷಧಿಗಳನ್ನು ಕಾಣಬಹುದು. ಪ್ರಕೃತಿ ಮತ್ತು ದೇಹಕ್ಕೆ ಅವಿನಾಭಾವ ಸಂಬಂಧವಿದ್ದು, ಋತುಮಾನಕ್ಕೆ ತಕ್ಕ ಆಹಾರ ಸೇವನೆಯಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎನ್ನುವುದನ್ನು ಪ್ರಾತ್ಯಕ್ಷಿಕೆ ಮೂಲಕ ತಿಳಿಸಿಕೊಟ್ಟರು.

ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪ ಪೊಲೀಸ್ ಅಧೀಕ್ಷಕ ಹೆಚ್. ಎಸ್. ರೇಣುಕಾರಾಧ್ಯ ಮಾತನಾಡಿ, ಇಂದಿನ ಆಧುನಿಕ ಜಗತ್ತಿನಲ್ಲಿ ಸೈಬರ್ ಕ್ರೈಂ ಎನ್ನುವುದು ಸಾಮಾಜಿಕ ಪಿಡುಗಾಗಿದೆ. ಸಾಮಾಜಿಕ ಜಾಲತಾಣಗಳಿಂದ ಮೋಸ ಹೋಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸೈಬರ್ ಕ್ರೈಂಗೆ ಒಳಗಾಗುವವರು ಹೆಚ್ಚು ವಿದ್ಯಾವಂತರೇ ಆಗಿದ್ದಾರೆ. ಮೊಬೈಲ್‌ಗಳನ್ನು ಎಚ್ಚರಿಕೆಯಿಂದ ಬಳಸಬೇಕು, ಮಕ್ಕಳಿಗೆ ಮೊಬೈಲ್ ಬಳಕೆಯ ಬಗ್ಗೆ ಪೋಷಕರು ತಿಳುವಳಿಕೆ ನೀಡಬೇಕು. ನಮ್ಮ ಅಜಾಗರೂಕತೆಯಿಂದ ಸೈಬರ್ ಕ್ರೈಂಗಳಾಗುತ್ತವೆ. ಬ್ಯಾಂಕಿಂಗ್ ವ್ಯವಹಾರಗಳ ಸಮಯದಲ್ಲಿ ನಮ್ಮ ಮೊಬೈಲ್‌ಗಳಿಗೆ ಬರುವ ಕರೆ ಮತ್ತು ಸಂದೇಶಗಳ ಬಗ್ಗೆ ಜಾಗೃತರಾಗಿದ್ದರೆ ಇದರಿಂದ ಉಂಟಾಗುವ ಅನಾಹುತಗಳನ್ನು ತಡೆಗಟ್ಟಬಹುದು ಎಂದು ತಿಳಿಸಿದರು.

ಸಂಜೆ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಕೊಯಮತ್ತೂರಿನ ಪೆರೂರೂ ಆದಿನಂ ಮಠದ ಶ್ರೀ ಮರುದಾಚಲ ಸ್ವಾಮಿಗಳು ನಮ್ಮ ದೇಹ ಮತ್ತು ಪ್ರಫುಲ್ಲಗೊಳ್ಳಲು ಇಂತಹ ಜೀವನೋತ್ಸಾಹ ಶಿಬಿರಗಳು ಅಗತ್ಯವಿದೆ. ಸುತ್ತೂರಿನ ಪರಮಪೂಜ್ಯ ಜಗದ್ಗುರುಗಳು ಕರ್ನಾಟಕ ಮತ್ತು ತಮಿಳುನಾಡಿನ ಆಧ್ಯಾತ್ಮಿಕ ಕೊಂಡಿಯಾಗಿದ್ದಾರೆ. ಪೂಜ್ಯರ ಕಾರ್ಯಕ್ರಮಗಳು ಮಹತ್ತರವಾದುದು ಎಂದು ತಿಳಿಸಿದರು.

ಚಿಕ್ಕತುಪ್ಪೂರು ಶಿವಪೂಜಾ ಮಠದ ಶ್ರೀ ಚೆನ್ನವೀರ ಸ್ವಾಮಿಗಳವರು ವಚನ ಹಾಡಿದರು. ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು ಹಿತನುಡಿಗಳನ್ನಾಡಿದರು.

ಶಿಬಿರದಲ್ಲಿ ಸಾಂಗ್ಲಿ ಜಿಲ್ಲೆ, (ಮಹಾರಾಷ್ಟ್ರ) ಕಲಬುರಗಿ, ವಿಜಯಪುರ, ಬೆಳಗಾವಿ, ಬಾಗಲಕೋಟೆ, ಧಾರವಾಡ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು, ಹಾಸನ ಹಾಗೂ ಮೈಸೂರು ಜಿಲ್ಲೆಗಳಿಂದ 230ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ : (ರೇಗುತ್ತಾ) ನೀನು ಮಾಡೋ ಅಡುಗೆ ನಮ್ಮ ತಾಯಿ ಮಾಡ್ತಿದ್ದ ಹಾಗಿಲ್ಲ

ಹೆಂಡತಿ : (ಸಿಟ್ಟಿನಿಂದ) ನೀವು ತರೋ ಸಂಬಳ ನನ್ನ ತಂದೆ ತರ್ತಿದ್ದ ಹಾಗಿಲ್ಲ!

ಮೈಸೂರು ಮಿತ್ರ
ಶುಕ್ರವಾರ, 3 ಮೇ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಏನನ್ನೇ ಆದರೂ ಸಂತೋಷವಾಗಿ ಅಭಿವ್ಯಕ್ತಿಗೊಳಿಸಿದರೆ ಅದು ಚೆನ್ನಾಗಿ ಬರೆದಂತೆಯೇ –ಮಾಂಟೆಗೋ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗುಡ್ಡಕ್ಕೆ ಕಲ್ಲು ಹೊತ್ತಂತೆ, ಸಮುದ್ರಕ್ಕೆ ನೀರು ಹೊತ್ತಂತೆ

ನಿಮ್ಮ ಪತ್ರಗಳು

ಸರ್ಕಾರಿ ಸ್ವಾಮ್ಯದ ಸಂಸ್ಥೆಗಳೇಕೆ ಸೊರಗುತ್ತಿವೆ

ಮಾನ್ಯರೆ,

ಕರ್ನಾಟಕ ಹಾಲು ಮಹಾಮಂಡಳಿ, ಕರ್ನಾಟಕ ಮಾರ್ಜಕ ಸಂಸ್ಥೆ, ಕರ್ನಾಟಕ ರೇಷ್ಮೆ ಮಂಡಳಿ... ಹೀಗೆ ಕರ್ನಾಟಕದ ಹಲವಾರು ಸರ್ಕಾರಿ, ಅರೆ ಸರ್ಕಾರಿ, ಸಹಕಾರಿ ಸಂಸ್ಥೆಗಳು ಲಾಭ ಮಾಡುತ್ತಿವೆ ಎಂದು ಆಯಾಯ ಸಂಸ್ಥೆಗಳ ಅಧ್ಯಕ್ಷರು ಹೇಳುತ್ತಿದ್ದರೂ, ಇಂತಹ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ನಷ್ಟ ಅನುಭವಿಸುತ್ತಿರುವುದನ್ನು ನಾವು ಪತ್ರಿಕೆಗಳ ಮೂಲಕ ಓದುತ್ತಿದ್ದೇವೆ. ಸುಮಾರು 25 ವರ್ಷ ಸರ್ಕಾರಿ ಸ್ವಾಮ್ಯದ ಸಹಕಾರಿ ಸಂಸ್ಥೆಯೊಂದರಲ್ಲಿ ಮಾರುಕಟ್ಟೆ ಅಧಿಕಾರಿಯಾಗಿ ನಿವೃತ್ತನಾಗಿ ಇದೀಗ ಸುಮಾರು 20 ವರ್ಷಗಳು ಕಳೆದಿವೆ. ನನ್ನ ಕಾರ್ಯಾವಧಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಎರಡೂ ಜಿಲ್ಲೆಗಳಲ್ಲಿ ಒಂದೊಂದು ಉತ್ಪನ್ನದ ಮಾರಾಟಕ್ಕಾಗಿ ನಾನು ಮತ್ತು ನನ್ನ ತಂಡ ಪಟ್ಟ ಶ್ರಮ ನೆನಸಿಕೊಂಡೆ. ಏಕೆಂದರೆ, ಕಳೆದ ಎರಡು ವಾರಗಳ ಹಿಂದೆ ನಾನು ಒಂದು ಶುಭ ಸಮಾರಂಭಕ್ಕಾಗಿ ಮೈಸೂರು ಸಿಲ್ಕ್ ಸೀರೆ ಕೊಳ್ಳಲು ಫ್ಯಾಕ್ಟರಿ ಶೋ ರೂಂಗೆ ತೆರಳಿದ್ದೆ. ಅಲ್ಲಿ ದಾಸ್ತಾನಿಲ್ಲದೆ ಬೆರಳೆಣಿಕೆಯಷ್ಟೇ ಸೀರೆಗಳನ್ನು ಇಟ್ಟಿದ್ದರು. ಕಪಾಟೆಲ್ಲವೂ ಖಾಲಿ ಖಾಲಿ. ಅಲ್ಲಿಂದ ಮುಂದೆ ಹೊಯ್ಸಳ ಹೋಟೆಲ್ ಘಟಕಕ್ಕೆ, ಕೆ.ಆರ್. ವೃತ್ತದ ಮಾರಾಟ ಮಳಿಗೆಗೆ, ಮುಂದೆ ಮೃಗಾಲಯದ ಬಳಿಯ ಮಾರಾಟ ಮಳಿಗೆಗೆ ಕೊನೆಗೆ ಕಾಳಿದಾಸ ರಸ್ತೆಯ ಮಳಿಗೆಗೂ ಭೇಟಿ ನೀಡಿದಾಗ ಅಲ್ಲಿ ಎಲ್ಲೂ ದಾಸ್ತಾನು ಇಲ್ಲದಿರುವುದು ಕಂಡು ಬಂದಿತ್ತು. ವಿಚಾರಿಸಿದರೆ ಬರಿ ಉಡಾಫೆ ಉತ್ತರಗಳೇ. ಇದಾದ ಎರಡು ವಾರಗಳ ನಂತರ ಮತ್ತೆ ಈ ಮಳಿಗೆಗಳಿಗೆ ಭೇಟಿ ನೀಡಿದಾಗಲೂ ಪರಿಸ್ಥಿತಿ ಹೀಗೆಯೇ ಇತ್ತು. ಇನ್ನು ಮೈಸೂರು ಹಾಲು ಒಕ್ಕೂಟದ ಕ್ಷೀರಕೇಂದ್ರಗಳೇನು ಇದಕ್ಕೆ ಹೊರತಲ್ಲ. ಮಜ್ಜಿಗೆ ಇದ್ದರೆ, ಲಸ್ಸಿ ಇಲ್ಲ, ಇವುಗಳಿದ್ದರೆ, ತುಪ್ಪ, ಮತ್ತು ಇತರೆ ಉತ್ಪನ್ನಗಳಿರುವುದೇ ಇಲ್ಲ. ಕೇಳಿದರೆ, ವಾರದ ಯಾವುದೋ ದಿನದಲ್ಲಿ ಸರಬರಾಜು ಮಾಡುವರು ಎನ್ನುವ ಉತ್ತರ.

ಬಹುಶಃ ಇದನ್ನೆಲ್ಲ ಗಮನಿಸಿದಲ್ಲಿ, ಇಂಥ ಸಂಸ್ಥೆಗಳ ಸಿಬ್ಬಂದಿ ರೈತರ ಹಿತವನ್ನು ಬದಿಗಿಟ್ಟು ಕಾರ್ಯ ನಿರ್ವಹಿಸುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಸಂಬಳ ಬರುತ್ತದೆ ನಮಗೇನು ಮಾರಾಟವಾದರೆ ಒಂದು ಆಗದಿದ್ದರೆ ಮತ್ತೊಂದು ಎಂಬ ಮನೋಭಾವದ ಮಾರಾಟ ಸಿಬ್ಬಂದಿ, ಕನಿಷ್ಠ ಪಕ್ಷ ಸೌಜನ್ಯದಿಂದ ವರ್ತಿಸಿದರೂ ಗ್ರಾಹಕನಿಗೆ ಅದೇ ಸಾಕು. ಅದಕ್ಕೇ ಏನೋ ಇಂತಹ ಸಂಸ್ಥೆಗಳು ನಷ್ಟದಿಂದ ಹೊರಗೆ ಬರಲಾರದೆ ಹೆಣಗುತ್ತಿದೆ ಎನಿಸುವುದುಂಟು. ಇದಕ್ಕೆಲ್ಲಾ ಕೊನೆ ಎಂದು? ಗ್ರಾಹಕ ಎಂದು ತೃಪ್ತಿಯಾಗುತ್ತಾನೆ ಎಂದು ಈ ಸಂಸ್ಥೆಗಳು ಅರಿತಲ್ಲಿ ಉತ್ತಮ, ಇಲ್ಲದೇ ಹೋದಲ್ಲಿ, ಕಡೆಗೊಂದು ದಿನ ಇವುಗಳು ಬಾಗಿಲು ಮುಚ್ಚುವ ದಿನಗಳು ದೂರವಿಲ್ಲ.

–ವಿಜಯ್ ಹೆಮ್ಮಿಗೆ, ಮೈಸೂರು

ಬದುಕಿದ್ದೂ ಸತ್ತಂತೆ ಬದುಕುತ್ತಿರುವವರಿಗೆ ನೆರವಾಗಬೇಕಿರುವ ಸರ್ಕಾರ

ಮಾನ್ಯರೆ,

ಮಾನವ ಜೀವಿಸಲು ಕೆಲವು ಮೂಲಭೂತ ಸೌಲಭ್ಯಗಳು ಅಗತ್ಯ ಹಾಗೂ ಅನಿವಾರ್ಯವಾಗಿವೆ. ಆಧುನಿಕತೆ ಬೆಳೆದಂತೆಲ್ಲಾ ಹೊಸ ಹೊಸ ಆವಿಷ್ಕಾರಗಳು ಸೃಷ್ಟಿಯಾಗುತ್ತಲೇ ಇವೆ. ಅದರ ಪರಿಚಯವೂ ಕೂಡ ಸಾಮಾನ್ಯನಿಗಿದೆ. ಆದರೆ, ಗಡಿ ಜಿಲ್ಲೆ ಚಾಮರಾಜನಗರದ ಇಂಡಿಗನತ್ತ ಗ್ರಾಮಸ್ಥರಿಗೆ ಇದಾವುದರ ಪರಿವೇ ಇಲ್ಲದಂತಾಗಿದೆ.

ಸ್ವಾತಂತ್ರ್ಯ ಬಂದು 75 ವರ್ಷಗಳೇ ಗತಿಸಿದ್ದರೂ ಈ ಗ್ರಾಮಸ್ಥರನ್ನು ಮೂಲಭೂತ ಸೌಲಭ್ಯಗಳಿಂದ ವಂಚಿಸಿರುವ ಅಧಿಕಾರಿಗಳು ಮತ್ತು ರಾಜಕಾರಣಿಗಳ ನಡೆ ಬೇಸರ ಮೂಡಿಸಿದೆ.

ಗ್ರಾಮದ ಯಾವುದೇ ಮನೆಗಳಿಗೂ ಇಲ್ಲಿಯವರೆಗೂ ವಿದ್ಯುತ್ ಸಂಪರ್ಕ ನೀಡಿಲ್ಲ, ಸಾರಿಗೆ ಸೌಲಭ್ಯವಿಲ್ಲದ್ದರಿಂದ ಇಲ್ಲಿನ ಮಕ್ಕಳು ಕೇವಲ ಪ್ರಾಥಮಿಕ ಶಿಕ್ಷಣಕ್ಕಷ್ಟೇ ಸೀಮಿತಗೊಳ್ಳುತ್ತಿದ್ದಾರೆ. ಅನಾರೋಗ್ಯಕ್ಕೀಡಾದವರನ್ನು ಡೋಲಿಯಲ್ಲಿರಿಸಿ ಎತ್ತಿಕೊಂಡು 9 ಕಿ.ಮೀ ದೂರ ನಡೆದು ಸಾಗಿ, ನೆರೆರಾಜ್ಯದ ಮೆಟ್ಟೂರು ಆಸ್ಪತ್ರೆಗೆ ಚಿಕಿತ್ಸೆಗೆ ತೆರಳುವ ವಿಷಯವಂತೂ ಪ್ರಜ್ಞಾವಂತ ನಾಗರಿಕರ ಕರುಳು ಹಿಂಡುವಂತೆ ಮಾಡುತ್ತಿದೆ.

ಗ್ರಾಮವು ಸಂರಕ್ಷಿತ ಅರಣ್ಯ ಪ್ರದೇಶದೊಳಗಿರುವುದರಿಂದ ಶಾಶ್ವತ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಅರಣ್ಯ ಸಂರಕ್ಷಣೆಯ ಕಾನೂನು ಅಡ್ಡಿಯಾಗುತ್ತಿದೆ ಎಂದು ಅರಣ್ಯ ಇಲಾಖೆ ವಾದಿಸುತ್ತಿದೆ. ಅರಣ್ಯ ಇಲಾಖೆಯ ಈ ಕುಂಟುನೆಪ ಹಾಗೂ ರಾಜ್ಯ ಸರ್ಕಾರದ ಧೋರಣೆಯಿಂದ ಅಪ್ಪ–ಅಮ್ಮನ ಜಗಳದಲ್ಲಿ ಕೂಸು ಬಡವಾಯ್ತು ಎಂಬ ಮಾತಿನಂತೆ ಅರಣ್ಯ ಇಲಾಖೆ, ಸರ್ಕಾರದ ಈ ನಡೆಯಿಂದ ಇಂಡಿಗನತ್ತ ಗ್ರಾಮಸ್ಥರು ಆಧುನಿಕತೆಯಲ್ಲಿಯೂ ಬದುಕಿದ್ದೂ ಸತ್ತಂತೆ ಬದುಕುತ್ತಿದ್ದಾರೆ.

ಅಧಿಕಾರಿಗಳು ಮತ್ತು ರಾಜಕಾರಣಿಗಳು ಇನ್ನಾದರೂ ಇಲ್ಲ–ಸಲ್ಲದ ಸಬೂಬು ಹೇಳುವುದನ್ನು ನಿಲ್ಲಿಸಿ, ಗ್ರಾಮಸ್ಥರಿಗೆ ಮೂಲಭೂತ ಸೌಲಭ್ಯ ಕಲ್ಪಿಸಬೇಕು. ಅಥವಾ ಸರ್ಕಾರಿ ಭೂಮಿಯನ್ನು ಗುರುತಿಸಿ, ಇಡೀ ಗ್ರಾಮವನ್ನೇ ಸ್ಥಳಾಂತರಿಸಿ ಗುಂಪು ಮನೆ ನಿರ್ಮಿಸಿಕೊಟ್ಟು ಇಂಡಿಗನತ್ತ ಗ್ರಾಮಸ್ಥರೂ ನಾಗರಿಕತೆಯಿಂದ ಬದುಕುವಂತೆ ಮಾಡಲಿ ಎಂಬುದು ಪ್ರಜ್ಞಾವಂತ ನಾಗರಿಕರ ಮನವಿ.

–ಶಿವಕುಮಾರ, ತುಂಬಸೋಗೆ ಗ್ರಾಮ, ಹೆಚ್.ಡಿ.ಕೋಟೆ ತಾ.

ಮತಗಟ್ಟೆ ಮತ್ತು ಶಾಲೆಗಳು!



ಮಾನ್ಯರೆ,

ಚುನಾವಣೆಯ ಸಮಯದಲ್ಲಿ ಪ್ರತಿಯೊಬ್ಬ ರಾಜಕಾರಣಿಯೂ ತಮ್ಮ ತಮ್ಮ ಊರಿನ ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ ಅವುಗಳ ಸ್ಥಿತಿಗತಿಯತ್ತ ಗಮನಹರಿಸಲಿ ಎಂಬ ಕಾರಣಕ್ಕೆ ಶಾಲಾ–ಕಾಲೇಜುಗಳ ಕಟ್ಟಡಗಳನ್ನು ಮತಗಟ್ಟೆಗಳನ್ನಾಗಿ ರೂಪಿಸಲಾಗಿರುತ್ತದೆ. ವಿಪರ್ಯಾಸವೆಂದರೆ ಈ ಶಾಲಾ–ಕಾಲೇಜುಗಳ ಕಟ್ಟಡಗಳು ಸುಣ್ಣ–ಬಣ್ಣ ಕಂಡು ದಶಕಗಳೇ ಉರುಳಿರುತ್ತವೆ. ಗೋಡೆಗಳು ಬಿರುಕು ಬಿಟ್ಟಿರುತ್ತವೆ. ಸುಣ್ಣದ ಚಕ್ಕೆ ಉದುರುತ್ತಿರುತ್ತದೆ. ಮತದಾನ ಮಾಡಲು ಬರುವ ರಾಜಕಾರಣಿಗಳು–ಸೆಲೆಬ್ರಿಟಿಗಳು ಈ ಶಾಲೆಗಳ ಗೋಡೆಗಳತ್ತ ಕಣ್ಣು ಹಾಯಿಸದೇ ಕುರುಡಾಗಿದ್ದಾರೆ. ರಾಜಕಾರಣಿಗಳು–ಸೆಲೆಬ್ರಿಟಿಗಳು ತಾವು ಮತ ಚಲಾಯಿಸಿದ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುತ್ತಾರೆ. ಇಂತಹ ಬಹುತೇಕ ಚಿತ್ರಗಳಲ್ಲಿ ಶಾಲೆಗಳ ದುಸ್ಥಿತಿಯೂ ಚಿತ್ರಿತವಾಗಿರುತ್ತದೆ. ಮತಗಟ್ಟೆಗೆ ಬರುವ ಜನಪ್ರತಿನಿಧಿಗಳ ಮತಿಗೆಟ್ಟ ದೃಷ್ಟಿಗೆ ಶಿಥಿಲವಾದ ಶಾಲೆಗಳ ದುಸ್ಥಿತಿ ಗೋಚರಿಸುವುದಿಲ್ಲವೇ? ಅವುಗಳ ದುಸ್ಥಿತಿ ಸರಿಪಡಿಸುವ ಮನಸ್ಥಿತಿ ಬರುವುದೇ ಇಲ್ಲವೇ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಮತ್ತೆ ಹಿಂದಕ್ಕೆ ಹೋದರೆ ಒಳಿತಲ್ಲವೆ

ಈ ವರ್ಷ ಅದೇಕೋ ನಮ್ಮ ನೆಮ್ಮದಿಯನ್ನು ಕಸಿದುಕೊಳ್ಳುತ್ತಿದೆ. ಎಂದೂ ಕಾಣದ ಬಿರು ಬೇಸಿಗೆ ಇಡೀ ಭೂಮಿಯನ್ನು ಸುಡುತ್ತಿದೆ. ಮೈಸೂರು ಒಂದು ಕಾಲಕ್ಕೆ ತಂಪಾದ ನಗರ. ಬೇಸಿಗೆಯಲ್ಲಿ 35 ಡಿಗ್ರಿ ಉಷ್ಣಾಂಶವೇ ಅಧಿಕ ಎನ್ನುವಂತಿತ್ತು. ಅಂತಹ ಸಮಯದಲ್ಲೂ ತಡೆಯಲಾರದ ಸೆಖೆ ಎಂದು ಹೇಳುತ್ತಿದ್ದೆವು. ಆದರೆ ಈ ವರ್ಷ 40 ಡಿಗ್ರಿ ತಾಪಮಾನ ದಾಟಿದೆ. ದಿನದ ಕೆಲವು ಸಮಯ ಇದು 41–42 ಡಿಗ್ರಿ ಮುಟ್ಟುತ್ತಿದೆ. ಅದೆಲ್ಲೋ ಉತ್ತರ ಕರ್ನಾಟಕದಲ್ಲಿ ಬೇಸಿಗೆಯಲ್ಲಿ ಉಷ್ಣಾಂಶ 40 ಡಿಗ್ರಿ ದಾಟುತ್ತಿದಂತೆ. ಆ ಜನ ಅದನ್ನು ಹೇಗೆ ತಡೆದುಕೊಳ್ಳುತ್ತಾರೋ ಎಂದು ಕನಿಕರ ಪಡುತ್ತಿದ್ದ ನಾವು, ಇಂದು ಆ ಉಷ್ಣಾಂಶವನ್ನು ಅನುಭವಿಸುತ್ತಿದ್ದೇವೆ. ಇದೀಗ ತಜ್ಞರು ಬೆಳಗ್ಗೆ 11ರ ನಂತರ ಸಂಜೆ 4 ರವರೆಗೆ ಮನೆಯಿಂದ ಹೊರಗೆ ಹೋಗಬೇಡಿ ಎಂದು ಸಲಹೆ ನೀಡುತ್ತಿದ್ದಾರೆ. ಇದು ಕೇವಲ ಮೈಸೂರಿನ ಕಥೆಯಲ್ಲ. ರಾಜ್ಯದ ಬಹುತೇಕ ಭಾಗಗಳಲ್ಲಿ ಬಿಸಿ ವಾತಾವರಣ ಮನುಷ್ಯನನ್ನು ಹೈರಾಣಾಗಿಸುತ್ತಿದೆ. ನಮ್ಮ ಕುಕ್ಕರಹಳ್ಳಿ ಕೆರೆಯಲ್ಲಿ ಬಿಸಿಲಿನ ಪರಿಣಾಮ ಮೀನುಗಳು ಸಾಯುತ್ತಿವೆ. ಹಕ್ಕಿ ಪಕ್ಷಿಗಳು ನೀರಿಲ್ಲದೆ ಬಸವಳಿಯುತ್ತಿವೆ. ಬಿಸಿಲಿನ ತಾಪಮಾನದಿಂದ ಮನೆಯಿಂದ ಹೊರಗೆ ಹೋಗುವುದು ಬೇಡ ಎಂದರೂ ಮನೆಯಲ್ಲಿಯೂ ನೆಮ್ಮದಿಯಾಗಿ ಕುಳಿತುಕೊಳ್ಳಲಾಗುತ್ತಿಲ್ಲ. ಎಷ್ಟು ನೀರು ಕುಡಿದರೂ, ಬಾಯಾರಿಕೆ ನೀಗುತ್ತಿಲ್ಲ. ರಾತ್ರಿ ನಿದ್ರೆ ಬರುತ್ತಿಲ್ಲ ಎಂದು ಅನೇಕರು ಉದ್ಗರಿಸುವುದನ್ನು ಕೇಳುತ್ತಿದ್ದೇವೆ.

ಬೆಂಗಳೂರಿನಲ್ಲಿ ತಾಪತ್ರಯ ಮತ್ತಷ್ಟು, ಅಲ್ಲಿ ಕುಡಿಯುವ ನೀರಿಗೂ ತೀವ್ರವಾದ ತೊಂದರೆ. (ನಮ್ಮ ಮೈಸೂರಿಗೆ ಆ ಬಿಸಿ ಇನ್ನೂ ತಟ್ಟಿಲ್ಲ) ಅಲ್ಲಿ ಟ್ಯಾಂಕರ್‌ಗಳಲ್ಲಿ ನೀರು ತರಿಸುವ ಪರಿಸ್ಥಿತಿ ಬಂದಿದೆ. ಅದಕ್ಕೆ ಸಿಕ್ಕಾಪಟ್ಟೆ ಹಣ ನೀಡಬೇಕು. ದುಡ್ಡು ಕೊಡುತ್ತೇವೆ ಎಂದರೂ ಕೇಳಿದಾಗ ನೀರು ಸಿಗುತ್ತಿಲ್ಲ. ನೀರನ್ನು ಅನವಶ್ಯಕವಾಗಿ ಬಳಸದಿರಿ ಎಂದು ಹೇಳುವ ಮಟ್ಟಕ್ಕೆ, ಹಾಗೆ ಬಳಸಿದರೆ ದಂಡ ವಿಧಿಸುತ್ತೇವೆ ಎಂದು ಅಲ್ಲಿನ ಪಾಲಿಕೆ ಎಚ್ಚರಿಸಿದರೂ ನೀರಿದ್ದವರು ದುರ್ಬಳಕೆ ಮಾಡುವುದನ್ನು ನಿಲ್ಲಿಸಿಲ್ಲ. ಮಳೆಗಾಲ ಆರಂಭವಾಗಲು ಇನ್ನೂ ಎರಡು ತಿಂಗಳು ಬೇಕು. ಮೇ ತಿಂಗಳು ಕಡು ಬೇಸಿಗೆಯ ಸಮಯ. ಜಲಾಶಯಗಳು, ಕೆರೆಕಟ್ಟೆಗಳಲ್ಲಿರುವ ನೀರು ಆವಿಯಾಗುತ್ತಿದೆ. ಮುಂದಿನ ದಿನಗಳು ಹೇಗೋ ಎಂಬ ಆತಂಕ ಕಾಡುತ್ತಿದೆ.

ಹಿಂದಿನ ವರ್ಷಗಳಲ್ಲಿ ಮಳೆ ಜಾಸ್ತಿಯಾಗಿ ಪ್ರವಾಹ ಬಂದಾಗ ಮಳೆಯನ್ನು ಶಪಿಸುತ್ತಿದ್ದವರು ಇಂದು ಮಳೆ ಬಂದರೆ ಸಾಕೆಂದು ಕಾಯುವಂತಾಗಿದೆ. ಮಳೆಯ ಮಹತ್ವ ಹೆಚ್ಚಾಗಿ ಈಗ ನಮ್ಮ ಅರಿವಿಗೆ ಬರುತ್ತಿದೆ. ಸುದೈವ ಈಗಲೂ ನಮ್ಮ ಮೈಸೂರಿನಲ್ಲಿ ನೀರಿನ ತೀವ್ರ ಕೊರತೆ ಕಂಡು ಬಂದಿಲ್ಲ. ಹೀಗಾಗಿ ನಮ್ಮ ಜನರು ಧಾರಾಳವಾಗಿ ನೀರು ಬಳಸುತ್ತಿದ್ದಾರೆ. ಈಗಲೂ ಬೆಳಿಗ್ಗೆ ಅತ್ತಿತ್ತ ನೋಡಿದರೆ ಜನರು ರಸ್ತೆಯನ್ನು ತೊಳೆಯಲು ಧಾರಾಳವಾಗಿ ನೀರು ಬಳಸುತ್ತಿರುವುದು ಕಂಡು ಬರುತ್ತದೆ. ಮನೆಯ ಮುಂದೆ ನೀರನ್ನು ಯಥಾಶಕ್ತಿ ಬಳಸಿ ಪೋಲು ಮಾಡಲಾಗುತ್ತಿದೆ. ಸದ್ಯ!! ಬೆಂಗಳೂರಿನ ಸ್ಥಿತಿ ನಮ್ಮ ಮೈಸೂರಿಗೆ ಬಾರದಿರಲಿ ಎಂದು ಪ್ರಾರ್ಥಿಸುವಂತಾಗಿದೆ.

ಇದಕ್ಕೆಲ್ಲಾ ಕಾರಣ ಏನು ಎಂಬುದು ನಮಗೆ ಬಹುತೇಕ ಗೊತ್ತಿದೆ. ಹಿಂದೆ ನಾವು ಪ್ರಾಥಮಿಕ ಶಾಲೆಯಲ್ಲಿ ಕಲಿಯುವಾಗ ಪಾಠದಲ್ಲಿ ಮಳೆಯ ಬಗ್ಗೆ ಓದಿದ್ದೆವು. ಬೇಸಿಗೆಯಲ್ಲಿ ಸಮುದ್ರದಲ್ಲಿ ನೀರು ಆವಿಯಾಗಿ ಮೋಡವಾಗಿ ಮೇಲೆ ಹೋಗಿ ನಂತರ ತಂಪುಗೊಂಡು ದ್ರವರೂಪ ಪಡೆದು ಮಳೆಯ ರೂಪದಲ್ಲಿ ಭೂಮಿಗೆ ಸುರಿಯುತ್ತದೆ. ಆದರೆ ಮಳೆ ಬರಲು ಸಾಕಷ್ಟು ಕಾಡು, ಬೆಟ್ಟಗುಡ್ಡಗಳು ಇರಬೇಕು. ಅವು ಮೋಡಗಳನ್ನು ತಡೆದು ಭೂಮಿಗೆ ಮಳೆ ತರಿಸುತ್ತವೆ ಎಂದು ಓದಿದ್ದೆವು. ಈಗಲೂ ಸಮುದ್ರವಿದೆ, ಅಲ್ಲಿ ನೀರೂ ಇದೆ. ಬೇಸಿಗೆಯ ಬಿಸಿಲಿನಿಂದ ನೀರು ಆವಿಯೂ ಆಗುತ್ತಿದೆ. ಆದರೆ ಮಳೆ ಮಾತ್ರ ಬರುತ್ತಿಲ್ಲ. ಈ ಹಿಂದೆ ಬೇಸಿಗೆಯಲ್ಲೂ ಮಳೆ ಬರುತ್ತಿತ್ತು. ಯುಗಾದಿಯಲ್ಲಿ, ಕಾಮನಹುಣ್ಣಿಮೆಯ ಸಮಯದಲ್ಲಿ ಮಳೆ ಬಂದೇ ಬರುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಈ ವರ್ಷ ಆ ಸಮಯದಲ್ಲೂ ಮಳೆ ಬರಲಿಲ್ಲ. (ಕೆಲವು ಭಾಗದಲ್ಲಿ ಬಂದಿದೆ ಎಂಬುದೂ ನಿಜವೇ. ಆದರೆ ಎಲ್ಲ ಕಡೆ ಬರಲಿಲ್ಲ), ಇದಕ್ಕೆ ಕಾರಣ ಕಾಡುಗಳು ಕಡಿಮೆಯಾಗುತ್ತಿರುವುದು. ಬೆಟ್ಟಗುಡ್ಡಗಳನ್ನು ನಾಶ ಮಾಡುತ್ತಿರುವುದು ಹಾಗೂ ವಿನಾಶಕಾರಿ ಅನಿಲಗಳನ್ನು ಭೂಮಿಯ ಮೇಲ್ಪದರಗಳಿಗೆ ಹರಡುತ್ತಿರುವುದರಿಂದ ಹೀಗಾಗುತ್ತಿದೆ.

ಇಂದು ಪ್ರಗತಿಯ ಹೆಸರಿನಲ್ಲಿ, ಮುಂದೆ ಇದರಿಂದ ಯಾವ ದುಷ್ಪರಿಣಾಮವಾಗಬಹುದು ಎಂಬುದನ್ನೂ ಲೆಕ್ಕಿಸದೆ, ಆಲೋಚಿಸದೆ, ಕಾರ್ಖಾನೆಗಳನ್ನು ಆರಂಭಿಸುತ್ತಿರುವುದು ಹಾಗೂ ಇತರೆ ವಸ್ತುಗಳ ಉತ್ಪಾದನೆಯೂ ಇದಕ್ಕೆ ಕಾರಣವಾಗುತ್ತಿದೆ. ಒಂದು ಅಧ್ಯಯನದ ಪ್ರಕಾರ ಸದ್ಯದ ಪರಿಸ್ಥಿತಿಯಲ್ಲಿ ಕೈಗಾರಿಕಾ ನೀತಿ ಹಾಗೂ ತ್ಯಾಜ್ಯ ವಸ್ತುಗಳ ನಿರ್ವಹಣೆಯ ಬಗ್ಗೆ ವೈಜ್ಞಾನಿಕ ವಿಧಾನ ಇಲ್ಲದಿರುವುದರಿಂದ ನಮ್ಮ ನೆಲ, ಜಲ ಹಾಗೂ ವಾಯುಮಂಡಲದ ಗುಣಮಟ್ಟದಲ್ಲಿ ಕುಸಿತ ಹಾಗೂ ಸ್ವಾಭಾವಿಕ ಸಂಪನ್ಮೂಲಗಳಾದ ಖನಿಜ ಸಂಪತ್ತು, ಪಳೆಯುಳಿಕೆಗಳು, ಇಂಧನ ಹಾಗೂ ಅರಣ್ಯ ಸಂಪತ್ತು ಬರಿದಾಗುತ್ತಿರುವುದು ಇದಕ್ಕೆ ಮುಖ್ಯ ಕಾರಣವಾಗುತ್ತಿವೆ. ಅರಣ್ಯ ಪ್ರದೇಶ ಕಡಿಮೆಯಾಗುತ್ತಿರುವುದರಿಂದ ಇಂದು ಪ್ರಕೃತಿಯನ್ನು ಸಮತೋಲನದಲ್ಲಿಡುವ ಕಾಪಾಡಬಹುದಾದ ಅನೇಕ ಪ್ರಾಣಿ ಹಾಗೂ ಪಕ್ಷಿ ಸಂಕುಲ ಕಡಿಮೆಯಾಗುತ್ತಿರುವುದೂ ಇದಕ್ಕೆ ಕಾರಣವಾಗುತ್ತಿದೆ. ಅತಿಯಾಗಿ ಬೆಳೆಯುತ್ತಿರುವ ಜನಸಂಖ್ಯೆ, ಹೆಚ್ಚಾಗುತ್ತಿರುವ ವಾಹನಗಳು ನಮ್ಮ ಪರಿಸರ ಹಾಳಾಗಲು ಕಾರಣವಾಗುತ್ತಿದೆ.



> ಹಿಂದಿನ ವರ್ಷಗಳಲ್ಲಿ ಮಳೆ ಜಾಸ್ತಿಯಾಗಿ ಪ್ರವಾಹ ಬಂದಾಗ ಮಳೆಯನ್ನು ಶಪಿಸುತ್ತಿದ್ದವರು ಇಂದು ಮಳೆ ಬಂದರೆ ಸಾಕೆಂದು ಕಾಯುವಂತಾಗಿದೆ. ಮಳೆಯ ಮಹತ್ವ ಹೆಚ್ಚಾಗಿ ಈಗ ನಮ್ಮ ಅರಿವಿಗೆ ಬರುತ್ತಿದೆ. ಸುದೈವ ಈಗಲೂ ನಮ್ಮ ಮೈಸೂರಿನಲ್ಲಿ ನೀರಿನ ತೀವ್ರ ಕೊರತೆ ಕಂಡು ಬಂದಿಲ್ಲ. ಹೀಗಾಗಿ ನಮ್ಮ ಜನರು ಧಾರಾಳವಾಗಿ ನೀರು ಬಳಸುತ್ತಿದ್ದಾರೆ. ಈಗಲೂ ಬೆಳಿಗ್ಗೆ ಅತ್ತಿತ್ತ ನೋಡಿದರೆ ಜನರು ರಸ್ತೆಯನ್ನು ತೊಳೆಯಲು ಧಾರಾಳವಾಗಿ ನೀರು ಬಳಸುತ್ತಿರುವುದು ಕಂಡು ಬರುತ್ತದೆ. ಮನೆಯ ಮುಂದೆ ನೀರನ್ನು ಯಥಾಶಕ್ತಿ ಬಳಸಿ ಪೋಲು ಮಾಡಲಾಗುತ್ತಿದೆ. ಸದ್ಯ!! ಬೆಂಗಳೂರಿನ ಸ್ಥಿತಿ ನಮ್ಮ ಮೈಸೂರಿಗೆ ಬಾರದಿರಲಿ ಎಂದು ಪ್ರಾರ್ಥಿಸುವಂತಾಗಿದೆ.

ನಮ್ಮ ಅಭಿವೃದ್ಧಿ ಯೋಜನೆಗಳು ಕೇವಲ ಆರ್ಥಿಕ ಬೆಳವಣಿಗೆಯನ್ನು ಮಾತ್ರ ಪರಿಗಣಿಸುತ್ತಿವೆ. ಆದರೆ ಅದರಿಂದ ಪರಿಸರದ ಮೇಲೆ ಆಗುಬಹುದಾದ ದುಷ್ಪರಿಣಾಮಗಳ ಬಗ್ಗೆ ಅವು ತಲೆಕೆಡಿಸಿಕೊಳ್ಳುತ್ತಿಲ್ಲ. ಈ ಅಭಿವೃದ್ಧಿ ಯೋಜನೆಗಳಿಂದ ತಲಾದಾಯ ಹೆಚ್ಚಾಗುತ್ತಿದ್ದರೂ ಪರಿಸರ ಸಂಬಂಧಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅಸಮರ್ಥವಾಗಿದೆ ಎಂದು ಹೇಳಬಹುದು.

ಮತ್ತೊಂದು ಅಧ್ಯಯನವು ನಮ್ಮ ಪರಿಸರದ ನಾಶಕ್ಕೆ ನಮ್ಮ ದೇಶ ಮಾತ್ರ ಕಾರಣವಲ್ಲ, ಅಕ್ಕಪಕ್ಕದ ಹಾಗೂ ವಿಶ್ವದ ವಿವಿಧ ದೇಶಗಳೂ ಕಾರಣ ಎಂದು ಹೇಳುತ್ತದೆ. ಒಂದು ದೇಶದಲ್ಲಿ ಕಾಡು ಕಡಿಮೆಯಾದರೆ ಅದರ ಪರಿಣಾಮ ವಿಶ್ವದ ಮತ್ತೊಂದು ಭಾಗಕ್ಕೂ ವಿಸ್ತರಿಸುತ್ತದೆ. ಒಂದು ದೇಶದಲ್ಲಿ ವಿಷಾನಿಲ ಮುಗಿಲಿಗೆ ಸೇರಿದರೆ ಅದರ ಪರಿಣಾಮ ವಿಶ್ವದ ಇತರೆ ಭಾಗಗಳಲ್ಲೂ ವಿಸ್ತರಿಸಬಹುದು ಎಂದು ಆ ಅಧ್ಯಯನ ಹೇಳುತ್ತದೆ. ನಾವು ಮಾಡುವ ಪಾಪದ ಪಾಲನ್ನು ಇತರರೂ ಹೊರಬೇಕಾಗುತ್ತದೆ!! ಎಂಬುದು ವಿಡಂಬನೆಯಾಗಿ ಕಾಣುತ್ತದೆ. ಆದರೆ ಇದು ವಾಸ್ತವ. ನಮ್ಮ ದೇಶ ನಮ್ಮಿಷ್ಟ ಎನ್ನುವಂತಹ ಪರಿಸ್ಥಿತಿ ಇಂದು ಇಲ್ಲ. ಈ ಬಗ್ಗೆ ಇಡೀ ವಿಶ್ವ ಒಂದಾಗಿ ಯೋಚಿಸಿ ನಿರ್ಣಯ ತೆಗೆದುಕೊಳ್ಳುವ ಅನಿವಾರ್ಯತೆ ಇಂದು ಹೆಚ್ಚಾಗಿದೆ.

ಇವೆಲ್ಲವೂ ನಾವು ಈ ವರ್ಷ ಅನುಭವಿಸುತ್ತಿರುವ ಹೆಚ್ಚಾದ ಬಿಸಿಯ ವಾತಾವರಣಕ್ಕೆ ಕಾರಣವಾಗಿದೆ. ಒಂದು ರೀತಿ ಇದು ಟ್ರೈಲರ್. ಮುಂದಿನ ದಿನಗಳಲ್ಲಿ ನಾವು ಎಚ್ಚೆತ್ತುಕೊಳ್ಳದಿದ್ದರೆ ಇದಕ್ಕಿಂತ ಕಡು ಬೇಸಿಗೆಯನ್ನು ಅನುಭವಿಸಬೇಕಾಗುತ್ತದೆ. ನಾವು ಮುಖ್ಯವಾಗಿ ಕಾಡಿನ ಸಂರಕ್ಷಣೆ ಹಾಗೂ ನೀರಿನ ಮೂಲಗಳನ್ನು ಸಂರಕ್ಷಿಸುವ ಬಗ್ಗೆ ಇಂದು ವಿಶೇಷ ಗಮನಹರಿಸಬೇಕಾಗಿದೆ. ಜನಸಂಖ್ಯೆ ಜಾಸ್ತಿಯಾದಂತೆ ನಗರ ಪ್ರದೇಶಗಳ ಸುತ್ತ ಕಾಡಿನ/ಮರಗಳ ಹನನ ಹಾಗೂ ನೀರಿನ ಮೂಲಗಳನ್ನು ಹಾಳು ಮಾಡುವುದು ಕಂಡುಬರುತ್ತಿದೆ. ಹಿಂದೆ ನಮ್ಮ ಜನರಿಗೆ ಮಳೆ ನೀರನ್ನು ಹೇಗೆ ಬಳಸಿಕೊಳ್ಳಬೇಕೆಂಬುದರ ಅರಿವಿತ್ತು. ಒಂದು ಕೆರೆ ತುಂಬಿದರೆ ಅದರ ಕೋಡಿ ನೀರು ಮತ್ತೊಂದು ಕೆರೆಗೆ ಹೋಗುತ್ತಿತ್ತು. ಅದು ತುಂಬಿದಾಗ ಹೆಚ್ಚುವರಿ ನೀರು ಮತ್ತೊಂದು ಕೆರೆಗೆ ಹರಿಯುತ್ತಿತ್ತು. ಮಳೆಯ ನೀರಿನ ಸದ್ಬಳಕೆಯಾಗುತ್ತಿತ್ತು. ಕೆರೆಗಳಲ್ಲಿ ನೀರು ತುಂಬಿದರೆ ಸುತ್ತಲಿನ ಗ್ರಾಮಗಳು ಹಾಗೂ ಪಟ್ಟಣಗಳಲ್ಲಿನ ಅಂತರ್ಜಲದ ಮಟ್ಟ ಏರುತ್ತಿತ್ತು. ಹೀಗಾಗಿ ನೀರಿನ ಸಮಸ್ಯೆ ಇರುತ್ತಿರಲಿಲ್ಲ. ನೀರು ಸುಲಲಿತವಾಗಿ ಹರಿಯುತ್ತಿದ್ದ ಕಾರಣ ಗಿಡಮರಗಳು ಸೊಂಪಾಗಿ ಬೆಳೆಯುತ್ತಿದ್ದವು. ಹೀಗಾಗಿ ಇಡೀ ವಾತಾವರಣ ತಂಪಾಗಿರುತ್ತಿತ್ತು, ಸಾಕಷ್ಟು ಮಳೆ ಬರುತ್ತಿತ್ತು. ಈ ಮಟ್ಟದ ಬೇಸಿಗೆ ಬಿಸಿ ಅನುಭವಕ್ಕೇ ಬರುತ್ತಿರಲಿಲ್ಲ.

ದೊಡ್ಡದೊಡ್ಡ ಅಣೆಕಟ್ಟುಗಳೂ ನೀರಿನ ನಾಶಕ್ಕೆ ತಮ್ಮದೇ ಆದ ಕಾಣಿಕೆ ನೀಡುತ್ತಿವೆ ಎಂದು ಹೇಳಲಾಗುತ್ತದೆ. ಒಂದೆಡೆ ಹೆಚ್ಚು ಸಂಗ್ರಹವಾಗುವ ನೀರಿನ ಆವಿ ಜಾಸ್ತಿಯಾಗುತ್ತದೆ. ಹರಿಯುವ ನೀರಿಗೆ ಈ ಸಮಸ್ಯೆ ಇರುವುದಿಲ್ಲ. ಆದ್ದರಿಂದ ಜಲಾಶಯಗಳೂ ಈ ದಿಸೆಯಲ್ಲಿ ನೀರಿನ ಕೊರತೆಗೆ ಕಾರಣವಾಗುತ್ತವೆ ಎಂದೂ ಹೇಳಲಾಗುತ್ತದೆ.

ಇಷ್ಟಾಗಿಯೂ ನಾವು ಪ್ರಕೃತಿಗೆ ಸಂಬಂಧಿಸಿದಂತೆ ಯಾವ ಪಾಠವನ್ನೂ ಕಲಿಯುತ್ತಿಲ್ಲ. ಬೇಸಿಗೆ ಮುಗಿದು ಮಳೆಗಾಲ ಆರಂಭವಾದರೆ ನಾವು ನಿಟ್ಟುಸಿರಿಟ್ಟು ಬೇಸಿಗೆ ಮರೆಯುತ್ತೇವೆ. ಮಳೆ ನಮ್ಮ ಭೂಮಿಗೆ ವರದಾನ. ಬೇರೆ ಯಾವುದೇ ತಂತ್ರದಿಂದ ಹೀಗೆ ಇಡೀ ಪರಿಸರದ ಮೇಲೆ ನೀರು ಸಿಂಪಡಿಸಲು ಸಾಧ್ಯವೇ ಇಲ್ಲ. ಹೀಗೆ ಬೀಳುವ ಮಳೆ ನೀರನ್ನು ನಾವು ಹೇಗೆ ಬಳಸಿಕೊಳ್ಳುತ್ತಿದ್ದೇವೆ? ಎಂದರೆ ನಮ್ಮಲ್ಲಿ ಉತ್ತರವೇ ಸಿಗುವುದಿಲ್ಲ. ಕೊನೆಗೆ ಮಳೆ ನೀರು ಸಲೀಸಾಗಿ ಹರಿದು ಹೋಗುವ ವ್ಯವಸ್ಥೆಯೂ ನಮ್ಮಲ್ಲಿಲ್ಲ. ಮಳೆ ನೀರು ಹರಿಯಬೇಕಾದದ್ದು ಮೊದಲು ಕೆರೆ, ಕಟ್ಟೆಗಳಿಗೆ. ಕೆರೆ ತುಂಬಿದರೆ ಅಷ್ಟರಮಟ್ಟಿಗೆ ನಾವು ಬಚಾವಾದಂತೆ. ಆದರೆ ಕೆರೆಗಳೇ ಮಾಯವಾದರೆ ನೀರು ಸಂಗ್ರಹ ಹರಿಯುವುದಾದರೂ ಎಲ್ಲಿಗೆ? ಅವು ತಗ್ಗು ಪ್ರದೇಶದ ಮನೆಗಳಿಗೆ ನುಗ್ಗುತ್ತವೆ. ಹರಿಯುವುದು ನೀರಿನ ಸಹಜ ಗುಣ. ಅದಕ್ಕೆ ನಾವು ಅನುವು ಮಾಡಿಕೊಡಬೇಕು. ಇಲ್ಲದಿದ್ದರೆ ಅದು ಕಂಡಕಡೆಗೆಲ್ಲಾ ಹರಿಯುತ್ತದೆ. ಕೊನೆಗೆ ನಿಷ್ಪ್ರಯೋಜಕವಾಗಿ ನದಿ, ನಂತರ ಸಮುದ್ರ ಸೇರುತ್ತವೆ.

ಈ ಹಿಂದೆ ನಮ್ಮಲ್ಲಿ ಹೇಳಲಾಗುತ್ತಿದ್ದುದೇನೆಂದರೆ, ನಮ್ಮಲ್ಲಿ ಮಳೆಯ ದಿನಗಳು ವರ್ಷದ ಅರ್ಧದಷ್ಟು ದಿನಗಳಾದರೂ ಇರುತ್ತದೆ ಎಂದು. ಈಗ ಆ ದಿನಗಳು ಕಂಡುಬರುವುದು ಅಪರೂಪ. ಆದರೂ ಮಳೆ ಬರುತ್ತದೆ. ಅದು ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾದರೂ ಒಂದಷ್ಟು ದಿನಗಳಾದರೂ ಮಳೆ ಬರುತ್ತದೆ. ಹಾಗೆ ಬರುವ ಮಳೆ ನೀರನ್ನು ನಾವು ಹೇಗೆ ಬಳಸಿಕೊಳ್ಳುತ್ತಿದ್ದೇವೆ? ಮಳೆ ನೀರನ್ನು ಎಷ್ಟರ ಮಟ್ಟಿಗೆ ಭೂಮಿಯಲ್ಲಿ ಇಂಗಿಸುತ್ತಿದ್ದೇವೆ? ಎಂಬುದನ್ನು ಯೋಚಿಸಿದಾಗ ಕಾಲು ಭಾಗದಷ್ಟೂ ಇಲ್ಲ ಎಂಬ ಉತ್ತರ ಸಿಗುತ್ತದೆ. ಭೂಮಿಯು ನೀರನ್ನು ಉತ್ಪಾದಿಸುವುದಿಲ್ಲ! ನಮ್ಮ ಬಾವಿಗಳು, ಕೆರೆ–ಕಟ್ಟೆಗಳು ಹಾಗೂ ನದಿಗಳಿಗೆ ನೀರಿನ ವರತೆಯಿಂದಲೇ ನೀರು ಬರಬೇಕು. ಆ ವರತೆ ಎಂದರೆ ಭೂಮಿಯಲ್ಲಿ ಸಂಗ್ರಹವಾಗುವ ನೀರು. ಈ ರೀತಿ ಸಂಗ್ರಹವಾಗಬೇಕಾದರೆ ಭೂಮಿಯಲ್ಲಿ ನೀರನ್ನು ಇಂಗಿಸಬೇಕು. ಅದು ಮತ್ತೆ ನೀರಿನ ಮೂಲವಾಗಿ ನಮಗೆ ನೀರು ಸಿಗುತ್ತದೆ. ಆದರೆ ನಮಗೆ ಇದರ ಪರಿಕಲ್ಪನೆಯೇ ಇಲ್ಲ. ಭೂಮಿಯೊಳಗೆ ನೀರಿದೆ, ಅದನ್ನು ಕೊಳವೆ ಬಾವಿಯ ಮೂಲಕ ಪಡೆಯಬಹುದು ಎಂಬುದಷ್ಟೇ ನಮಗೆ ಗೊತ್ತಿರುವುದು. ಜಲಾಶಯಗಳಲ್ಲಿ ನೀರು ಸಂಗ್ರಹವಾದಾಗ ಸಾಮಾನ್ಯವಾಗಿ ಜನರು ಕೇಳುವುದು ಆ ನೀರನ್ನು ಕೆರೆ–ಕಟ್ಟೆಗಳಿಗೆ ಹರಿಸಿ ಎಂದು. ಕೆರೆಗೆ ಹರಿದ ನೀರು ಬಹುತೇಕ ಸಮುದ್ರ ಸೇರುತ್ತದೆ. ಅಂದರೆ ವ್ಯರ್ಥವಾಗುತ್ತದೆ. ಇದು ಒಂದು ರೀತಿ ಅಪರಾಧ.

ಇಂದಿನ ವಿಜ್ಞಾನದ ಯುಗವನ್ನು ಕಂಡಾಗ, ವಿಜ್ಞಾನ ಪ್ರಗತಿ ಮುಂದಕ್ಕೆ ಕರೆದೊಯ್ಯುತ್ತಿದೆಯೋ, ಹಿಂದಕ್ಕೆ ಹೋಗುತ್ತಿದೆಯೋ? ಎಂಬ ಸಂಶಯ ಉಂಟಾಗುತ್ತದೆ. ನಮ್ಮ ಹಿಂದಿನ ತಲೆಮಾರು ಇಂದಿನ ಯುಗಕ್ಕಿಂತ ಪ್ರಗತಿದಾಯಕ ಚಿಂತಕರಾಗಿದ್ದರು ಎನಿಸುವುದಿಲ್ಲವೇ?. ಸುಸ್ಥಿರ ಅಭಿವೃದ್ಧಿ ಹರಿಕಾರರಾಗಿದ್ದರು ಅನ್ನಿಸದೇ ಇರದು. ಇದನ್ನು ಕಂಡಾಗ ನಾವು ಮುಂದಕ್ಕೆ ಹೋಗುವುದಕ್ಕಿಂತ ಹಿಂದಕ್ಕೆ ಹೋಗಿದ್ದರೆ ಚೆನ್ನಾಗಿತ್ತು ಎನಿಸುವುದಿಲ್ಲವೇ?

ಎಸ್‌ಆರ್‌ಹೆಚ್ ವಿರುದ್ಧ ಆರ್‌ಆರ್‌ಗೆ ವಿರೋಚಿತ ಸೋಲು



ಇಂದಿನ ಪಂದ್ಯ (ಮೇ 3)
ಮುಂಬೈ ಇಂಡಿಯನ್ಸ್ / ಕೋಲ್ಕತ್ತಾ ನೈಟ್ ರೈಡರ್ಸ್
ಸ್ಥಳ: ಮುಂಬೈ, ವಾಂಖೇಡೆ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ

ಹೈದರಾಬಾದ್, ಮೇ 2– ಪಂದ್ಯದ ಕೊನೆ ಎಸೆತದವರೆಗೂ ಗೆಲುವಿಗಾಗಿ ಹೋರಾಡಿದರೂ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ರಾಜಸ್ಥಾನ್ ರಾಯಲ್ಸ್ 1 ರನ್‌ಗಳ ವಿರೋಚಿತ ಸೋಲು ಅನುಭವಿಸಿದೆ.

ಆ ಮೂಲಕ ಆಡಿರುವ 10 ಪಂದ್ಯಗಳಲ್ಲಿ 8 ಗೆಲುವು, 2 ಸೋಲಿನೊಂದಿಗೆ 16 ಅಂಕ ಗಳಿಸಿ ರಾಜಸ್ಥಾನ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲೇ ಮುಂದುವರೆದರೇ, ಇತ್ತ ಹೈದರಾಬಾದ್ ರಾಜಸ್ಥಾನ್ ವಿರುದ್ಧದ ಪಂದ್ಯ ಗೆಲ್ಲುವ ಮೂಲಕ ಆಡಿರುವ 10 ಪಂದ್ಯಗಳಲ್ಲಿ 6 ಗೆಲುವು, 4 ಸೋಲಿನೊಂದಿಗೆ 12 ಅಂಕಗಳೊಂದಿಗೆ 4ನೇ ಸ್ಥಾನಕ್ಕೇರಿದೆ. ಇಲ್ಲಿನ ರಾಜೀವ್ ಗಾಂಧಿ ಅಂತರಾಷ್ಟ್ರೀಯ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 201 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ 12 ರನ್ ಸಿಡಿಸಿ ಔಟಾದರೆ, ಅನ್ಮೋಲ್‌ಪ್ರೀತ್ ಸಿಂಗ್ 8 ರನ್ ಸಿಡಿಸಿ ಬಹುಬೇಗ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಟ್ರಾವಿಸ್ ಹೆಡ್ ಹಾಗೂ ನಿತೀಶ್ ರೆಡ್ಡಿ 96 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಟ್ರಾವಿಸ್ ಹೆಡ್ 44 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಒಳಗೊಂಡ 58 ರನ್ ಸಿಡಿಸಿದರು. ಮತ್ತೊಂದೆಡೆ ನಿತೀಶ್ ರೆಡ್ಡಿ 42 ಎಸೆತಗಳಲ್ಲಿ ಅಜೇಯ 76 ರನ್ ಸಿಡಿಸಿದರೆ, ಹೆನ್ರಿಚ್ ಕ್ಲಾಸೆನ್ 19 ಎಸೆತಗಳಲ್ಲಿ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ ಅಜೇಯ 42 ರನ್ ಸಿಡಿಸಿದರು. ರಾಜಸ್ಥಾನ್ ಪರ ಆವೇಶ್ ಖಾನ್ 2, ಸಂದೀಪ್ ಶರ್ಮಾ 1 ವಿಕೆಟ್ ಒಪ್ಪಿಸಿದರು. ಹೈದರಾಬಾದ್ ನೀಡಿದ 202 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿ 1 ರನ್‌ಗಳ ವಿರೋಚಿತ ಸೋಲು ಅನುಭವಿಸಿತು. ತಂಡದ ಪರ ಯಶಸ್ವಿ ಜೈಸ್ವಾಲ್ 67, ರಿಯಾನ್ ಪರಾಗ್ 77, ಶಿಮ್ರಾನ್ ಹೆಟ್ಮೆಯರ್ 13, ರೋವ್ಮನ್ ಪೊವೆಲ್ 27 ರನ್ ಗಳಿಸಿದರು. ಭುವನೇಶ್ವರ್ ಕುಮಾರ್ 3, ಪ್ಯಾಟ್ ಕಮ್ಮಿನ್ಸ್ ಹಾಗೂ ಟಿ.ನಟರಾಜನ್ ತಲಾ 2 ವಿಕೆಟ್ ಉರುಳಿಸಿದರು. ಹೈದರಾಬಾದ್ ಪರ ಭುವನೇಶ್ವರ್ ಕುಮಾರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನಾಳೆ ಮಕ್ಕಳ ಜನಪದ ಸಾಹಿತ್ಯ ಕಮ್ಮಟ

ಮೈಸೂರು, ಮೇ 2–ಅದಮ್ಯ ರಂಗ ಶಾಲೆ ಹಾಗೂ ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ನಗರದ ವಿ.ವಿ. ಮೊಹಲ್ಲಾದ ಮಾತೃ ಮಂಡಲಿ ವಿದ್ಯಾಸಂಸ್ಥೆಯಲ್ಲಿ ನಡೆಯುತ್ತಿರುವ 'ಬಾಲಂಗೋಚಿ' ಮಕ್ಕಳ ಬೇಸಿಗೆ ಶಿಬಿರದಲ್ಲಿ ಮೇ 4ರಂದು ಬೆಳಗ್ಗೆ 10.30ಕ್ಕೆ 'ಚಿಣ್ಣರಿಗಾಗಿ ಜನಪದ ಸಾಹಿತ್ಯ ಕಮ್ಮಟ' ನಡೆಯಲಿದೆ ಎಂದು ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ.

ಜನಪದ ಸಾಹಿತ್ಯವನ್ನು ಚಿಣ್ಣರಿಗಾಗಿ ಪರಿಚಯಾತ್ಮಕವಾಗಿ ತಿಳಿಸಿಕೊಡಲಿರುವ ಕಮ್ಮಟವನ್ನು ಜನಪರದ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಎಂ.ಮಹೇಶ್ ಚಿಕ್ಕಲ್ಲೂರು ಉದ್ಘಾಟಿಸಲಿದ್ದು, ಮಾತೃ ಮಂಡಲಿ ವಿದ್ಯಾಸಂಸ್ಥೆಯ ಗೌರವಾಧ್ಯಕ್ಷೆ ಎಂ.ವಿಜಯಲಕ್ಷ್ಮಿ ಅರಸ್ ಅಧ್ಯಕ್ಷತೆ ವಹಿಸುವರು. ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು.

ಕಮ್ಮಟದ ಸಂಪನ್ಮೂಲ ವ್ಯಕ್ತಿಗಳಾದ ಹಿರಿಯ ಕವಯಿತ್ರಿ ಕೆರೋಡಿ ಎಂ. ಲೋಲಾಕ್ಷಿ 'ಮಕ್ಕಳ ಜನಪದ ಕತೆಗಳು', ಕನ್ನಡ ಉಪನ್ಯಾಸಕ, ಗಾಯಕ ಪರಮೇಶ್ ಕೆ. ಉತ್ತನಹಳ್ಳಿ 'ಜನಪದ ಗೀತೆಗಳು', ಕವಿ ಟಿ. ಸತೀಶ್ ಜವರೇಗೌಡ 'ಮಕ್ಕಳ ಜನಪದ ಶಿಶುಪ್ರಾಸಗಳ್', ಲೇಖಕ ಡಾ.ಎಂ.ಮಹೇಶ್ ಚಿಕ್ಕಲ್ಲೂರು 'ಜನಪದ ಗಾದೆ ಮಾತು ಒಗಟು'ಗಳ ಕುರಿತು ಮಾತನಾಡಿ, ಬಳಿಕ ಮಕ್ಕಳ ಜೊತೆಗೆ ಸಂವಾದ ನಡೆಸಲಿದ್ದಾರೆ.

ಮಾಂಟೆಸರಿ, ಎನ್‌ಟಿಟಿ ಶಿಕ್ಷಕ ತರಬೇತಿಯ ನೇರ ಪರೀಕ್ಷೆಗೆ ಅರ್ಜಿ ಆಹ್ವಾನ

ಮೈಸೂರು,ಮೇ 2–ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ, ಮೈಸೂರು ವತಿಯಿಂದ 2023–24ನೇ ಸಾಲಿನ ಎನ್‌ಟಿಟಿ (ನರ್ಸರಿ ಟೀಚರ್ ಟ್ರೈನಿಂಗ್) ಎಂಟಿಟಿ (ಮಾಂಟೆಸರಿ ಟೀಚರ್ ಟ್ರೈನಿಂಗ್) ಹಾಗೂ ಡಿಎನ್‌ಟಿಟಿ(ಡಿಪ್ಲೊಮಾ ಇನ್ ನರ್ಸರಿ ಟೀಚರ್ ಟ್ರೈನಿಂಗ್)ನ ನೇರ ಪರೀಕ್ಷೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಮೇ 10 ಮತ್ತು 11ರಂದು ನಡೆಯಲಿರುವ ಸದರಿ ಪರೀಕ್ಷೆಗಳಲ್ಲಿ ಮಕ್ಕಳ ಮಾನಸಿಕ ಬೆಳವಣಿಗೆ, ಪೌಷ್ಟಿಕಾಂಶಗಳು, ಪೂರ್ವ ಪ್ರಾಥಮಿಕ ಶಿಕ್ಷಣ, ಕಂಪ್ಯೂಟರ್ ಶಿಕ್ಷಣ, ಸಾಮಾನ್ಯ ಜ್ಞಾನ ಕುರಿತ ಪರೀಕ್ಷಾ ಪತ್ರಿಕೆಗಳಿರುತ್ತವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ವಿದ್ಯಾರ್ಹತೆ ಹೊಂದಿರುವ 18ರಿಂದ 55ರ ವಯೋಮಾನದ ಎಲ್ಲಾ ವರ್ಗದ ಆಸಕ್ತರು ಇದರ ಫಲಾನುಭವಿಗಳಾಗಿರುತ್ತಾರೆ. 2024–25ನೇ ಸಾಲಿನ ನೋಂದಣಿ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಆಸಕ್ತರು ಪರೀಕ್ಷಾ ಕ್ರಮ, ಅರ್ಜಿ ಹಾಗೂ ನೋಂದಾವಣಿಗಾಗಿ 8310306882, 9964790442 ಸಂಪರ್ಕಿಸಬಹುದಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೇ 5ಕ್ಕೆ ಕುಮಾರನ್ ಜ್ಯುವೆಲರ್ಸ್ ಉದ್ಘಾಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸುರೇಶ್‌ಕುಮಾರ್ ಮಾತನಾಡಿದರು.

ಮೈಸೂರು,ಮೇ2(ಜಿಎ)–ದಕ್ಷಿಣ ಭಾರತದ ಸಾಂಪ್ರದಾಯಿಕ ಆಭರಣಗಳ ತಯಾರಿ ಹಾಗೂ ಮಾರಾಟದ ಸಂಸ್ಥೆ ಶ್ರೀ ಕುಮಾರನ್ ಜ್ಯುವೆಲರ್ಸ್‌ನಿಂದ ರಾಜ್ಯದಲ್ಲಿಯೇ ಮೊದಲ ಮಳಿಗೆ ಮೇ 5ರಂದು ಬೆಳಗ್ಗೆ 9.30ಕ್ಕೆ ನಗರದಲ್ಲಿ ಪ್ರಾರಂಭಗೊಳ್ಳಲಿದೆ ಎಂದು ಸಂಸ್ಥೆಯ ಸಹಾಯಕ ವ್ಯವಸ್ಥಾಪಕ ಸುರೇಶ್ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರ ಲಷ್ಕರ್ ಮೊಹಲ್ಲಾದ ಬಿ.ಎನ್ ರಸ್ತೆಯಲ್ಲಿರುವ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ನೂತನ ಮಳಿಗೆ ಆರಂಭಗೊಳ್ಳಲಿದೆ. ಇದು ಸಂಸ್ಥೆಯ 48ನೇ ಆಭರಣ ಮಳಿಗೆಯಾಗಿದ್ದು, ಮುಖ್ಯಸ್ಥ ಟಿ.ಕೆ.ಚಂದ್ರನ್ ಉದ್ಘಾಟಿಸುವರು. ಒಂದು ಕುಟುಂಬ ಉದ್ಯಮವಾಗಿ ಚೆನ್ನೈ ಸಿಲ್ಕ್ಸ್‌ನೊಂದಿಗೆ ಆರಂಭಗೊಂಡ ನಮ್ಮ ಪಯಣಕ್ಕೆ 62 ವರ್ಷಗಳ ಅನುಭವವಿದ್ದು, ಚಿನ್ನ, ಬೆಳ್ಳಿ, ವಜ್ರಾಭರಣ ಮಾರಾಟದಲ್ಲಿಯೂ ಉತ್ತಮ ಹೆಸರು ಗಳಿಸಿದ್ದೇವೆ. ಉದ್ಘಾಟನೆ ಪ್ರಯುಕ್ತ ಈ ಭಾಗದ ಗ್ರಾಹಕರಿಗೆ ಮೇ 5ರಿಂದ 12ರವರೆಗೆ ವಿಶೇಷ ರಿಯಾಯಿತಿ ಸೌಲಭ್ಯ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ವಿನಾಯಗಮ್, ಕಾರ್ಯಕಾರಿ ನಿರ್ದೇಶಕ ವಿಕ್ರಮ್ ನಾರಾಯಣ್, ಸಂಪರ್ಕಾಧಿಕಾರಿ ಒ.ವಿ. ಜಯಕುಮಾರ್ ಉಪಸ್ಥಿತರಿದ್ದರು.

ಮೇ 5, ಸ್ವಾಮಿ ಚಿನ್ಮಯಾನಂದರ ಜಯಂತ್ಯುತ್ಸವ



ಮೈಸೂರು,ಮೇ2–ಮೈಸೂರಿನ ಚಿನ್ಮಯ ಮಿಷನ್ ವತಿಯಿಂದ ಮೇ 5ರಂದು ಸಂಜೆ 5.30 ರಿಂದ ರಾತ್ರಿ 8 ಗಂಟೆವರೆಗೆ, ಮಿಷನ್ನಿನ ಶಾಖೆ, 'ಶ್ರೀ ಗುರುದೇವ ದತ್ತ ಸನ್ನಿಧಿ', #148, 6ನೇ ಮುಖ್ಯರಸ್ತೆ, 3ನೇ ಹಂತ, ಗೋಕುಲಂ (ಡಾರ್ಕ್ಸ್ ಕಾರ್ನರ್ ಹತ್ತಿರ) ಇಲ್ಲಿ ಪೂಜ್ಯ ಸ್ವಾಮಿ ಚಿನ್ಮಯಾನಂದರ ಜಯಂತ್ಯುತ್ಸವ ಏರ್ಪಡಿಸಲಾಗಿದೆ.

ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಮಹಾಮೇಧಾನಂದಜೀ ಮಹಾರಾಜ್ ಅವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿರುವ ಈ ಕಾರ್ಯಕ್ರಮದಲ್ಲಿ ಮೈಸೂರಿನ ಹೆಸರಾಂತ ಪತ್ರಿಕೆಗಳಾದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ'ದ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಮುಖ್ಯ ಅಭ್ಯಾಗತರಾಗಿ ಪಾಲ್ಗೊಳ್ಳಲಿದ್ದಾರೆ. ಮೈಸೂರು ಚಿನ್ಮಯ ಮಿಷನ್ನಿನ ಆಚಾರ್ಯರಾದ ಸ್ವಾಮಿನಿ ಕಾಶಿಕಾನಂದಾಜಿ, ಚಿನ್ಮಯಾನಂದರ ಜೀವನದ ಧ್ಯೇಯ, ಕಾರ್ಯ ಹಾಗೂ ಚಿನ್ಮಯ ಮಿಷನ್ನಿನ ಕಾರ್ಯ ಚಟುವಟಿಕೆಗಳ ಚಿತ್ರಣವನ್ನು ನೀಡಲಿದ್ದಾರೆ. ಅಂದಿನ ಕಾರ್ಯಕ್ರಮದಲ್ಲಿ ಭಜನೆ, ಗುರು ಪಾದುಕಾ ಪೂಜೆ ಮತ್ತು ಮಂಗಳಾರತಿ ಸಹ ಇರುತ್ತದೆ. ಮೈಸೂರಿನ ಎಲ್ಲಾ ಅಧ್ಯಾತ್ಮಿಕ ಸಾಧಕ ಬಂಧುಗಳು ಭಾಗವಹಿಸಬಹುದು.

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಹಂಚಿಕೆಯಲ್ಲಿ ಡಿಸಿಎಂ ಡಿಕೆಶಿ ಪಾತ್ರ: ಆರೋಪ ಸತ್ಯಕ್ಕೆ ದೂರ

ಮೈಸೂರು,ಮೇ2(ಜಿಎ)–ಪ್ರಜ್ವಲ್ ರೇವಣ್ಣ ಲೈಂಗಿಕ ಶೋಷಣೆ ಪ್ರಕರಣಕ್ಕೆ ಸಂಬಂಧಿಸಿದ ಪೆನ್‌ಡ್ರೈವ್ ಹಂಚಿಕೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಕೈವಾಡವಿದೆ ಎಂಬ ಆರೋಪ ಸತ್ಯಕ್ಕೆ ದೂರವಾದದ್ದು ಎಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣ ಮಹಿಳೆಯರ ಮಾನ ಹರಾಜು ಮಾಡಿದ್ದಾರೆ. ಆಮಿಷವೊಡ್ಡಿ, ಬಲಾತ್ಕಾರವಾಗಿ, ಹೆದರಿಸಿ, ಬೆದರಿಸಿ ಮಹಿಳೆಯರೊಂದಿಗೆ ವಿಡಿಯೋ ಕಾಲ್ ಮಾಡಿ, ಸ್ಕ್ರೀನ್ ಶಾಟ್ ತೆಗೆದುಕೊಂಡು, ನಂತರ ಲೈಂಗಿಕ ದೌರ್ಜನ್ಯಕ್ಕೆ ಬಳಸಿಕೊಂಡು ಅಮಾನವೀಯ ಕೃತ್ಯ ಎಸಗಿದ್ದಾರೆ. ಹೀಗಿದ್ದರೂ ಕೇಂದ್ರ ಬಿಜೆಪಿ ಸರ್ಕಾರ ಇದನ್ನು ವಿರೋಧಿಸದಿರುವುದು ಮಹಿಳೆಯರ ಕಡೆಗಣನೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕುರುಬಾರಹಳ್ಳಿ ಪ್ರಕಾಶ್, ಎಸ್.ಎ. ರಹೀಂ ಉಪಸ್ಥಿತರಿದ್ದರು.

ಮೇ 5, 'ರಜಾ–ಮಜಾ' ಸಮಾರೋಪ


ಮೈಸೂರು: ಮಂಡ್ಯ ರಮೇಶ ಅವರ ನಟನರಂಗ ಶಾಲೆಯ 'ರಜಾ–ಮಜಾ' ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಮೇ 5ರಂದು ಸಂಜೆ 4ಕ್ಕೆ ಕರ್ನಾಟಕ ಕಲಾಮಂದಿರದಲ್ಲಿ ನಡೆಯಲಿದೆ. ಮೈಸೂರು ಮತ್ತು ಇತರ ಕಡೆಯ ಸುಮಾರು 300 ಮಕ್ಕಳು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ, ಹಿರಿಯ ರಂಗಕರ್ಮಿ ಪ್ರೊ. ಲಕ್ಷ್ಮಿ ಚಂದ್ರಶೇಖರ್, ನಟರಾದ ಅಶ್ವತ್ ಯಾಚೇನಹಳ್ಳಿ, ಕುರಿ ಪ್ರತಾಪ್, ಭಾಗ್ಯಲಕ್ಷ್ಮಿ ತಾಂಡವ್ ಖ್ಯಾತಿಯ ಸುದರ್ಶನ್ ರಂಗಪ್ರಸಾದ್, ಜೀ ಕನ್ನಡ ನಾನ್ ಫಿಕ್ಷನ್ ಹೆಡ್ ಹಾಗೂ ಜೀ ಪಿಚ್ಚರ್ ಮುಖ್ಯಸ್ಥ ಶರಣಯ್ಯ, ಸಿನಿಮಾ ತಾರೆ ಸಂಗೀತಾ ಭಟ್, ನಟನದ ಅಧ್ಯಕ್ಷ ಕೆ.ಎಸ್.ಆನಂದ್ ಬಾಬು ಹಾಗೂ ಸುಪ್ರೀಮ್ ಪಬ್ಲಿಕ್ ಶಾಲೆಯ ಮುಖ್ಯಸ್ಥ ರವೀಂದ್ರಸ್ವಾಮಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ನಟನದ ಸಂಸ್ಥಾಪಕ ಅಧ್ಯಕ್ಷ ಎನ್.ಸುಬ್ರಹ್ಮಣ್ಯಂ ಅವರ ಗೌರವಾರ್ಥ ಈ ಬಾರಿಯ ನಟನ ಪುರಸ್ಕಾರ– 2024 ಅನ್ನು ವೃತ್ತಿರಂಗಭೂಮಿಯ ಹಿರಿಯ ನಟಿ ಎಚ್.ಟಿ.ಇಂದಿರಮ್ಮ ಅವರಿಗೆ ನೀಡಲಾಗುವುದು. ಕಾರ್ಯಕ್ರಮದಲ್ಲಿ ಮಕ್ಕಳು ಶಿಬಿರದುದ್ದಕ್ಕೂ ಅಭ್ಯಸಿಸಿದ ಎಲ್ಲ ಕಲಾ ಪ್ರಕಾರಗಳ ಪ್ರದರ್ಶನವೂ ನಡೆಯಲಿದೆ. ಉಚಿತ ಪ್ರವೇಶವಿದ್ದು. ಮೊ. 7259537777, 9480468327, 9845595505 ಸಂಪರ್ಕಿಸಬಹುದು.

ಕಾಣೆಯಾಗಿದ್ದಾರೆ



ಸರಗೂರು, ಮೇ 2–ತಾಲೂಕಿನ ನೆಮ್ಮನಹಳ್ಳಿ ಗ್ರಾಮದ ಪುಟ್ಟಸ್ವಾಮಿ ಅವರ ಪತ್ನಿ ಪಾರ್ವತಮ್ಮ (55) ಅವರು ಕಳೆದ 15 ದಿನಗಳ ಹಿಂದೆ ಸರಗೂರು ಪಟ್ಟಣದ ಬ್ಯಾಂಕ್‌ಗೆ ಹೋಗಿ ಬರುವುದಾಗಿ ಮನೆಯಿಂದ ತೆರಳಿದವರು ಇನ್ನೂ ಮನೆಗೆ ಮರಳದೇ ಕಾಣೆಯಾಗಿದ್ದಾರೆ. ಈ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಮೊ.ಸಂಖ್ಯೆ 7353427214, 7090073909 ಅಥವಾ ಸರಗೂರು ಪೊಲೀಸ್ ಠಾಣೆ ದೂ.ಸಂಖ್ಯೆ 08228265542, 9480805064 ಗೆ ತಿಳಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಇಂದು, ನಾಳೆ ನೀರು ಸರಬರಾಜಲ್ಲಿ ವ್ಯತ್ಯಯ



ಮೈಸೂರು, ಮೇ 2–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಂತ ಹಾಗೂ 3ನೇ ಹಂತ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ 66/11 ಕೆ.ವಿ. ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಇರುವುದರಿಂದ ಮೇ 3 ಮತ್ತು 4ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಹಾಗಾಗಿ ಸಿಎಸ್‌ಆರ್, ಹೆಚ್‌ಎಲ್‌ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ.42ರಿಂದ 45, ವಾರ್ಡ್ ನಂ.47, ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳು, ಕುಂಬಾರ ಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ, ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎಬಿಸಿ ಬಡಾವಣೆ, ಈರನಗೆರೆ, ಸಿದ್ದಿಖಿ ನಗರ, ಶಿವರಾತ್ರೀಶ್ವರನಗರ, ತಿಲಕ್ ನಗರ, ಬಡೇ ಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ ಎನ್.ಆರ್. ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯತ್ಯಯವಾಗಲಿದೆ.

ಕಲೆ, ಸಾಹಿತ್ಯ, ಸಂಸ್ಕೃತಿಯಿಂದ ಬದುಕು ಹಸನು

ಸಾಹಿತ್ಯ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿದ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಮತ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಸಾಹಿತ್ಯ ಸಂಭ್ರಮದಲ್ಲಿ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ವಿವಿಧ ಪುಸ್ತಕ ಲೋಕಾರ್ಪಣೆ ಮಾಡಿದರು.

ಮೈಸೂರು, ಮೇ 2(ಎಂಟಿವೈ)– ಮನುಷ್ಯತ್ವವೇ ಮರೆಯಾಗುತ್ತಿರುವ ಕಾಲಘಟ್ಟದಲ್ಲಿ ಮತ್ತೆ ಮಾನವರಾಗಿ ಬದುಕು ಹಸನು ಮಾಡಿಕೊಳ್ಳಲು ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಥಾಬಿಂದು ಪ್ರಕಾಶನ ಮಂಗಳೂರು ಸಂಸ್ಥೆ ಆಯೋಜಿಸಿದ್ದ ಸಾಹಿತ್ಯ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಒತ್ತಡ ಹಾಗೂ ವಿವಿಧ ಕಾರಣದಿಂದ ಮನುಷ್ಯರಲ್ಲಿ ಮನುಷ್ಯತ್ವ ಮರೆಯಾಗುತ್ತಿದೆ. ಮಾನವೀಯತೆ ದೂರವಾಗಿ ಮೃಗಗಳಂತೆ ವರ್ತಿಸುತ್ತಿರುವುದನ್ನು ಕಾಣಬಹುದು. ಏನಾದರೂ ಆಗುವ ಮೊದಲು ಮಾನವರಾಗಬೇಕು. ಅದಕ್ಕಾಗಿ ಎಲ್ಲರೂ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಮಾನವರಾಗಬೇಕು. ಕಲೆ ಮತ್ತು ಸಂಸ್ಕೃತಿಗೆ ಪೂರಕವಾದ ಇಂತಹ ಸಾಹಿತ್ಯ ಸಂಭ್ರಮ ಕಾರ್ಯಕ್ರಮಗಳು ಹೆಚ್ಚಿನ ಮಟ್ಟದಲ್ಲಿ ನಡೆದರೆ ಸಮಾಜಕ್ಕೆ ಒಳಿತಾಗಲಿದೆ ಎಂದರು.

ಇದೇ ವೇಳೆ ಡಾ.ಟಿ.ತ್ಯಾಗರಾಜು ಮೈಸೂರು ಅವರ 'ಮನದ ಮಾತು', ಪುಷ್ಪಾ ನಾಗತಿಹಳ್ಳಿ ಅವರ 'ಅನುಗತ' ಮತ್ತು 'ಧರೆಯಂಚಿನ ಮರ', ಶೋಭಿತಾ ಮೈಸೂರು ಅವರ 'ಸಂಜೆಯ ಸೂರ್ಯ', ಲತಾ ಕೆ.ಎಸ್.ಹೆಗಡೆ ಅವರ 'ಕನ್ನಡ ತರುಲತೆ' ಮತ್ತು 'ಗುಬ್ಬಿಯ ಗೂಡು', ಹಾ.ಮ.ಸತೀಶ್ ಬೆಂಗಳೂರು ಅವರ 'ನುಡಿಹಾರ', 'ಜಿನುಗುವ ಸೋನೆ ಮಳೆ' ಸೇರಿ ಎಂಟು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ 20 ಮಂದಿ ಸಾಧಕರಿಗೆ 'ಕನ್ನಡ ಕಂಠೀರವ' ರಾಷ್ಟ್ರೀಯ ಪ್ರಶಸ್ತಿ ಹಾಗೂ ಕನ್ನಡತಿ ಲಕ್ಷ್ಮಮ್ಮಣಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪಿ.ವಿ.ಪ್ರದೀಪ್ ಕುಮಾರ್, ಸಾಹಿತಿಗಳಾದ ಡಾ.ಕೊಳ್ಚಪ್ಪೆ ಗೋವಿಂದ ಭಟ್, ಪ್ರಭಾಶಾಸಿ ಜೋಶ್ಯುಲ ಮೈಸೂರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದಿನಿಂದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಾಂಸ್ಕೃತಿಕ ಉತ್ಸವ

ಮೈಸೂರು, ಮೇ 2(ಜಿಎ)–ಮೈಸೂರಿನ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ (ವಿವಿಸಿಇ) ಸಂಸ್ಥೆಯಲ್ಲಿ ಮೇ 3ರಿಂದ 5ರವರೆಗೆ ಮೂರು ದಿನಗಳ ವಾರ್ಷಿಕ ಸಾಂಸ್ಕೃತಿಕ ಉತ್ಸವ ವಿದ್ಯುತ್ 2024 ಅನ್ನು ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಾಂಸ್ಕೃತಿಕ ಕಾರ್ಯದರ್ಶಿ ಡಾ.ಬಿ.ಜಗದೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ದಿನಗಳ ಈ ವಿದ್ಯುತ್ ಕಾರ್ಯಕ್ರಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರು ಚಾಲನೆ ನೀಡುವರು. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ವಿದ್ಯಾವರ್ಧಕ ಸಂಘದ ಖಜಾಂಚಿ ಶ್ರೀಶೈಲ ರಾಮಣ್ಣನವರ್, ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ ಉಪಸ್ಥಿತರಿರುವರು. ಉದ್ಘಾಟನೆಯ ನಂತರ ಮೈಸೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಎಲ್ಲರನ್ನು ಆಕರ್ಷಿಸುವ ಸಾಕಷ್ಟು ಸ್ಪರ್ಧೆಗಳನ್ನು ಒಳಗೊಂಡಿದ್ದು, ಪ್ರಮುಖವಾಗಿ ಡಾಗ್ ಶೋ, ಆಟೋ ಎಕ್ಸ್‌ಪೋ, ರಂಗೋಲಿ, ಫೀಟ್ ಆನ್ ಫೈರ್, ವಾಯ್ಸ್ ಆಫ್ ವಿವಿಸಿಇ, ಮೆಹೆಂದಿ, ಬೆಂಕಿಯಿಲ್ಲದೆ ಅಡುಗೆ ಮಾಡುವುದು, ಬಾಕ್ಸ್ ಕ್ರಿಕೆಟ್ ಚಾಂಪಿಯನ್‌ಶಿಪ್, ಫ್ಯಾಶನ್ ಫ್ರಾಂಟಿಯರ್, ಟಗ್ ಆಫ್ ವಾರ್, ಪಿಎಸ್ 4 ಕ್ಲಾಷ್, ಬ್ಯಾಡ್ಮಿಂಟನ್, ಫೋಟೋಗ್ರಫಿ ಸ್ಪರ್ಧೆ ಮತ್ತು ರೀಲ್ಸ್ ಸ್ಪರ್ಧೆಗಳು ಸೇರಿವೆ. ಮೊದಲ ದಿನದ ಸಂಜೆ ಸ್ಯಾಂಡಲ್‌ವುಡ್ ನೈಟ್ ಮತ್ತು ಲಗೋರಿ ಬ್ಯಾಂಡ್ ಪ್ರೇಕ್ಷಕರನ್ನು ರಂಜಿಸಲಿದೆ. ಎರಡನೇ ದಿನ ಬಾಲಿವುಡ್ ನೈಟ್ ಮತ್ತು ರಾಘವ್ ಚೈತನ್ಯ ಅವರಿಂದ ಗಾಯನ ಕಾರ್ಯಕ್ರಮ ಇರಲಿದೆ. ಮೂರನೇ ದಿನದಂದು ಡಿಜೆ ರಾತ್ರಿ ಮತ್ತು ಅಂತರರಾಷ್ಟ್ರೀಯ ಡಿಜೆ ಕ್ಯಾಂಡಿಸ್ ರೆಡ್ಡಿಂಗ್ ತಂಡ ಯುವ ಪ್ರೇಕ್ಷಕರನ್ನು ರಂಜಿಸಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಹಾಯಕ ಪ್ರಾಧ್ಯಾಪಕರಾದ ಪುನೀತ್, ಅಮೃತವರ್ಷಿಣಿ, ವಿದ್ಯಾರ್ಥಿಗಳಾದ ಪ್ರಜ್ವಲ್ ಕಲಾಲ್, ಧರಣೇಶ್, ಹರ್ಷಿತ್, ಇಂಪನಾ ಇದ್ದರು.

ಬೇಸಿಗೆ ಶಿಬಿರಗಳು ಮಕ್ಕಳ ಮನೋವಿಕಾಸಕ್ಕೆ ಪೂರಕ

ಪರಮಹಂಸ ಯೋಗ ಮಹಾವಿದ್ಯಾಲಯದ ಬೇಸಿಗೆ ಶಿಬಿರದಲ್ಲಿ ಅರಸೀಕೆರೆ ಯೋಗಾನಂದ ಅಭಿಮತ



ಮೈಸೂರು, ಮೇ 2–ಬೇಸಿಗೆ ಶಿಬಿರಗಳು ಮಕ್ಕಳ ಮನೋವಿಕಾಸಕ್ಕೆ ಪೂರಕ ಎಂದು ರಂಗಕರ್ಮಿ ಅರಸೀಕೆರೆ ಯೋಗಾನಂದ ಅಭಿಪ್ರಾಯಪಟ್ಟಿದ್ದಾರೆ.

ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯವು ಇಂಟರ್ ನ್ಯಾಷನಲ್ ಯೋಗ ಸ್ಕೂಲ್, ಇಂಟರ್ ನ್ಯಾಷನಲ್ ಯೋಗ ಆರ್ಗನೈಜೇಷನ್ ಸಹಯೋಗದಲ್ಲಿ ಏರ್ಪಡಿಸಿದ್ದ ಚಿಣ್ಣರ ಬೇಸಿಗೆ ಶಿಬಿರದ ಸಮಾರೋಪದಲ್ಲಿ ಮಾತನಾಡಿದರು.

ಈ ಶಿಬಿರದಲ್ಲಿ ಮಕ್ಕಳ ಬೆಳವಣಿಗೆಗೆ ಪೂರಕವಾದ ಅಂತರ್‌ದೃಷ್ಟಿ, ಯೋಗ, ಸಂಗೀತ, ನೃತ್ಯ, ನಾಟಕ ಕಲಿಸಲಾಗಿದೆ. ಪಠ್ಯದ ಜೊತೆಗೆ ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳು ಕೂಡ ಮುಖ್ಯ. ಆದ್ದರಿಂದ ಪೋಷಕರು ಮಕ್ಕಳ ಆಸಕ್ತಿಯನ್ನು ಗುರುತಿಸಿ, ಅವರ ಆಸಕ್ತಿಯ ಕ್ಷೇತ್ರದಲ್ಲೂ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.

ಮೊದಲೆಲ್ಲಾ ಬೇಸಿಗೆ ರಜೆ ಬಂದಾಗ ಮಕ್ಕಳು ಅಜ್ಜ ಮನೆಗೆ ಹೋಗುತ್ತಿದ್ದವು. ಆ ರೀತಿಯ ಕೂಡು ಕುಟುಂಬ ವ್ಯವಸ್ಥೆ ಇತ್ತು. ಈಗ ಮಕ್ಕಳಿಗೆ ಆ ರೀತಿಯ ಜೀವನಾನುಭವವೇ ಸಿಗುತ್ತಿಲ್ಲ ಎಂದು ಅವರು ವಿಷಾದಿಸಿದರು.

ಬೇಸಿಗೆ ಶಿಬಿರದ ಎರಡನೇ ತಂಡಕ್ಕೆ ಚಾಲನೆ ನೀಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಮಕ್ಕಳನ್ನು ಟಿವಿ ಮತ್ತು ಮೊಬೈಲ್‌ನಿಂದ ಆಚೆ ತರಲು ಈ ರೀತಿಯ ಶಿಬಿರಗಳು ನೆರವಾಗುತ್ತವೆ ಎಂದರು.

ಪರಮಹಂಸ ಯೋಗ ಮಹಾವಿದ್ಯಾಲಯದ ಅಧ್ಯಕ್ಷ ಶಿವಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಯೋಗ ಒಕ್ಕೂಟದ ಉಪಾಧ್ಯಕ್ಷ ರಮೇಶ್ ಕುಮಾರ್ ಮಾತನಾಡಿದರು. ಅಂತಾರಾಷ್ಟ್ರೀಯ ಯೋಗ ತರಬೇತುದಾರ ಎಚ್.ಎಂ. ರವಾಣಿಕರ್ ಮುಖ್ಯಅತಿಥಿಯಾಗಿದ್ದರು. ಸುಬ್ರಹ್ಮಣ್ಯಂ, ವಸಂತಲಕ್ಷ್ಮಿ ಇದ್ದರು.

ಪ್ರಜ್ವಲ್ ರೇವಣ್ಣ ಎಸಗಿರುವುದು ಹೀನಕೃತ್ಯ

ಹರಿಹರ ಆನಂದಸ್ವಾಮಿ ಕಿಡಿ

ಮೈಸೂರು,ಮೇ 2(ಜಿಎ)–ಪ್ರಜ್ವಲ್ ರೇವಣ್ಣ ಮತ್ತು ಎಚ್.ಡಿ. ರೇವಣ್ಣ ಅವರ ಮಹಿಳೆಯರ ಲೈಂಗಿಕ ಶೋಷಣೆ ಪ್ರಕರಣ ಇಡೀ ಪ್ರಜ್ಞಾವಂತ ಸಮಾಜವೇ ಬೆಚ್ಚಿಬೀಳುವಂತಹ ಅಮಾನುಷ ಮತ್ತು ಹೀನಕೃತ್ಯ ಎಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಮುಖಂಡ ಹರಿಹರ ಆನಂದಸ್ವಾಮಿ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ನೂರಾರು ಹೆಣ್ಣುಮಕ್ಕಳ ಅಸಹಾಯಕತೆಯನ್ನು ಬಳಸಿಕೊಂಡು ಆಟಿಕೆ ವಸ್ತುವೆಂಬಂತೆ ಬಳಸಿ ಬಿಸಾಡಿರುವುದು ಅಕ್ಷಮ್ಯ ಅಪರಾಧವಾಗಿದೆ. ಈ ಘಟನಾವಳಿಗಳನ್ನು ವಿವರಿಸ ಹೊರಟರೆ ವಿಶ್ಲೇಷಕರೇ ವಿಕೃತಿಗಳಾಗಿ ಬಿಂಬಿತರಾಗುತ್ತಾರೆ. ಅವರ ವಯಸ್ಸು ಅಂತಸ್ತು ಅವರ ಸ್ಥಿತಿಗತಿಗಳನ್ನು ದುರುಪಯೋಗ ಮಾಡಿಕೊಂಡು ಘೋರ ಕೃತ್ಯವೆಸಗಿರುವುದು ಅಕ್ಷಮ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರಜ್ವಲ್‌ನ ಹೀನಕೃತ್ಯದ ಹಿನ್ನೆಲೆಯಲ್ಲಿ ರಾಜಕಾರಣಿ, ಅಧಿಕಾರಶಾಹಿ ಹಾಗೂ ಕಾಮಾಂಧ ದುಷ್ಟಶಕ್ತಿಗಳೆಲ್ಲದರ ಕುರಿತು ಸಮಗ್ರ ತನಿಖೆಯಾಗಬೇಕು. ಯಾರಿಗೂ ಕಾಣದಂತಿರಬೇಕೆಂದು ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿಯುವಂತಿರುವ ಕಾಮುಕ, ಗೋಸುಂಬೆಗಳ ಬಣ್ಣ ಬಯಲು ಮಾಡಲು ಸಂತ್ರಸ್ತ ಮಹಿಳೆಯರು ಎಲ್ಲಾ ಮುಜುಗರಗಳನ್ನು ಮೆಟ್ಟಿನಿಂತು ಆಧುನಿಕ ಯುಗದ ಕಾಮುಕ ಕೀಚಕವಧೆಗೆ ಮುಂದಾಗಬೇಕೆಂದು ಸಂತ್ರಸ್ತ ಮಹಿಳೆಯರಲ್ಲಿ ಮನವಿ ಮಾಡಿದರು. ಗೋಷ್ಠಿಯಲ್ಲಿ ಬಂಗವಾದಿ ನಾರಾಯಣಪ್ಪ, ಸತೀಶ್, ಕಿರಣ್, ಬಾಬು ಹಾಜರಿದ್ದರು

ಮೇ 5ರಿಂದ ಭಗಿನಿ ರಾಮೋತ್ಸವ ಸಂಗೀತ ಹಬ್ಬ

ಮೈಸೂರು, ಮೇ.2(ಜಿಎ)–ಮೈಸೂರಿನ ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ಶಾಲೆ ಆವರಣದಲ್ಲಿ ಮೇ 5ರಿಂದ 11ರವರೆಗೆ 'ಭಗಿನಿ ರಾಮೋತ್ಸವ – ಸಂಗೀತ ಹಬ್ಬ' ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಎಸ್‌ಎಸ್ ಟ್ರಸ್ಟಿ ಗುರುರಾಜ್ ಮಾತನಾಡಿ, ಅಂದು, ಸಂಜೆ 6 ಗಂಟೆಗೆ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಉತ್ಸವಕ್ಕೆ ಚಾಲನೆ ನೀಡುವರು. ಬಳಿಕ ವಿದ್ವಾನ್ ಮಹದೇವಪ್ಪ ಸ್ಮರಣೆಯಲ್ಲಿ ಪಿಟೀಲು ವಾದನ ನಡೆಯಲಿದೆ. ಪ್ರತಿದಿನವೂ ಸಂಜೆ 6.30ರಿಂದ 9ರವರೆಗೆ ವಿವಿಧ ಸಂಗೀತ ಕಲಾವಿದರಿಂದ ಕಾರ್ಯಕ್ರಮ ನಡೆಯುವುದು ಎಂದರು. ಗೋಷ್ಠಿಯಲ್ಲಿ ಟ್ರಸ್ಟ್ ಸದಸ್ಯರಾದ ಸ್ವರ್ಣ ಕುಮಾರ್, ಮುರಳಿ ಉಪಸ್ಥಿತರಿದ್ದರು.

ಕ್ರೀಡಾ ಕ್ಷೇತ್ರಕ್ಕೆ ಶ್ರೀನಿವಾಸಪ್ರಸಾದ್, ವಾಸು ಅವರಿಂದ ಹೆಚ್ಚಿನ ಉತ್ತೇಜನ

ಮೈಸೂರು ಅಥ್ಲೆಟಿಕ್ ಸಂಸ್ಥೆ, ಕ್ರೀಡಾಭಿಮಾನಿಗಳ ಬಳಗದಿಂದ ಭಾವಪೂರ್ಣ ಶ್ರದ್ಧಾಂಜಲಿ



ಮೈಸೂರು,ಮೇ2–ಇತ್ತೀಚೆಗೆ ಇಹಲೋಕ ತ್ಯಜಿಸಿದ ಸಂಸದ ವಿ. ಶ್ರೀನಿವಾಸಪ್ರಸಾದ್ ಹಾಗೂ ಮಾಜಿ ಶಾಸಕ ವಾಸು ಅವರು ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಉತ್ತೇಜನ ನೀಡುತ್ತಿದ್ದರು ಎಂದು ಮೈಸೂರು ಅಥ್ಲೆಟಿಕ್ಸ್ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಕ್ರೀಡಾಭಿಮಾನಿಗಳು ಸ್ಮರಿಸಿಕೊಂಡರು.

ಮೈಸೂರು ಅಥ್ಲೆಟಿಕ್ ಸಂಸ್ಥೆ (ಎಂಡಿಎಎ), ಕ್ರೀಡಾಭಿಮಾನಿಗಳ ಬಳಗದ ವತಿಯಿಂದ ಮೈಸೂರು ವಿವಿ ಓವೆಲ್ ಮೈದಾನದ ಪಕ್ಕದ ಲಯನ್ಸ್ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸಾಮಾನ್ಯವಾಗಿ ರಾಜಕಾರಣಿಗಳು ಕ್ರೀಡೆ ಬಗ್ಗೆ ಆಸಕ್ತಿ ತೋರಿಸುವುದು ಕಡಿಮೆ. ಆದರೆ ಶ್ರೀನಿವಾಸಪ್ರಸಾದ್ ಹಾಗೂ ವಾಸು ಅವರು ಮೈಸೂರಿನಲ್ಲಿ ನಡೆಯುವ ಎಲ್ಲಾ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಮೈಸೂರಿನ ಕ್ರೀಡಾಪಟುಗಳು ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಬೇಕು ಎಂಬುದು ಅವರ ಅಭಿಲಾಷೆಯಾಗಿತ್ತು ಎಂದರು.

ಮೈಸೂರು ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ.ವೆಂಕಟೇಶ್ ಮಾತನಾಡಿ, ನಮ್ಮ ತಂದೆಯವರು (ಚಿಕ್ಕವೆಂಕಟಪ್ಪ) ಕೂಡ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾಗಿದ್ದರು. ನಂತರ ಡಾ.ಸಿ. ಕೃಷ್ಣ ನಿರ್ದೇಶಕರಾದರು. ಆ ಕಾಲದಿಂದಲೂ ನಾನು ನೋಡಿದಂತೆ ಶ್ರೀನಿವಾಸಪ್ರಸಾದ್ ಹಾಗೂ ವಾಸು ಅವರು ಕ್ರೀಡೆಗೆ ಪ್ರೋತ್ಸಾಹ ನೀಡುತ್ತಿದ್ದರು ಎಂದು ಸ್ಮರಿಸಿದರು.

ಮೈಸೂರು ಅಥ್ಲೆಟಿಕ್ ಸಂಸ್ಥೆಯ ಅಧ್ಯಕ್ಷರೂ ಆದ ಅಂತಾರಾಷ್ಟ್ರೀಯ ಅಥ್ಲೆಟ್ ಎಸ್.ಸೋಮಶೇಖರ್ ಮಾತನಾಡಿ, ವಾಸು ಅವರು ನಮ್ಮ ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು. ಅವರಿಗೆ ಮೈಸೂರಿನಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಆರಂಭವಾಗಬೇಕು ಎಂಬ ಕನಸಿತ್ತು. ಈ ವಿಚಾರವನ್ನು ವಿಧಾನಸಭೆಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದರು. ಈ ದಿಸೆಯಲ್ಲಿ ಸಾಕಷ್ಟು ಹೋರಾಟ ಕೂಡ ಮಾಡಿದ್ದರು. ಮುಂಬರುವ ದಿನಗಳಲ್ಲಿ ಇದು ಕಾರ್ಯಗತವಾಗುವಂತೆ ನೋಡಿಕೊಳ್ಳಬೇಕಾಗಿದೆ ಎಂದರು.

ಅದೇ ರೀತಿ ವಿ. ಶ್ರೀನಿವಾಸಪ್ರಸಾದ್ ಅವರು ಕೂಡ ಕ್ರೀಡೆಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದರು. ಕ್ರೀಡೆಗೆ ಸಂಬಂಧಿಸಿದಂತೆ ಯಾವುದೇ ಕಾರ್ಯಕ್ರಮಗಳಿಗೆ ಆಹ್ವಾನಿಸಿದರೂ ಬಂದು ಕ್ರೀಡಾಪಟುಗಳನ್ನು ಉತ್ತೇಜಿಸುತ್ತಿದ್ದರು ಎಂದರು.

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಡಾ.ಸಿ.ಕೃಷ್ಣ ಮಾತನಾಡಿ, ನನಗೆ ಶ್ರೀನಿವಾಸಪ್ರಸಾದರು 1968, ವಾಸು ಅವರು 1971 ರಿಂದಲೂ ಪರಿಚಯ. ಅಂದಿನಿಂದ ಜೀವಿತದ ಕೊನೆಯವರೆಗೂ ಇಬ್ಬರೊಂದಿಗೂ ಅತ್ಯುತ್ತಮ ಒಡನಾಟವಿತ್ತು. ಇಬ್ಬರು ಕ್ರೀಡಾಭಿಮಾನಿಗಳು ಎಂದರು.

ಶ್ರೀನಿವಾಸಪ್ರಸಾದ್ ಅವರು ಫುಟ್‌ಬಾಲ್ ಪಟುವಾಗಿದ್ದರು. ಅಶೋಕಪುರಂನಲ್ಲಿ ಇಂದಿಗೂ ನಡೆಯುತ್ತಿರುವ ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ ಸಂಸ್ಥಾಪಕರು. ಕ್ರೀಡಾ ಕೋಟಾದಲ್ಲಿ ಹಲವಾರು ಮಂದಿಗೆ ಉದ್ಯೋಗ ದೊರೆಯಲು ಕೂಡ ಕಾರಣರಾಗಿದ್ದಾರೆ ಎಂದರು.

ಎಂಡಿಎಎ ಕಾರ್ಯದರ್ಶಿ ಶ್ರೀಕಾಂತ್, ಉಪಾಧ್ಯಕ್ಷರಾದ ಸಿ.ಕೆ. ಮುರಳೀಧರನ್, ಚೈನ್‌ಸಿಂಗ್ ರಾಜಪುರೋಹಿತ್, ಜಂಟಿ ಕಾರ್ಯದರ್ಶಿ ಸಂಪಂಗಿ, ಖಜಾಂಚಿ ಉಮೇಶ್, ಸ್ನಾತಕೋತ್ತರ ಕ್ರೀಡಾ ಮಂಡಳಿ ಸಹಾಯಕ ನಿರ್ದೇಶಕ ಟಿ.ಎಸ್. ರವಿ, ತರಬೇತುದಾರ ಪುನೀತ್ ಸೇರಿದಂತೆ ಎಲ್ಲಾ ಪದಾಧಿಕಾರಿಗಳು, ಕ್ರೀಡಾಭಿಮಾನಿಗಳು, ಅಥ್ಲೆಟಿಕ್ ಶಿಬಿರದಲ್ಲಿ ಪಾಲ್ಗೊಂಡಿರುವ ಚಿಣ್ಣರು, ಅವರ ಪೋಷಕರು ಇದ್ದರು.

ಹಿರಿಯ ನಾಗರಿಕರ ಮಂಡಳಿಯಿಂದ ಉಚಿತ ಆರೋಗ್ಯ ತಪಾಸಣೆ



ಮೈಸೂರು, ಮೇ 2– ಹಿರಿಯ ನಾಗರಿಕರ ಮಂಡಳಿಯು ಹಿರಿಯ ನಾಗರಿಕರಿಗೆ ನಾರಾಯಣ ಹೃದಯಾಲಯದಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಆರೋಗ್ಯ ತಪಾಸಣಾ ಶಿಬಿರಕ್ಕೆ ಉತ್ತಮ ಪ್ರತಿಕ್ರಿಯೆ ಕಂಡು ಬಂತು. ರಕ್ತದ ಒತ್ತಡ ಮಧುಮೇಹ, ಇಸಿಜಿ, ಶ್ರವಣದೋಷ ಪರೀಕ್ಷೆ, ವಿಶೇಷವಾಗಿ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣೆಯನ್ನು ಇತ್ತೀಚೆಗೆ ಮೈಸೂರು ನಾರಾಯಣ ಹೃದಯಾಲಯ ಆಸ್ಪತ್ರೆಯಲ್ಲಿ ವೈದ್ಯರಿಂದ ನಡೆಸಲಾಯಿತು. ಶಿಬಿರದಲ್ಲಿ ಸುಮಾರು 50ಕ್ಕೂ ಹೆಚ್ಚು ಮಂದಿ ಹಿರಿಯ ನಾಗರಿಕರು ತಪಾಸಣೆಗೆ ಒಳಗಾಗಿ ಸಲಹೆ ಪಡೆದರು.

ಟ್ರಸ್ಟ್‌ನ ಅಧ್ಯಕ್ಷ ಗೌಡಪ್ಪ ಮಾತನಾಡಿ, ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದ ನಾರಾಯಣ ಆಸ್ಪತ್ರೆಯ ವೈದ್ಯರು ಮತ್ತು ತಂಡದವರಿಗೆ ಕೃತಜ್ಞತೆ ಸಲ್ಲಿಸಿದರು.

ಮಂಡಳಿ ಅಧ್ಯಕ್ಷ ಡಾ.ಎಚ್.ಎಂ. ನಾಗರಾಜ ಮಾತನಾಡಿ, ಹಿರಿಯ ನಾಗರಿಕರ ಅನುಕೂಲಕ್ಕಾಗಿ ಈ ರೀತಿಯ ಆರೋಗ್ಯ ಶಿಬಿರ ನಿಗದಿತ ಸಮಯದಲ್ಲಿ ಮಂಡಳಿಯಿಂದ ನಡೆಸಲಾಗುವುದು.

ಶಿಬಿರದಲ್ಲಿ ಕೆ.ಎಸ್.ಕೃಷ್ಣ, ಪ್ರೊ. ಜವರೇಗೌಡ, ಕೆ.ವಿ.ರಾಮನಾಥ್, ಕೆ.ಬಿ. ರಾಮಣ್ಣ, ಎಲ್.ಎನ್.ಆಚಾರ್, ಶ್ರೀಧರ್, ವೆಂಕಟೇಶಯ್ಯ, ಸುಶೀಲಾ ಮರೀಗೌಡ, ಡಿ.ಆರ್.ಶ್ರೀನಿವಾಸ್, ಸ್ವಾಮಿಗೌಡ, ರಂಗನಾಥರಾವ್ ಮತ್ತಿತರರು ಉಪಸ್ಥಿತರಿದ್ದರು.

ರಿಯಾಲಿಟಿ ಶೋನಲ್ಲಿ ಮೆಕ್ಯಾನಿಕ್‌ಗಳ ಅವಹೇಳನ : ಕ್ಷಮೆಗೆ ಆಗ್ರಹ

ಮೈಸೂರು, ಮೇ 2(ಜಿಎ)–ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಮಹಾನಟಿ ರಿಯಾಲಿಟಿ ಶೋನಲ್ಲಿ ಮೆಕ್ಯಾನಿಕ್ ಮದುವೆ ಆದರೆ ಗ್ರೀಸ್ ತಿಂದು ಬದುಕಬೇಕಾಗುತ್ತದೆ ಎಂಬ ಸಂಭಾಷಣೆ ಹೇಳುವ ಮೂಲಕ ವಾಹನ ದುರಸ್ತಿಯಲ್ಲಿ ತೊಡಗಿರುವ ಮೆಕ್ಯಾನಿಕ್‌ಗಳನ್ನು ಅಪಮಾನಿಸಲಾಗಿದೆ. ಹೀಗಾಗಿ ವಾಹಿನಿಯವರು ಕೂಡಲೇ ಕ್ಷಮೆ ಯಾಚಿಸಬೇಕು. ಇಲ್ಲದಿದ್ದಲ್ಲಿ ಮಾನನಷ್ಟ ಮೊಕದ್ದಮೆ ಹೂಡಲಾಗುವುದು ಎಂದು ಮೈಸೂರು ನಗರ ಜಿಲ್ಲಾ ದ್ವಿಚಕ್ರ ವಾಹನಗಳ ದುರಸ್ತಿಗಾರರ ಒಕ್ಕೂಟ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಉಪಾಧ್ಯಕ್ಷ ಕೆ.ಲಿಂಗರಾಜು ಮಾತನಾಡಿ, ಶಿಕ್ಷಣದ ಕೊರತೆ, ಆರ್ಥಿಕ ದುಸ್ಥಿತಿ ಕಾರಣ ಹಲವಾರು ಮಂದಿ ಮೆಕ್ಯಾನಿಕ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಲ್ಲಿ ಹಲವರ ಮಕ್ಕಳು ವೈದ್ಯರು, ಎಂಜಿನಿಯರ್‌ಗಳಾಗಿದ್ದು, ಕೆಲವರು ವಿದೇಶದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಇದು ಗೌರವಯುತವಾಗಿ ಜೀವನ ನಡೆಸಲು ಇರುವ ವೃತ್ತಿಯೂ ಆಗಿದೆ. ಹೀಗಿದ್ದರೂ ಈ ರೀತಿಯ ಶ್ರಮಜೀವಿಗಳನ್ನು ಅಪಹಾಸ್ಯ ಮಾಡುವ ಸಂಭಾಷಣೆ ಹೇಳಿಸಲಾಗಿದೆ. ಆದ್ದರಿಂದ ವಾಹಿನಿ ಹಾಗೂ ಸಂಬಂಧಿಸಿದವರು ಕ್ಷಮೆ ಯಾಚಿಸಬೇಕು. ಈ ನಿಟ್ಟಿನಲ್ಲಿ ರಾಜ್ಯಾದ್ಯಂತ ಪ್ರತಿಭಟನೆ ನಡೆದಿದ್ದು, ನಿರ್ಲಕ್ಷಿಸಿದರೆ ಮಾನನಷ್ಟ ಮೊಕದ್ದಮೆ ಹೂಡಲಾಗುವುದೆಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಶಿವಕುಮಾರ್, ಎನ್.ರವೀಂದ್ರ ಕುಮಾರ್, ಮುಜಾಹಿದ್ ಪಾಷ, ನಟೇಶ್, ಚೋಟೇಸಾಬ್ ಉಪಸ್ಥಿತರಿದ್ದರು.



ಚಾಮರಾಜನಗರ ತಾಲೂಕಿನ ಯರಗನಹಳ್ಳಿ ಗ್ರಾಮದಲ್ಲಿ ಶ್ರೀರಾಮ ಪಟ್ಟಾಭಿಷೇಕ ಕಾರ್ಯಕ್ರಮ ನೆರವೇರಿಸಲಾಯಿತು. ಪಟ್ಟಾಭಿಷಿಕ್ತ ಶ್ರೀ ಕೋದಂಡ ರಾಮಸ್ವಾಮಿ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಕಾವೇರಿ ಆಶ್ರಮದ ಸುಧಾರಣೆಗೆ ಅಖಿಲ ಕೊಡವ ಸಮಾಜದಿಂದ ಹತ್ತು-ಹಲವು ಉಪಯುಕ್ತ ಸಲಹೆ

ವಿರಾಜಪೇಟೆ, ಮೇ 2-ವಿರಾಜಪೇಟೆಯ ಭಕ್ತ ಜನಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಕಾವೇರಿ ಆಶ್ರಮದ ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿರಾಜಪೇಟೆಯಲ್ಲಿರುವ ಅಖಿಲ ಕೊಡವ ಸಮಾಜವು ಕೆಲವು ಕ್ರಮಗಳನ್ನು ಕೈಗೊಳ್ಳುವಂತೆ ಆಶ್ರಮದ ಟ್ರಸ್ಟಿಗಳಿಗೆ ಪತ್ರ ರವಾನಿಸಿದೆ.

ಕಾವೇರಿ ಆಶ್ರಮವು ಕೊಡವ ಸಮುದಾಯದವರ ಸಂಕಷ್ಟಗಳಿಗೆ ಸ್ಪಂದಿಸಲು ಕೊಡವ ಜನಾಂಗದ ಮುಂದಾಳುಗಳು, ದಾನಿಗಳು ಕೈಜೋಡಿಸಿ ಸ್ಥಾಪಿಸಿದ ಸಂಸ್ಥೆಯಾಗಿದ್ದು, ಹಾಲಿ ಸಂಕಷ್ಟದಲ್ಲಿರುವ ಕಾವೇರಿ ಆಶ್ರಮದ ವಿಚಾರಗಳನ್ನು ಜನಾಂಗದ ಮುಂದಿಟ್ಟು ಸೂಕ್ತ ಪರಿಹಾರ ಮಾರ್ಗಗಳ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಂಡು ಆಶ್ರಮವನ್ನು ಉಳಿಸುವ ಸದುದ್ದೇಶದೊಂದಿಗೆ ಈ ಸಲಹೆಗಳನ್ನು ನೀಡಲಾಗಿದೆ ಎಂದು ಅಖಿಲ ಕೊಡವ ಸಮಾಜ ತಿಳಿಸಿದೆ.

ತಮಗೆ ಇಷ್ಟವಿಲ್ಲದಿದ್ದರೂ 10 ವರ್ಷದ ಹಿಂದೆ ಶ್ರೀ ವಿವೇಕಾನಂದ ಶರಣ ಸ್ವಾಮಿಯವರು ತಮ್ಮನ್ನು ಒತ್ತಾಯಪೂರ್ವಕವಾಗಿ ಟ್ರಸ್ಟ್‌ಗೆ ಸೇರಿಸಿದ್ದಾರೆ ಎಂದು ಇತ್ತೀಚೆಗೆ ನಡೆದ ಸಭೆಯಲ್ಲಿ ಬೆಂಗಳೂರು ಮೂಲದ ಮಧುಸೂದನ ಆನಂದಪುರಿ ಅವರು ಹೇಳಿದ್ದಾರೆ. ಆದರೆ ಅವರು ಆಶ್ರಮಕ್ಕೆ ಸಂಬಂಧಿಸಿದ ಸುಮಾರು 40 ಎಕರೆ ಜಮೀನು, ಶಾಲೆ, ಇತರ ಕಟ್ಟಡಗಳು ಸೇರಿದಂತೆ ಈ ಟ್ರಸ್ಟ್‌ನ ಆಜೀವ ಕಾರ್ಯಾಧ್ಯಕ್ಷರಾಗಿ ತಾವೇ ಮುಂದುವರೆಯಲು ಷಡ್ಯಂತ್ರ ನಡೆಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಸ್ವಾಮಿ ಮಧುಸೂದನ ಆನಂದಪುರಿ ಅವರನ್ನು ತಕ್ಷಣವೇ ಟ್ರಸ್ಟ್‌ನಿಂದ ಕೈಬಿಟ್ಟು ಅವರ ಸೇವೆಯನ್ನು ಆಧ್ಯಾತ್ಮಿಕ ವಿಷಯಗಳಿಗೆ ಮಾತ್ರ ಸೀಮಿತಗೊಳಿಸುವುದು.

ಟ್ರಸ್ಟ್‌ನ ಮೂಲ ಹಾಗೂ ಹಾಲಿ ಸದಸ್ಯರ, ಪದಾಧಿಕಾರಿಗಳ ಪಟ್ಟಿಯನ್ನು ತ್ವರಿತವಾಗಿ ಪ್ರಕಟಿಸುವುದು. ಆಶ್ರಮದ ಭಕ್ತಾದಿಗಳು ಹಾಗೂ ಹಿತೈಷಿಗಳನ್ನೊಳಗೊಂಡಂತೆ ತುರ್ತು ಮಹಾ ಸಭೆ ನಡೆಸಿ ಟ್ರಸ್ಟ್‌ಗೆ ಹೊಸದಾಗಿ ಯುವಕರು ಮತ್ತು ಮಧ್ಯ ವಯಸ್ಕರನ್ನು ನೇಮಿಸುವುದು. ಕಳೆದ 10 ವರ್ಷದಲ್ಲಿ ನಡೆದ ಸಭೆಗಳ ನಡವಳಿಕೆಗಳನ್ನು ತುರ್ತು ಮಹಾ ಸಭೆಯಲ್ಲಿ ಮಂಡಿಸುವುದು ಎಂದಿರುವ ಅಖಿಲ ಕೊಡವ ಸಮಾಜದ ಪದಾಧಿಕಾರಿಗಳು ಏ.26ರ ನಂತರ ಮಹಾ ಸಭೆ ನಡೆಸದೆ ತೆಗೆದುಕೊಳ್ಳುವ ನಿರ್ಧಾರಗಳು ಭಕ್ತರ ಹಾಗೂ ಹಿತೈಷಿಗಳ ಒಪ್ಪಿಗೆಗೆ ಒಳಪಟ್ಟಿರುವುದಿಲ್ಲ ಎಂದು ತಿಳಿಸಿದ್ದಾರೆ.

ಆಶ್ರಮದ ಕೋರ್ಟು-ಕಚೇರಿ ಕೆಲಸಗಳನ್ನು ನಿರ್ವಹಿಸಲು ಸಮರ್ಥ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕು ಮತ್ತು ಕೊಡವ ಜನಾಂಗದ ಇಬ್ಬರು ಸೂಕ್ತ ವಕೀಲರನ್ನು ನೇಮಿಸುವುದು. ಆಶ್ರಮದ ವಾಸಿಯಾಗಿರುವ ಆತ್ಮಾನಂದ ಸ್ವಾಮಿಯವರನ್ನು ಪೊಲೀಸ್ ಕಂಪ್ಲೇಂಟ್ ಕೊಡಿಸುವುದು, ಕೋರ್ಟ್‌ನಲ್ಲಿ ಇಂಜೆಕ್ಷನ್ ಆರ್ಡರ್ ಪಡೆಯಲು ಉಪಯೋಗಿಸುವುದು, ವಕಾಲತ್ತು ಮುಂತಾದ ವ್ಯವಹಾರಗಳನ್ನು ನಡೆಸುವುದು, ಪತ್ತೇದಾರಿ ಕಾರ್ಯ ಹಾಗೂ ಭಕ್ತಾದಿಗಳ ಸಂಭಾಷಣೆಯನ್ನು ರೆಕಾರ್ಡ್ ಮಾಡುವಂತಹ ದುರುದ್ದೇಶ ಪೂರಿತ ಕೆಲಸಗಳಿಗೆ ಉಪಯೋಗಿಸುವುದರಿಂದ ಕೈಬಿಟ್ಟು ಅವರನ್ನು ದೈನಂದಿನ ಆಧ್ಯಾತ್ಮಿಕ ಸೇವೆಗಳಿಗೆ ಮಾತ್ರ ಬಳಸುವುದು ಅಥವಾ ಸ್ವಾಮಿ ಮಧುಸೂದನ ಆನಂದಪುರಿಯವರ ಆಶ್ರಮಕ್ಕೆ ವಾಪಸ್ ಕಳುಹಿಸುವ ವ್ಯವಸ್ಥೆ ಮಾಡಬೇಕು.

ಆಶ್ರಮ ವಾಸಿಯಾಗಿರುವ ಚೌರೀರ ಕುಟುಂಬದ ರಘುಸ್ವಾಮಿಯವರು ಆಶ್ರಮದ ಆಧ್ಯಾತ್ಮಿಕ ಸೇವೆಯಲ್ಲಿ ಮುಂದುವರೆಯಲು ಅನುಕೂಲವಾಗುವಂತೆ ಅವರನ್ನು ಮುಖ್ಯಸ್ಥರನ್ನಾಗಿ ತ್ವರಿತವಾಗಿ ನೇಮಕ ಮಾಡುವುದು. ಅಖಿಲ ಕೊಡವ ಸಮಾಜದ ಹಾಲಿ ಅಧ್ಯಕ್ಷ, ದೇಶ ತಕ್ಕರಾದ ಪರದಂಡ ಸುಬ್ರಮಣಿ ಕಾವೇರಿಯಪ್ಪ ಹಾಗೂ ಸಮಾಜದ ಮತ್ತೊಬ್ಬ ಸದಸ್ಯರಿಗೆ ಟ್ರಸ್ಟ್‌ನಲ್ಲಿ ಸದಸ್ಯತ್ವ ನೀಡುವುದು ಅಲ್ಲದೇ ವಿರಾಜಪೇಟೆ ಮತ್ತು ಅಮ್ಮತ್ತಿ ಕೊಡವ ಸಮಾಜದ ಅಧ್ಯಕ್ಷರಿಗೂ, ದಾನಿಗಳ ಕುಟುಂಬದ ಸದಸ್ಯರಿಗೂ ಟ್ರಸ್ಟ್‌ನಲ್ಲಿ ಸದಸ್ಯತ್ವ ನೀಡುವುದು.

ಭಕ್ತ ಜನಸಂಘಕ್ಕೆ ಎಲ್ಲರೂ ಸದಸ್ಯರಾಗಲು ಮುಕ್ತ ಅವಕಾಶ ನೀಡುವುದು. ಆಶ್ರಮದ ಸ್ಥಿರ ಮತ್ತು ಚರಾಸ್ತಿಗಳ ಮತ್ತು ಇತರ ಜಮೀನುಗಳ ವಿವರಗಳನ್ನು ದಾಖಲೆಯೊಂದಿಗೆ ಹೊಸದಾಗಿ ನೇಮಕಗೊಳ್ಳುವುದು ಟ್ರಸ್ಟ್‌ನ ಪದಾಧಿಕಾರಿಗಳಿಗೆ ಒಪ್ಪಿಸುವುದು. ಆಶ್ರಮದ ಇತರ ಸೂಕ್ಷ್ಮ ವಿಷಯಗಳ ಬಗ್ಗೆ ಹೊಸ ಟ್ರಸ್ಟಿಗಳಿಗೆ ವಿವರಿಸುವುದು ಹಾಗೂ ಮುಂದಿನ ದಿನಗಳಲ್ಲಿ ಭಕ್ತರಿಗೆ ಆಶ್ರಮಕ್ಕೆ ಪ್ರವೇಶ ಹಾಗೂ ದರ್ಶನಕ್ಕೆ ನಿರ್ಬಂಧ ವಿಧಿಸದಂತೆ ನೋಡಿಕೊಳ್ಳುವುದು ಮುಂತಾದ ಸಲಹೆಗಳನ್ನು ಆಶ್ರಮದ ಟ್ರಸ್ಟಿಗಳಿಗೆ ಬರೆದ ಪತ್ರದಲ್ಲಿ ಅಖಿಲ ಕೊಡವ ಸಮಾಜದ ಪದಾಧಿಕಾರಿಗಳು ತಿಳಿಸಿದ್ದಾರೆ.

ಭೂ ಪರಿವರ್ತನೆ ಹುನ್ನಾರ
ಸಿಎನ್‌ಸಿಯಿಂದ ಸರ್ಕಾರಕ್ಕೆ ದೂರು ಸಲ್ಲಿಕೆ

ಮಡಿಕೇರಿ: ಕೊಡಗು ಜಿಲ್ಲೆಯ ಸಿದ್ದಾಪುರ ವಿಭಾಗದ ಕಾವೇರಿ ಜಲಾನಯನ ಪ್ರದೇಶದ 2400 ಎಕರೆ ಕಾಫಿ ತೋಟವನ್ನು ಭೂ ಪರಿವರ್ತನೆ ಮಾಡುವ ಮೂಲಕ ಕೃಷಿಯೇತರ ಚಟುವಟಿಕೆಗೆ ಬಳಸಲು ಪ್ರಯತ್ನಿಸಲಾಗುತ್ತಿದ್ದು, ಈ ಸಂಬಂಧ ಸರ್ಕಾರಕ್ಕೆ ದೂರು ಸಲ್ಲಿಸಿರುವುದಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.


ಎನ್.ಯು.ನಾಚಪ್ಪ

ಹಸಿರು ಪರಿಸರದಿಂದ ಕೂಡಿರುವ ಕಾಫಿ ತೋಟವನ್ನು ಭೂ ಪರಿವರ್ತಿಸುವ ಮೂಲಕ ದೈತ್ಯಾಕಾರದ ವಿಲ್ಲಾಗಳು, ಬೃಹತ್ ಟೌನ್‌ಶಿಪ್‌ಗಳು ಮತ್ತು ಮನೆಗಳನ್ನು ನಿರ್ಮಿಸುವ ಸಾಧ್ಯತೆ ಇದೆ. ಇದು ಮುಂದೆ ಭಾರಿ ಅನಾಹುತಗಳಿಗೆ ಕಾರಣವಾಗಬಹುದು. ಭೂ ಪರಿವರ್ತನದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ರಾಷ್ಟ್ರಪತಿ, ಪ್ರಧಾನಿ, ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಯುನೆಸ್ಕೋದ ಮಹಾನಿರ್ದೇಶಕರು, ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣ್ಯನ್‌ಸ್ವಾಮಿ ಅವರಿಗೆ ಜಿಲ್ಲಾಧಿಕಾರಿ ಮೂಲಕ ಸಿಎನ್‌ಸಿ ದೂರು ಸಲ್ಲಿಸಿದೆ ಎಂದು ತಿಳಿಸಿದ್ದಾರೆ.

ಕಾವೇರಿ ನದಿ ಪಾತ್ರದ ಹಸಿರು ಹೊದಿಕೆಯನ್ನು ನಾಶಪಡಿಸಲು ಹುನ್ನಾರ ನಡೆಸಲಾಗಿದೆ. ಒಂದು ದೊಡ್ಡ ಭೂ ಪ್ರದೇಶದ ಪರಿಸರವನ್ನು ನಾಶ ಪಡಿಸಿದಲ್ಲಿ ಅದು ಭೌಗೋಳಿಕ ಅಸಮತೋಲನಕ್ಕೆ ಕಾರಣವಾಗಬಹುದು. ಅಲ್ಲಿನ ಶಾಂತಿ, ಪ್ರಶಾಂತತೆ ಮತ್ತು ನೆಮ್ಮದಿ ಭಂಗವಾಗಬಹುದು. ಇಲ್ಲಿ ನಡೆಯುವ ಪ್ರಕ್ರಿಯೆಗಳು ಕೃಷಿ ವಿಜ್ಞಾನಿ ಡಾ.ಸ್ವಾಮಿನಾಥನ್ ಅವರ ಶಿಫಾರಸುಗಳಿಗೆ ವಿರುದ್ಧವಾಗಿದೆ ಎಂದು ನಾಚಪ್ಪ ಆರೋಪಿಸಿದ್ದಾರೆ.

ದಶಕಗಳ ಹಿಂದೆ ಕೊಡಗು ಹೋಂ ಸ್ಟೇ ವ್ಯವಹಾರದ ಮೂಲಕ ಪ್ರವಾಸೋದ್ಯಮ ನಕ್ಷೆಯನ್ನು ಪ್ರವೇಶಿಸಿದಾಗ, ಇದು ಸ್ಥಳೀಯರ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸಲು ಮತ್ತು ಮುಖ್ಯವಾಗಿ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶವನ್ನು ಹೊಂದಿತ್ತು. ಆದರೆ, ಈಗ ಇಡೀ ಭೂಮಿಯನ್ನು ಎನ್‌ಆರ್‌ಐಗಳು, ಎಂಎನ್‌ಸಿಗಳು, ಕಾರ್ಪೋರೇಟ್ ವಲಯ ಸೇರಿದಂತೆ ಹಲವರು ಆಕ್ರಮಿಸಿಕೊಂಡಿದ್ದಾರೆ. ರೆಸಾರ್ಟ್ ಮತ್ತು ವಿಲ್ಲಾ ಮಾಫಿಯಾಗಳು ಅಕ್ರಮ ಪರಿವರ್ತನೆ ಮೂಲಕ ಭೂಮಿಯನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಹಸಿರ ಪರಿಸರದ ಕಾವೇರಿಯ ನೆಲೆಬೀಡು ಕೊಡವ ಲ್ಯಾಂಡ್ ಅನ್ನು ಉಳಿಸಿಕೊಳ್ಳಲು ಸಿಎನ್‌ಸಿ ಸಂಘಟನೆ ಹೋರಾಟ ನಡೆಸಲಿದೆ ಎಂದು ಹೇಳಿಕೆಯಲ್ಲಿ ಎಚ್ಚರಿಸಿದ್ದಾರೆ.

ವಾಲ್ನೂರು ತ್ಯಾಗತ್ತೂರು ಗ್ರಾಮಕ್ಕೆ ಮರಗಳ ದಾಖಲಾತಿಗೆ ತೆರಳಿದ

ಅರಣ್ಯ ಸಿಬ್ಬಂದಿಗೆ ತರಾಟೆ

ಮಡಿಕೇರಿ, ಮೇ.2-ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂಪನ್ಮೂಲ ನಿರ್ವಹಣೆ ಕಚೇರಿಯ ಆದೇಶದಂತೆ ಖಾಸಗಿ ಭೂಮಿಯಲ್ಲಿರುವ ಮರಗಳ ದಾಖಲಾತಿಗೆ ತೆರಳಿದ ಅರಣ್ಯ ಸಿಬ್ಬಂದಿಯನ್ನು ಜಾಗದ ಮಾಲೀಕರು ಮತ್ತು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡ ಘಟನೆ ಕುಶಾಲನಗರ ಬಳಿಯ ವಾಲ್ನೂರು ತ್ಯಾಗತ್ತೂರು ಗ್ರಾಮದಲ್ಲಿ ನಡೆದಿದೆ.


ಮರಗಳ ದಾಖಲಾತಿಗೆ ತೆರಳಿದ ಅರಣ್ಯ ಸಿಬ್ಬಂದಿಯನ್ನು ವಾಲ್ನೂರು ತ್ಯಾಗತ್ತೂರು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು.

ಖಾಸಗಿ ಮತ್ತು ಜಮ್ಮಾ ಜಾಗದಲ್ಲಿ ಬೆಳೆದಿರುವ ಮರಗಳನ್ನು ತಲತಲಾಂತರದಿಂದ ಸಂರಕ್ಷಿಸಿಕೊಂಡು ಬರಲಾಗುತ್ತಿದೆ. ಆದರೆ, ಮಾಲೀಕರಿಗೆ ಯಾವುದೇ ನೋಟಿಸ್ ನೀಡದೆ ಏಕಪಕ್ಷೀಯವಾಗಿ ಮರಗಳ ದಾಖಲಾತಿ ಕಾರ್ಯ ನಡೆಸಲು ಆದೇಶ ನೀಡುವ ಮೂಲಕ ರಾಜ್ಯ ಸರ್ಕಾರ ರೈತರಿಗೆ ತೊಂದರೆ ನೀಡಿ, ತುಘಲಕ್ ನೀತಿ ಅನುಸರಿಸುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ ಮಾಲೀಕರು ಮತ್ತು ಗ್ರಾಮಸ್ಥರು, ಆಕ್ರೋಶ ವ್ಯಕ್ತಪಡಿಸಿದರು.

ಖಾಸಗಿ ಜಾಗದಲ್ಲಿ ಬೆಳೆದಿರುವ ಮರಗಳ ದಾಖಲಾತಿ ಕಾರ್ಯ ನಡೆಸಿದ ಬಳಿಕ ಅವುಗಳನ್ನು ಕಡಿದು ಮಾರಾಟ ಮಾಡಿ, ಹಣವನ್ನು ರಾಜ್ಯ ಸರ್ಕಾರದ ಉಚಿತ ಭಾಗ್ಯಗಳಿಗೆ ವಿನಿಯೋಗಿಸಲಾಗುತ್ತದೆ. ಮರಗಳ ದಾಖಲಾತಿ ಕಾರ್ಯದ ಬಗ್ಗೆ ಜಿಲ್ಲೆಯ ಶಾಸಕರು ಮತ್ತು ಮಾಜಿ ಶಾಸಕರ ಗಮನಕ್ಕೆ ತರಲಾಗುವುದು. ಗ್ರಾಮದಲ್ಲಿ ಯಾವುದೇ ಕಾರಣಕ್ಕೂ ಮರಗಳ ದಾಖಲಾತಿ ಕಾರ್ಯ ನಡೆಸಲು ಅವಕಾಶ ನೀಡುವುದಿಲ್ಲ. ಈ ಬಗ್ಗೆ ಹೋರಾಟ ನಡೆಸಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಸಿದರು.

ವಿರಾಜಪೇಟೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಮಾತನಾಡಿ, ವಿರಾಜಪೇಟೆ ವಿಭಾಗದಲ್ಲೂ ಖಾಸಗಿ ಜಾಗದಲ್ಲಿ ಸರ್ಕಾರಿ ಮರಗಳ ದಾಖಲಾತಿ ಮಾಡಿಕೊಳ್ಳಲಾಗುತ್ತಿದೆ. ಪೊನ್ನಂಪೇಟೆ ಮತ್ತು ಸುತ್ತಮುತ್ತಲಿನಲ್ಲಿ ಸರ್ಕಾರಿ ಮರಗಳ ದಾಖಲಾತಿ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದರು.

ವಸ್ತುಸ್ಥಿತಿ ಕುರಿತು ಮೇಲಧಿಕಾರಿಗಳಿಗೆ ವರದಿ ಸಲ್ಲಿಕೆ

ಕರ್ನಾಟಕ ಅರಣ್ಯ ನಿಯಮಾವಳಿ 1969ರ ನಿಯಮ 133ರ ಪ್ರಕಾರ ಖಾಸಗಿ ಭೂಮಿಯಲ್ಲಿ ಬೆಳೆದಿರುವಂತಹ ಮರಗಳನ್ನು ದಾಖಲು ಮಾಡಿ ಪಟ್ಟಿ ಮಾಡುವಂತೆ ಅರಣ್ಯ ಇಲಾಖೆಯ ಕೇಂದ್ರ ಕಚೇರಿಯಿಂದ ಜ.24ರಂದು ಸುತ್ತೋಲೆ ಬಂದಿದೆ. ಆ ಪ್ರಕಾರ ಕ್ರಮ ವಹಿಸಲು ಅರಣ್ಯ ಇಲಾಖೆ ಸಿಬ್ಬಂದಿಗೆ ಸೂಚಿಸಲಾಗಿದ್ದು, ಅದರಂತೆ ಕೆಲ ವಲಯಗಳಲ್ಲಿ ಮರಗಳ ದಾಖಲಾತಿ ಮಾಡಲಾಗಿದೆ. ಕೆಲವು ಕಡೆಗಳಲ್ಲಿ ರೈತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವಸ್ತುಸ್ಥಿತಿಯ ಕುರಿತು ಮೇಲಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು. ಜಮೀನು, ತೋಟಗಳಿಗೆ ತೆರಳಿ ಮರಗಳ ದಾಖಲು ಮಾಡುವ ಸಂದರ್ಭ ಜಾಗದ ಮಾಲೀಕರ ಗಮನಕ್ಕೆ ತರಬೇಕು. ಸರ್ಕಾರದ ಸುತ್ತೋಲೆಯನ್ನು ತೋರಿಸುವಂತೆ ಇಲಾಖೆ ಸಿಬ್ಬಂದಿಗೆ ನಿರ್ದೇಶನ ನೀಡಲಾಗುವುದು ಎಂದು ಮಡಿಕೇರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್ ತಿಳಿಸಿದರು.

ಕಾರ್ಮಿಕರ ಬದುಕು ಮರೆತ ಸರ್ಕಾರ

ವಿರಾಜಪೇಟೆ, ಮೇ 2-ದೇಶದ ಕಾರ್ಮಿಕರ ಬದುಕಿನ ಜವಾಬ್ದಾರಿಯನ್ನು ಸರ್ಕಾರ ಸಂಪೂರ್ಣವಾಗಿ ಮರೆತಿದೆ ಎಂದು ಎಐಸಿಸಿಟಿಯು ಸಂಘಟನೆಯ ಕೇಂದ್ರ ಸಮಿತಿಯ ಕ್ಲಿಫ್ಟನ್ ರೊಜಾರಿಯೋ ಹೇಳಿದರು.



ವಿರಾಜಪೇಟೆಯಲ್ಲಿ ಕಾರ್ಮಿಕರ ದಿನಾಚರಣೆ ಅಂಗವಾಗಿ ಕಾರ್ಮಿಕರು ಮೆರವಣಿಗೆ ನಡೆಸಿದರು.

ಪಟ್ಟಣದ ತಾಲೂಕು ಮೈದಾನದಲ್ಲಿ ಅಖಿಲ ಭಾರತ ಕಾರ್ಮಿಕ ಸಂಘಟನೆ (ಎಐಸಿಸಿಟಿಯು) ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸರ್ಕಾರ ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು. ಎಲ್ಲಾ ಜನತೆಗೂ ಆಹಾರ ಮತ್ತು ಉದ್ಯೋಗ ಒದಗಿಸಬೇಕು. 10 ವರ್ಷಗಳಿಂದ ಕೇಂದ್ರ ಸರ್ಕಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ನಿರುದ್ಯೋಗಿಗಳಿಗೆ ಕೂಡಲೇ ಉದ್ಯೋಗ ನೀಡಬೇಕು. ಕನಿಷ್ಠ 35 ರೂ. ಸಾವಿರ ವೇತನ ನಿಗದಿ ಮಾಡಬೇಕು. ಗುತ್ತಿಗೆ ಪದ್ಧತಿ ರದ್ದಾಗಬೇಕು. ಎಲ್ಲಾ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಬೇಕೆಂದು ಆಗ್ರಹಿಸಿದರು.

ಸಂಘಟನೆ ಜಿಲ್ಲಾ ಅಧ್ಯಕ್ಷ ಎಂ.ಕೆ.ಮೋಹನ್ ಮಾತನಾಡಿ, ಜಿಲ್ಲೆಯಲ್ಲಿ ಅನೇಕ ಕಾರ್ಮಿಕರು ಲೈನ್‌ಮನೆ ಹಾಗೂ ಬಾಡಿಗೆ ಮನೆಗಳಲ್ಲಿ ವಾಸವಿದ್ದಾರೆ. ಅವರ ಸಾಲಮನ್ನಾ ಮಾಡಬೇಕು, ಸರ್ಕಾರ ಸ್ವಂತ (ಸೂರು) ಮನೆ ಕಟ್ಟಿಕೊಡುವಂತೆ ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದಾಗಿ ಹೇಳಿದರು. ಕಾರ್ಯಕ್ರಮಕ್ಕೂ ಮೊದಲು ಕಾರ್ಮಿಕರು ತಾಲೂಕು ಮೈದಾನದಿಂದ ಮೆರವಣಿಗೆ ಹೊರಟು ಗಡಿಯಾರ ಕಂಬ, ಮುಖ್ಯರಸ್ತೆ ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಗೋಣಿಕೊಪ್ಪ ರಸ್ತೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ದೊಡ್ಡಟಿ ಚೌಕಿ ಮಾರ್ಗವಾಗಿ ಮೆರವಣಿಗೆ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಎಐಸಿಸಿಟಿಯು ರಾಜ್ಯ ಸಮಿತಿ ಸದಸ್ಯ ಸುಬ್ಬ, ಉಪಾಧ್ಯಕ್ಷ ತೋಲ, ಆದಿವಾಸಿ ಸಂಘದ ಕಾರ್ಯದರ್ಶಿ ಗೌರಿ, ಉಪ ಕಾರ್ಯದರ್ಶಿ ಬೊಳ್ಳಾ, ಆದಿವಾಸಿ ಸಂಘಟನೆಯ ಕುಮಾರ, ಕಾವಲ ಹಾಗೂ ಸದಸ್ಯರು ಹಾಜರಿದ್ದರು.

ನದಿಯಲ್ಲಿ ಸ್ನಾನಕ್ಕೆ ತೆರಳಿದ್ದ ವ್ಯಕ್ತಿ ಸಾವು

ಕುಶಾಲನಗರ: ನದಿಗೆ ಸ್ನಾನಕ್ಕೆ ಇಳಿದಿದ್ದ ವ್ಯಕ್ತಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಇಲ್ಲಿನ ಕೊಪ್ಪ ಕಾವೇರಿ ಸೇತುವೆ ಕೆಳಗೆ ಗುರುವಾರ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿಯ ಹಿಟ್ನೇಹೆಬ್ಬಾಗಿಲು ಗ್ರಾಮ ನಿವಾಸಿ ಶಿವಣ್ಣ(50) ಮೃತ. ಈತ ಮಧ್ಯಾಹ್ನ ಸ್ನಾನ ಮಾಡಲು ನೀರಿಗೆ ಇಳಿದಿದ್ದು, ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಕುಶಾಲನಗರ-ಕೊಪ್ಪ ಸೇತುವೆ ಕೆಳಭಾಗದ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕುಸಿತವಾಗಿದಿದ್ದರೂ ನದಿ ಪಾತ್ರದ ಅನೇಕ ಕಡೆ ಆಳವಾದ ಪ್ರದೇಶಗಳಲ್ಲಿ ನೀರಿನ ಸಂಗ್ರವಾಗಿದೆ. ಈ ಆಳವಾದ ಗುಂಡಿಯಲ್ಲಿ ಸಿಲುಕಿ ಮೇಲೆ ಬರಲು ಆಗದೆ ಮೃತಪಟ್ಟಿದ್ದಾರೆ.

ಕುಶಾಲನಗರ ಪಟ್ಟಣ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಾಕಿ ಅಭಿಮಾನಿಗಳಿಗೆ ಗಿನ್ನಿಸ್ ದಾಖಲೆ ಅರ್ಪಣೆ



ಸುದ್ದಿಗೋಷ್ಠಿಯಲ್ಲಿ ಕುಂಡ್ಯೋಳಂಡ ಕುಟುಂಬಸ್ಥರು ಹಾಕಿ ಉತ್ಸವದ ಗಿನ್ನಿಸ್ ದಾಖಲೆಯ ಪ್ರಮಾಣ ಪತ್ರವನ್ನು ಪ್ರದರ್ಶಿಸಿದರು.

ಮಡಿಕೇರಿ, ಮೇ.2-ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ 1 ತಿಂಗಳು ನಡೆದ 'ಕುಂಡ್ಯೋಳಂಡ ಕಪ್ ಹಾಕಿ ಕಾರ್ನಿವಲ್' ಗಿನ್ನಿಸ್ ದಾಖಲೆಗೆ ಪಾತ್ರವಾಗಿದ್ದು, ಈ ಗಿನ್ನಿಸ್ ದಾಖಲೆಯನ್ನು ಹಾಕಿ ಕ್ರೀಡೆ ಮತ್ತು ಹಾಕಿ ಅಭಿಮಾನಿಗಳಿಗೆ ಅರ್ಪಿಸುವುದಾಗಿ ಕುಂಡ್ಯೋಳಂಡ ಕುಟುಂಬಸ್ಥರು ತಿಳಿಸಿದರು.

ನಗರದಲ್ಲಿ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಂಡ್ಯೋಳಂಡ ಕಪ್ ಹಾಕಿ ಕಾರ್ನಿವಲ್‌ನ ಅಧ್ಯಕ್ಷ ರಮೇಶ್ ಮುದ್ದಯ್ಯ, 24ನೇ ವರ್ಷದ ಹಾಕಿ ಉತ್ಸವವನ್ನು ಈ ಬಾರಿ ಕುಂಡ್ಯೋಳಂಡ ಕುಟುಂಬಸ್ಥರು ಆಯೋಜಿಸಿದ್ದರು. ಈ ಪಂದ್ಯಾವಳಿ ಗಿನ್ನಿಸ್ ದಾಖಲೆಗೆ ಸೇರ್ಪಡೆಯಾಗಿದ್ದು, ಈ ಹಿನ್ನೆಲೆಯಲ್ಲಿ ಗಿನ್ನಿಸ್ ದಾಖಲೆಯನ್ನು ಹಾಕಿ ಕ್ರೀಡೆ ಮತ್ತು ಹಾಕಿ ಕ್ರೀಡಾಭಿಮಾನಿಗಳಿಗೆ ಸಮರ್ಪಿಸಲಾಗುತ್ತಿದೆ. ಇದೊಂದು ಹಾಕಿ ಕ್ರೀಡಾ ಲೋಕದ ಸಾಧನೆಯೇ ಸರಿ ಎಂದು ಹರ್ಷ ವ್ಯಕ್ತಪಡಿಸಿದರು.

ಕುಂಡ್ಯೋಳಂಡ ಹಾಕಿ ಕಾರ್ನಿವಲ್ ಸಂಚಾಲಕ ದಿನೇಶ್ ಕಾರ್ಯಪ್ಪ ಮಾತನಾಡಿ, 2017ರಲ್ಲೇ ಕೊಡವ ಕೌಟುಂಬಿಕ ಹಾಕಿ ಹಬ್ಬದ ಆಯೋಜನೆ ಕುರಿತು ಕುಟುಂಬದ ಸದಸ್ಯರೊಂದಿಗೆ ಚರ್ಚೆ ನಡೆಸಲಾಗಿತ್ತು. ಬಳಿಕ ಕೊಡವ ಹಾಕಿ ಅಕಾಡೆಮಿ, ಹಾಕಿ ಕೂರ್ಗ್ ಹಾಗೂ ಹಾಕಿ ಕರ್ನಾಟಕ ಸಂಸ್ಥೆಗಳೊಂದಿಗೆ ಚರ್ಚಿಸಲಾಗಿತ್ತು. ಈ ಪಂದ್ಯಾವಳಿ ಆಯೋಜಿಸಲು ಕೊಡವ ಹಾಕಿ ಅಕಾಡೆಮಿ 2023ರಲ್ಲಿ ಅನುಮೋದನೆ ನೀಡಿತ್ತು ಎಂದು ಮಾಹಿತಿ ನೀಡಿದರು.

ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ 2010ರಲ್ಲೇ 'ಲಿಮ್ಕಾ ಬುಕ್ ಆಫ್ ರೆಕಾರ್ಡ್'ನಲ್ಲಿ ಸ್ಥಾನ ಪಡೆದಿದೆ. ಇದೀಗ ಕುಂಡ್ಯೋಳಂಡ ಕುಟುಂಬ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ 360 ತಂಡಗಳು ನೋಂದಾಯಿಸಿಕೊಂಡು, ಒಟ್ಟು 4832 ಆಟಗಾರರು ಭಾಗವಹಿಸುವ ಮೂಲಕ ದಾಖಲೆ ಬರೆದಿದ್ದಾರೆ. ಇದನ್ನು ಕೂಲಂಕಷವಾಗಿ ಪರಿಶೀಲಿಸಿದ ಗಿನ್ನಿಸ್ ಸಂಸ್ಥೆ, ಜಗತ್ತಿನ ಬೇರೆ ಯಾವ ಭಾಗದಲ್ಲಿ ನಡೆಯದ 'ಅತೀ ದೊಡ್ಡ ಫೀಲ್ಡ್ ಹಾಕಿ ಉತ್ಸವ' ಎಂದು ಗಿನ್ನಿಸ್ ದಾಖಲೆಯ ಪ್ರಮಾಣ ಪತ್ರ ನೀಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕುಂಡ್ಯೋಳಂಡ ಹಾಕಿ ಉತ್ಸವದಲ್ಲಿ ತೀರ್ಪುಗಾರರ ಶಿಬಿರ, ವೃತ್ತಿ ಮಾರ್ಗದರ್ಶನ, ಆರೋಗ್ಯ ಶಿಬಿರ, ವಧು-ವರರ ಸಮಾವೇಶ, ಆಹಾರ ಮೇಳ, ಬಾಳೋಪಾಟ್ ತರಬೇತಿ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಪಂದ್ಯಾವಳಿ ಆಯೋಜನೆ ಮತ್ತು ಗಿನ್ನಿಸ್ ದಾಖಲೆಗೆ ಪಾತ್ರವಾಗಲು ಹಗಲಿರುಳು ನೂರಾರು ಮಂದಿ ಶ್ರಮಿಸಿದ್ದು, ಎಲ್ಲರಿಗೂ ಧನ್ಯವಾದ ತಿಳಿಸುವುದಾಗಿ ದಿನೇಶ್ ಕಾರ್ಯಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕುಂಡ್ಯೋಳಂಡ ಕುಟುಂಬಸ್ಥರಾದ ವಿಶು ಪೂವಯ್ಯ, ಗಣೇಶ್ ಮುತ್ತಪ್ಪ, ಬಿಪಿನ್ ಬೆಳ್ಳಪ್ಪ, ಕಾಶಿ ತಮ್ಮಯ್ಯ ಉಪಸ್ಥಿತರಿದ್ದರು.

ಕಾರ್ಮಿಕರ ದಿನಾಚರಣೆ: ವಿವಿಧ ಸಂಘಟನೆಗಳಿಂದ ಮೆರವಣಿಗೆ

ಹುಣಸೂರು, ಮೇ 2- ವಿಶ್ವ ಕಾರ್ಮಿಕರ ದಿನಾಚರಣೆ ಅಂಗವಾಗಿ ಸಿಐಟಿಯು ನೇತೃತ್ವದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಸದಸ್ಯರು ನಗರದಲ್ಲಿ ಮೆರವಣಿಗೆ ನಡೆಸಿದರು.



ಇಲ್ಲಿನ ಸಂವಿಧಾನ ವೃತ್ತದಲ್ಲಿ ಜಮಾಯಿಸಿದ ಅಂಗನವಾಡಿ ನೌಕರರು, ಕಟ್ಟಡ ಕಾರ್ಮಿಕರು, ಬಿಸಿಯೂಟ ನೌಕರರು, ನಗರ ಕಾರ್ಮಿಕ ಸಂಘದ ಸದಸ್ಯರು ನಗರದ ಪ್ರಮುಖ ಬೀದಿಗಳಲ್ಲಿ ಸಿಐಟಿಯು ಜಿಂದಾಬಾದ್ ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ ಎಂದು ಘೋಷಣೆ ಕೂಗುತ್ತಾ ಕಾರ್ಮಿಕ ಕಾಯ್ದೆಗಳು ತಿದ್ದುಪಡಿ ಬೇಡವೇ ಬೇಡ. ವಿಶ್ವ ಕಾರ್ಮಿಕರು ಒಂದಾಗಿ ಹೋರಾಟಕ್ಕೆ ಮುಂದಾಗಿ ಎಂದು ಘೋಷಣೆ ಕೂಗುತ್ತಾ ಬಾವುಟ ಹಿಡಿದು ಮೆರವಣಿಗೆ ನಡೆಸಿದರು.

ಸಿಐಟಿಯು ತಾಲೂಕು ಸಂಚಾಲಕ ವಿ.ಬಸವರಾಜು ಮಾತನಾಡಿ, ಮೇ ದಿನವನ್ನು ದೇಶ, ಭಾಷೆ, ಧರ್ಮಗಳ ಗಡಿ ಮೀರಿ ಆಚರಿಸಲಾಗುತ್ತಿದೆ. ಕೇಂದ್ರ ಸರ್ಕಾರ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕನ ಬೆವರಿನ ಪಾಲನ್ನು ಕಸಿಯುವ ಯತ್ನಕ್ಕೆ ಮುಂದಾಗುತ್ತಿದೆ. ಕಾರ್ಮಿಕರು ತ್ಯಾಗ ಬಲಿದಾನದಿಂದ ಪಡೆದ ಹಕ್ಕುಗಳನ್ನು ಈಗಾಗಲೇ ಬದಲಾಯಿಸಿ ಕಾರ್ಮಿಕ ಸಂಹಿತೆಗಳನ್ನು ಜಾರಿ ಮಾಡಿ ಕಾರ್ಮಿಕರನ್ನು ಮತ್ತೆ ಗುಲಾಮಗಿರಿಗೆ ಒಡ್ಡಲು ಪ್ರಯತ್ನ ನಡೆಯುತ್ತಿದೆ. ನಾವೆಲ್ಲರೂ ಒಗ್ಗಟ್ಟಿನಿಂದ ಈ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದರು.

ಅಂಗನವಾಡಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಪುಷ್ಪಲತಾ ಮಾತನಾಡಿ, ಪ್ರಸ್ತುತ ಕಾರ್ಮಿಕರ ಯೋಜನೆಗಳನ್ನು ಅಭದ್ರಗೊಳಿಸುವ ಕೆಲಸ ನಡೆಯುತ್ತಿದೆ. ಕಾರ್ಮಿಕರ ಮೇಲೆ ದೌರ್ಜನ್ಯ, ದಬ್ಬಾಳಿಕೆ ಹೆಚ್ಚಾಗಲು ಸರ್ಕಾರದ ನೀತಿಗಳೆ ಕಾರಣ. ಹಾಗಾಗಿ ಎಲ್ಲಾ ಕಾರ್ಮಿಕರು ಒಟ್ಟಾಗಿ ಹೋರಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಿಐಟಿಯು ಸಹ ಸಂಚಾಲಕ ಶಿವರಾಮು, ಅಂಗನವಾಡಿ ನೌಕರರ ಸಂಘದ ಮಂಗಳ ಗೌರಮ್ಮ, ಶಾರದ, ಪೂರ್ಣಿಮಾ, ಕಲಾವತಿ, ನಗರ ಕಾರ್ಮಿಕ ಸಂಘದ ಮುಖಂಡರಾದ ಮಹದೇವ, ಜಲೇಂದ್ರ, ಕುಮಾರ. ಕೃಷ್ಣ ಕುಮಾರ, ನಟರಾಜು, ಶ್ರೀನಿವಾಸ್, ಪುಟ್ಟಶೆಟ್ಟಿ, ಬಿಸಿಯೂಟ ನೌಕರ ಸಂಘದ ಮಂಜುಳಾ, ಶಾಂತಮ್ಮ, ಸುಶೀಲ, ವಿಮಾ ಪ್ರತಿನಿಧಿಗಳ ಸಂಘದ ವೀರಭದ್ರ, ಚೆಲುವರಾಜು ಸೇರಿದಂತೆ ಇತರರಿದ್ದರು.

ಸರಗೂರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ


ಕಾರ್ಮಿಕರ ದಿನಾಚರಣೆಯಲ್ಲಿ ಲೋಡರ್ಸ್ ಅಸೋಸಿಯೇಷನ್ ಸಂಘದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು

ಸರಗೂರು, ಮೇ 2- ಶ್ರಮ ಮತ್ತು ಸಮರ್ಪಣೆ ಗುರುತಿಸುವುದು, ಕಾರ್ಮಿಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಶೋಷಣೆಯಿಂದ ಕಾರ್ಮಿಕರ ರಕ್ಷಿಸುವುದು ಕಾರ್ಮಿಕ ದಿನದ ಉದ್ದೇಶವಾಗಿದೆ ಎಂದು ತಾಲೂಕು ನ್ಯಾಯಬೆಲೆ ಅಂಗಡಿ ಸಂಘದ ಅಧ್ಯಕ್ಷ ಡಿ.ಜಿ.ಶಿವರಾಜು ತಿಳಿಸಿದರು.

ಪಟ್ಟಣದ ಲೋಡರ್ಸ್ ಅಸೋಸಿಯೇಷನ್ ವತಿಯಿಂದ ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಶ್ರಮ ಜೀವಿಗಳ ಕೆಲಸ ಗೌರವಿಸುವ ಸಲುವಾಗಿ ಮೇ 1ರಂದು ಜಾಗತಿಕವಾಗಿ 'ಅಂತಾರಾಷ್ಟ್ರೀಯ ಕಾರ್ಮಿಕರ ದಿನ'ವನ್ನಾಗಿ ಆಚರಿಸಲಾಗುತ್ತದೆ. ಇದನ್ನು ಮೇ ಡೇ, ಲೇಬರ್ ಡೇ ಹಾಗೂ ವರ್ಕರ್ಸ್ ಡೇ ಎಂತಲೂ ಕರೆಯಲಾಗುತ್ತದೆ. ಇದೇ ವೇಳೆ ಎಲ್ಲಾ ಕಾರ್ಮಿಕರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ ಅವರು ತಾಲೂಕು ನ್ಯಾಯಬೆಲೆ ಅಂಗಡಿ ಸಂಘದ ವತಿಯಿಂದ ನಿಮ್ಮ ಸಂಘದ ಕಚೇರಿಗೆ 25 ಚೇರ್‌ಗಳನ್ನು ಕೊಡುಗೆ ನೀಡುವುದಾಗಿ ತಿಳಿಸಿದರು. ದುಡಿಮೆ ಮನುಷ್ಯನ ಘನತೆ ಮತ್ತು ಸೃಜನಶೀಲತೆ ವ್ಯಕ್ತಪಡಿಸುವ ಏಣಿ. ಜೀವನದ ಕಠಿಣ ಸವಾಲುಗಳನ್ನು ಮೆಟ್ಟಿ ನಿಂತು ಶ್ರಮದಲ್ಲಿಯೇ ಬದುಕಿನ ಖುಷಿ ಕಾಣುವ ಎಲ್ಲ ಕಾರ್ಮಿಕರಿಗೂ ನಿಮ್ಮ ದಿನದ ಶುಭಾಶಯಗಳು ಎಂದರು.

ಲೋಡರ್ಸ್ ಅಸೋಸಿಯೇಷನ್ ಸಂಘದ ಖಜಾಂಚಿ ಗೋವಿಂದರಾಜು ಮಾತನಾಡಿ, ಮೇ 1ರಂದು ಸಮಾಜಕ್ಕಾಗಿ ಕಾರ್ಮಿಕರ ಕೊಡುಗೆ ಹಾಗೂ ತ್ಯಾಗವನ್ನು ಸ್ಮರಿಸಲಾಗುತ್ತದೆ ಎಂದರು. ಇದೇ ವೇಳೆ ಸಂಘದ ಹಿರಿಯ ಸದಸ್ಯರಾದ ಕೃಷ್ಣಶೆಟ್ಟಿ, ಪಾಪಣ್ಣ, ಬಸವರಾಜು, ರಾಮ, ನಾಗಣ್ಣ ಅವರನ್ನು ಸನ್ಮಾನಿಸಲಾಯಿತು. ವರ್ತಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ಲೋಡರ್ಸ್ ಅಸೋಸಿಯೇಷನ್ ಸಂಘದ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷ ಚಿಕ್ಕಚನ್ನಯ್ಯ, ಕಾರ್ಯದರ್ಶಿ ವರದನಾಯಕ, ಸಹ ಕಾರ್ಯದರ್ಶಿ ಪ್ರಕಾಶ್, ಮುಖಂಡರಾದ ರಂಗನಾಥ್, ರಾಜಣ್ಣ, ಚಿಕ್ಕಣ್ಣಶೆಟ್ಟಿ, ನರಸಿಂಹಣ್ಣ, ಹುಚ್ಚಯ್ಯ, ಶ್ರೀನಾಥ್, ರಂಗಸ್ವಾಮಿ, ಶ್ರೀಕಂಠ, ರವಿ, ಜಂಗ್ಲಿ, ಮೇಲ್ವಿಚಾರಕ ರಾಮಚಂದ್ರ ಹಾಗೂ ಸಂಘದ ಸದಸ್ಯರು ಇದ್ದರು.

ಹೆಚ್.ಡಿ.ಕೋಟೆಯಲ್ಲೂ ಕಾರ್ಮಿಕರ ದಿನಾಚರಣೆ



ಹೆಚ್.ಡಿ.ಕೋಟೆ, ಮೇ 2- ತಾಲೂಕಿನ ಟೈಲರಿಂಗ್ ಕಾರ್ಮಿಕರ ಅಭಿವೃದ್ಧಿ ಟ್ರಸ್ಟ್‌ನಿಂದ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ರಂಗಸ್ವಾಮಿ ಮಾತನಾಡಿ, ಟೈಲರಿಂಗ್ ಮಾಡುವವರನ್ನು ಸರ್ಕಾರ ಅಸಂಘಟಿತ ಕಾರ್ಮಿಕರೆಂದು ಸರ್ಕಾರ ಘೋಷಣೆ ಮಾಡಿದೆ. ಆದರೆ ನಮಗೆ ಸರ್ಕಾರದಿಂದ ಯಾವುದೇ ಸೌಲಭ್ಯಗಳು ದೊರಕುತ್ತಿಲ್ಲ. ಆದ್ದರಿಂದ ಸಂಘಟಿತ ಕಾರ್ಮಿಕರೆಂದು ಘೋಷಿಸಿದರೇ ನಮಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು.

ಇಂದು ಇಡೀ ದೇಶಾದ್ಯಂತ ಕಾರ್ಮಿಕ ದಿನಾಚರಣೆ ಆಚರಿಸಲಾಗುತ್ತಿದೆ. ಪ್ರತಿಯೊಬ್ಬ ಕಾರ್ಮಿಕ ತಾನು ಯಾವುದೇ ಕೆಲಸ ಮಾಡಿದರೂ ಮಾಡುವ ಕಾಯಕಕ್ಕೆ ಗೌರವ ನೀಡಬೇಕು ಎಂದರು.

ಇದೇ ವೇಳೆ ಟ್ರಸ್ಟ್ ಗೌರವಾಧ್ಯಕ್ಷ ಟಿ.ಸಿ.ಜಗದೀಶ್, ಗೌರವ ಸಲಹೆಗಾರ ಮಣಿ, ಉಪಾಧ್ಯಕ್ಷ ಪ್ರವೀಣ್, ಕಾರ್ಯದರ್ಶಿ ಸದಾಶಿವಮೂರ್ತಿ, ಖಜಾಂಚಿ ಜಿ.ಎಂ.ಪುಟ್ಟಮಾದು, ಕೋಟೆಗೌಡ, ಸೈಯದ್ ಇನ್ನಾಯತ್, ಸ್ವಾಮಿರಾವ್, ರಾಜೇಶ್, ರಮೇಶ್, ಜಮೀರ್ ಷರೀಫ್, ಶ್ರೀಕಂಠಸ್ವಾಮಿ, ಸೌಕದ್ ಅಲಿ ಖಾನ್, ಟಿ.ಶಂಕರ್, ಮಲ್ಲೇಶ್ ಇತರರಿದ್ದರು.


ಸರಗೂರಿನ ವಿಶ್ವಕರ್ಮ ಸಮಾಜದಿಂದ ಶ್ರೀಕಾಳಮ್ಮ ಕಮಟೇಶ್ವರಿ ಅಮ್ಮನವರ 50ನೇ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ಬಿಳಿಗೇರಿಯಲ್ಲಿ ಕಾರ್ಮಿಕರ ದಿನಾಚರಣೆ


ಬಿಳಿಗೇರಿ ಗ್ರಾಮದಲ್ಲಿ ಜಿಲ್ಲಾ ಎಐಟಿಯುಸಿ ಕಾರ್ಮಿಕ ಸಂಘಟನೆ ವತಿಯಿಂದ ವಿಶ್ವ ಕಾರ್ಮಿಕರ ದಿನ ಆಚರಿಸಲಾಯಿತು.

ಮಡಿಕೇರಿ, ಮೇ.2-ಕೊಡಗು ಜಿಲ್ಲಾ ಎಐಟಿಯುಸಿ ಕಾರ್ಮಿಕ ಸಂಘಟನೆ ವತಿಯಿಂದ ಬಿಳಿಗೇರಿ ಗ್ರಾಮದಲ್ಲಿ ವಿಶ್ವ ಕಾರ್ಮಿಕರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಮಿಕರ ದಿನಾಚರಣೆ ಅಂಗವಾಗಿ ಎಐಟಿಯುಸಿ ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಎಂ.ಸೋಮಪ್ಪ ನೇತೃತ್ವದಲ್ಲಿ ಟಾಟಾ ಸಂಸ್ಥೆಯ ಜಂಬೂರು ತೋಟದ ಕಾರ್ಮಿಕರ ಸಮ್ಮುಖದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಧ್ವಜಾರೋಹಣ ನೆರವೇರಿಸಲಾಯಿತು. ನಂತರ ಹೆಚ್.ಎಂ.ಸೋಮಪ್ಪ ಮಾತನಾಡಿ, ಕಾರ್ಮಿಕರ ಶ್ರಮದಿಂದ ಇಂದು ದೇಶ ಪ್ರಗತಿ ಸಾಧಿಸುತ್ತಿದೆ. ಕಾರ್ಮಿಕ ವರ್ಗ ಸದಾ ಒಗ್ಗಟ್ಟನ್ನು ಕಾಯ್ದುಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಕಾರ್ಮಿಕರು ಶ್ರಮಿಕ ವರ್ಗದ ಪರ ಘೋಷಣೆ ಕೂಗಿದರು. ಸಂಘಟನೆಯ ಹೋಬಳಿ ಅಧ್ಯಕ್ಷ ಗಣೇಶ, ಕಾರ್ಮಿಕ ನಾಯಕ ಲೋಕೇಶ್, ಸೂರ್ಯ, ಪ್ರೇಮಾ, ಸಂಜೀವ, ಕೆ.ಎಂ.ನಾರಾಯಣ, ರಮೇಶ್ ಮತ್ತಿತರ ಕಾರ್ಮಿಕರು ಪಾಲ್ಗೊಂಡಿದ್ದರು.

ವರುಣ ಬಳಿ ಸುತ್ತೂರು ರಸ್ತೆಯಲ್ಲಿ ತುಂಡರಿಸಿದ ಮನುಷ್ಯನ ಕಾಲು ಪತ್ತೆ!

ಬಯೋ ಮೆಡಿಕಲ್ ವೇಸ್ಟ್ ನಿರ್ವಹಣೆ ಕನ್ಸಲ್ಟೆಂಟ್ ವಿರುದ್ಧ ಸಾರ್ವಜನಿಕರ ಆಕ್ರೋಶ



ಮೈಸೂರು,ಮೇ2(ಆರ್‌ಕೆ)–ಮೈಸೂರು ತಾಲೂಕು, ವರುಣ ಗ್ರಾಮದ ಬಳಿ ಸುತ್ತೂರು ರಸ್ತೆಯಲ್ಲಿ ಕಳೆದ ರಾತ್ರಿ ತುಂಡರಿಸಿದ ಮನುಷ್ಯನ ಕಾಲು ಪತ್ತೆಯಾಗಿದೆ.

ಸಮೀಪದಲ್ಲಿರುವ ಬಯೋ ಮೆಡಿಕಲ್ ವೇಸ್ಟ್ ನಿರ್ವಹಣಾ ಘಟಕವೊಂದರಿಂದ ನಾಯಿಯೊಂದು ಮನುಷ್ಯನ ಕಾಲಿನ ಭಾಗವನ್ನು ಕಚ್ಚಿಕೊಂಡು ಬಂದು ಅಲ್ಲಿನ ಕ್ಯಾಲಿಬರ್ ಬಡಾವಣೆ ಬಳಿ ತಂದು ಹಾಕಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ. ಆಸ್ಪತ್ರೆಗಳಲ್ಲಿ ಉತ್ಪತ್ತಿಯಾಗುವ ಮೆಡಿಕಲ್ ವೇಸ್ಟ್ ಅನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕಾದ ಏಜೆನ್ಸಿಯು ನಿರ್ಲಕ್ಷ್ಯ ವಹಿಸಿರುವುದರಿಂದ ಅಲ್ಲಿನ ಪರಿಸರ ಹಾಳಾಗಿದ್ದು, ನಿವಾಸಿಗಳಿಗೆ ತೀವ್ರ ತೊಂದರೆಯಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಈ ಸಂಬಂಧ ವರುಣ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದ ಪೊಲೀಸರು, ಏಜೆನ್ಸಿ ಮುಖ್ಯಸ್ಥರಿಗೆ ವೈಜ್ಞಾನಿಕವಾಗಿ ವೈದ್ಯಕೀಯ ತ್ಯಾಜ್ಯ ನಿರ್ವಹಿಸುವಂತೆ ತಾಕೀತು ಮಾಡಿ ಹೋಗಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.



ಮಾಜಿ ಮುಖ್ಯಮಂತ್ರಿ ಎಸ್‌ಎಂ ಕೃಷ್ಣ ಅವರ ಹುಟ್ಟುಹಬ್ಬ ಹಾಗೂ ಅವರ ಆರೋಗ್ಯ ಚೇತರಿಸಲಿ ಎಂದು ಕುವೆಂಪುನಗರ ಗಗನಚುಂಬಿ ಜೋಡಿ ರಸ್ತೆಯಲ್ಲಿರುವ ಜೋಡಿ ಬಸವೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಎಸ್‌ಎಂ ಕೃಷ್ಣ ಅವರ ಅಭಿಮಾನಿ ಬಳಗ ಹಾಗೂ ಅವರ ಹಿತೈಷಿಗಳು ವಿಶೇಷ ಪೂಜೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮುಖಂಡರಾದ ರಘುರಾಂ ವಾಜಪೇಯಿ, ಮೂಗೂರು ನಂಜುಂಡಸ್ವಾಮಿ, ಎಪಿಎನ್ ಪ್ರಾಪರ್ಟೀಸ್‌ನ ನಾಗೇಶ್, ಪ್ರಸಾರಂಗ ಪುಟ್ಟಸ್ವಾಮಿಗೌಡ, ಪುರುಷೋತ್ತಮರೆಡ್ಡಿ, ಎಚ್‌ಎಸ್ ವೆಂಕಟಸುಬ್ಬಯ್ಯ, ಎಲ್.ಚಂದ್ರು ಕುಮಾರೇಗೌಡ, ರಮೇಶ್, ಹೊಂಬೇಗೌಡ, ಮಾದಪ್ಪ, ವಿಕ್ರಾಂತ, ರಾಮಚಂದ್ರ, ದೇವಸ್ಥಾನದ ಅರ್ಚಕರಾದ ರಘು, ಲೋಕೇಶ್, ಪತ್ರಿಕಾ ವಿತರಕರಾದ ಶಿವಲಿಂಗು, ಕೆ–ಬ್ಲಾಕ್ ಪ್ರದೀಪ್ (ದೇವು), ಸಿದ್ದಪ್ಪ, ಬೋರಪ್ಪ, ಅರವಿಂದನಗರ ರಾಜಣ್ಣ, ಚಿಕ್ಕರನಹಳ್ಳಿ ರಮೇಶ್, ಸೊಸೈಟಿ ರಾಜು, ಮಾದೇವ, ಮಾದಪ್ಪ, ಪಟೇಲ್, ರಂಗಸ್ವಾಮಿ ಎಳನೀರು ರಾಮ, ಕೃಷ್ಣ ರಾಜು, ಮಾದೇವ, ಪ್ರಶಾಂತ್ ಇನ್ನಿತರರು ಉಪಸ್ಥಿತರಿದ್ದರು.

ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಸಮಾರಂಭ



ಮೈಸೂರು, ಮೇ 2–ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ 2024ನೇ ಸಾಲಿನ ವಿವಿಧ ಕ್ರೀಡೆಗಳ 29ನೇ ಬೇಸಿಗೆ ಶಿಬಿರವನ್ನು ನುರಿತ ತರಬೇತುದಾರರಿಂದ 7 ವರ್ಷದಿಂದ 18 ವರ್ಷದೊಳಗಿನವರಿಗೆ ಏ.1ರಿಂದ 30ರವರೆಗೆ ಆಯೋಜಿಸಲಾಗಿತ್ತು.

ಶಿಬಿರದಲ್ಲಿ 14 ವಿವಿಧ ಕ್ರೀಡೆಗಳಿಂದ ಸುಮಾರು 400 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಪಿ.ಎಂ.ಇ.ಬಿ ವಿಭಾಗದ ಮುಖ್ಯಸ್ಥ ಪ್ರೊ.ಎನ್.ನಾಗರಾಜ ನೆರವೇರಿಸಿದರು. ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ವಹಿಸಿದ್ದರು. ವಿಭಾಗದ ಉಪನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಜಿಮ್ನಾಸ್ಟಿಕ್ ತರಬೇತುದಾರ ಅರುಣ್‌ಕುಮಾರ್ ಪಾಟೀಲ್ ಇದ್ದರು.

ಹಕ್ಕುಗಳ ಪ್ರತಿಪಾದನೆ ಜೊತೆಗೆ ಕಾರ್ಮಿಕರು ಜವಾಬ್ದಾರಿ ನಿರ್ವಹಿಸಿ



ಸನ್ಮಾನಿತರಾದ ಸಿದ್ದರಾಜು, ಜಗದೀಶ್, ಡಾ.ಶಿವಕುಮಾರ್, ಸುಯೋಗ್ ಆಸ್ಪತ್ರೆಯ ಕಾರ್ಮಿಕರಾದ ಶ್ರೀನಿವಾಸ್, ಸಾವಿತ್ರಮ್ಮ, ನಂಜುಂಡ ಅವರೊಂದಿಗೆ ಡಾ.ಎಸ್.ಪಿ. ಯೋಗಣ್ಣ, ಸುಧಾ ಯೋಗಣ್ಣ, ಡಾ.ಸೀಮಾ ಯೋಗಣ್ಣ ಇದ್ದಾರೆ.

ಮೈಸೂರು,ಮೇ 2–ಕಾರ್ಮಿಕರು ತಮಗೆ ದಕ್ಕಬೇಕಾದ ಹಕ್ಕುಗಳನ್ನು ಹೋರಾಟದಿಂದ ಪಡೆಯುವುದಂತೆ ತಮ್ಮ ಜವಾಬ್ದಾರಿಗಳನ್ನು ಕಟಿಬದ್ಧವಾಗಿ ನಿರ್ವಹಿಸಿ, ತಾವು ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳ ಏಳಿಗೆಗಾಗಿ ಶ್ರಮಿಸಬೇಕೆಂದು ಮೈಸೂರು ಜಿಲ್ಲಾ ಕೈಗಾರಿಕಾ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಮಿಕ ಕಾನೂನು ಸಲಹೆಗಾರ ಎಚ್.ಎಸ್.ಜಗದೀಶ್ ಕರೆಯಿತ್ತರು.

ಸುಯೋಗ್ ಆಸ್ಪತ್ರೆಯ ಸಭಾಂಗಣದಲ್ಲಿ ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಮೂಹಗಳ ಸಂಯೋಗದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕರ ದಿನಾಚರಣೆಯನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಮೈಸೂರು ನಗರದ ಸರ್ಕಾರಿ ಇಎಸ್‌ಐ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಶಿವಕುಮಾರ್ ಮಾತನಾಡಿ, ಕಾರ್ಮಿಕರಿಗೆ ಇಎಸ್‌ಐ ಆಸ್ಪತ್ರೆಯಿಂದ ಆರೋಗ್ಯ ಸೇವೆ ಒದಗಿಸುತ್ತಿದ್ದು, ಅಲ್ಲಿ ಇಲ್ಲದ ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಸೇವೆಯನ್ನು ಒಡಂಬಡಿಕೆ ಮೇಲೆ ಖಾಸಗಿ ಆಸ್ಪತ್ರೆಗಳಿಂದ ಕಾರ್ಮಿಕರು ಪಡೆಯುತ್ತಿದ್ದಾರೆ ಎಂದರು.

ಮೈಸೂರು ನಗರದಲ್ಲಿ ಸುಯೋಗ್ ಆಸ್ಪತ್ರೆಯು ಕಾರ್ಮಿಕರಿಗೆ ಉತ್ತಮ ಸೇವೆ ಸಲ್ಲಿಸುತ್ತಿದ್ದು, ಕಾರ್ಮಿಕರ ಮನ್ನಣೆ ಗಳಿಸಿದೆ ಎಂದು ಮುಕ್ತಕಂಠದಿಂದ ಪ್ರಶಂಸಿಸಿದರು. ಕಾರ್ಮಿಕರು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಂಡು ಸದೃಢವಾಗಿದ್ದರೆ ಮಾತ್ರ ಅವರು ಸೇವೆ ಸಲ್ಲಿಸಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಸುಯೋಗ್ ಆಸ್ಪತ್ರೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಹಣಕಾಸು ಅಧಿಕಾರಿ ಶ್ರೀನಿವಾಸ್, ಶುಚಿತ್ವಗೊಳಿಸುವ ಸಾವಿತ್ರಮ್ಮ, ತೋಟಗಾರಿಕೆಯ ನಂಜುಂಡ ಹಾಗೂ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿರುವ ಕಾರ್ಮಿಕ ಸಂಘದ ಜಗದೀಶ್, ಸಿದ್ದರಾಜು, ಮತ್ತು ವೈದ್ಯಾಧಿಕಾರಿಗಳಾದ ಡಾ.ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಕಾರ್ಮಿಕರ ಕ್ಷೇಮಾಭಿವೃದ್ಧಿ ನಿಧಿಗೆ ರಾಜ್ಯದಿಂದ ವಾರ್ಷಿಕ ಸುಮಾರು 1500 ಕೋಟಿ ರೂ.ಗಳು ಕಾರ್ಮಿಕರು ಮತ್ತು ಉದ್ಯಮಿಗಳಿಂದ ಪಾವತಿಯಾಗುತ್ತಿದ್ದು, ಇದರಲ್ಲಿ ವಾರ್ಷಿಕ 500 ಕೋಟಿ ರೂ. ಮಾತ್ರ ಖರ್ಚಾಗುತ್ತಿದ್ದು, ಸಂಪೂರ್ಣ ಹಣವನ್ನು ಕಾರ್ಮಿಕರ ಅಭಿವೃದ್ಧಿಗೆ ಬಳಸಬೇಕೆಂದು ತಿಳಿಸಿದರು.

ಪ್ರಾರಂಭದಲ್ಲಿ ಶ್ರೀಮತಿ ಗಾಯಿತ್ರಿ ನಾರಾಯಣಗೌಡ ಸ್ವಾಗತಿಸಿದರು, ವ್ಯವಸ್ಥಾಪಕ ಪಿ.ಜೆ.ಅರುಣ್‌ಕುಮಾರ್ ವಂದಿಸಿದರು. ಅನಂತು ಕಾರ್ಯಕ್ರಮ ನಿರೂಪಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಚುನಾವಣೆ-2024

ವಿಧಾನಪರಿಷತ್ ಚುನಾವಣೆ ಘೋಷಣೆ; ಗರಿಗೆದರಿದ ರಾಜಕಾರಣ

ಬಿಜೆಪಿ, ಜೆಡಿಎಸ್ ಮೈತ್ರಿಯಾದರೂ ನನ್ನ ಗೆಲುವಿಗೆ ಅಡ್ಡಿ ಇಲ್ಲ

ಮಾಜಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ವಿಶ್ವಾಸ



ಮೈಸೂರು, ಮೇ 2(ಬಿಎಲ್‌ಯು)– ಲೋಕಸಭಾ ಚುನಾವಣೆಯಂತೆ ಮೈಸೂರಿನ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲೂ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮಾಡಿಕೊಂಡರೂ ನನ್ನ ಗೆಲುವಿಗೆ ಯಾವುದೇ ತೊಂದರೆ ಆಗದು ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರು ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಜೂನ್ 3ರಂದು ಚುನಾವಣೆ ಘೋಷಣೆ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್‌ನವರು ಮೈತ್ರಿಯನ್ನಾದರೂ ಮಾಡಿಕೊಳ್ಳಲಿ, ಫ್ರೆಂಡ್ಲಿ ಫೈಟ್ ಆದರೂ ಮಾಡಲಿ ಅಥವಾ ಎರಡು ಪಕ್ಷದ ಅಭ್ಯರ್ಥಿಗಳು ಪ್ರತ್ಯೇಕವಾಗಿಯಾದರೂ ಸ್ಪರ್ಧಿಸಲಿ, ನನ್ನ ಗೆಲುವಿಗೆ ಯಾವುದೂ ಅಡ್ಡಿಯಾಗುವುದಿಲ್ಲ ಎಂದು ಹೇಳಿದರು.

ಕಳೆದ 4 ಬಾರಿ ಇದೇ ಕ್ಷೇತ್ರ ಪ್ರತಿನಿಧಿಸುವ ಮೂಲಕ 24 ವರ್ಷಗಳಿಂದ ಶಿಕ್ಷಕರ ಸಮಸ್ಯೆಗಳನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಗರಿಷ್ಠ ಮಟ್ಟದಲ್ಲಿ ಕೆಲಸ ಮಾಡಿದ್ದೇನೆ. ನನ್ನ ಉತ್ತಮ ಕೆಲಸ, ನನ್ನ ಕೈ ಹಿಡಿಯಲಿದೆ ಎಂದು ವಿಶ್ವಾಸದಿಂದ ನುಡಿದರು.

ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದೆ, 2ನೇ ಬಾರಿಗೆ ಪಕ್ಷೇತರನಾಗಿ ಜಯ ಗಳಿಸಿದೆ, ಮೂರು ಮತ್ತು 4ನೇ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದೆ. ಈಗ 5ನೇ ಬಾರಿಗೆ ಮತ್ತೆ ಕಾಂಗ್ರೆಸ್‌ನಿಂದ ಸ್ಪರ್ಧೆ ಮಾಡುತ್ತಿದ್ದು, ಗೆಲುವು ನನಗೆ ಖಚಿತ ಎಂದು ಹೇಳಿದರು.

ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸದನದ ಒಳಗೆ ಹಾಗೂ ಹೊರಗೆ ಹೋರಾಟ ಮಾಡಿ ಅವರ ದನಿಯಾಗಿದ್ದೇನೆ. ಕಳೆದ 24 ವರ್ಷಗಳಿಂದ ಶಿಕ್ಷಕರ ಜೊತೆ ಉತ್ತಮ ಒಡನಾಟ ಹೊಂದಿದ್ದೇನೆ. ಶಿಕ್ಷಕರ ಕ್ಷೇತ್ರದ ಘನತೆ ಗೌರವ ಇಮ್ಮಡಿಗೊಳಿಸಿದ್ದೇನೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಈ ಬಾರಿಯೂ ನನ್ನ ಬೆಂಬಲಿಸುತ್ತಾರೆ. ಇದರಿಂದ ಗೆಲುವು ನನಗೆ ನಿಶ್ಚಿತ ಎಂದರು.

ವಿಧಾನಪರಿಷತ್ ಉಪ ಸಭಾಪತಿಯಾಗಿ ಕೂಡ ಕೆಲಸ ಮಾಡಿದ್ದೇನೆ. ಪ್ರಸ್ತುತ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾರಣ ಕಾಂಗ್ರೆಸ್ ಪಕ್ಷದವನಾದ ನನ್ನನ್ನು ಶಿಕ್ಷಕ ಮತದಾರರು ಗೆಲ್ಲಿಸಿದರೆ ಅವರ ಹಲವು ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸಲು ಅನುಕೂಲವಾಗಲಿದೆ ಎಂದು ಮರಿತಿಬ್ಬೇಗೌಡರು ಸ್ಪಷ್ಟಪಡಿಸಿದರು.

ಮೈತ್ರಿ ಇಲ್ಲವೆ, ಫ್ರೆಂಡ್ಲಿ ಫೈಟ್ ಆಗಲಿಲ್ಲವೆಂದರೆ ಕಾಂಗ್ರೆಸ್‌ಗೆ ಅನುಕೂಲ

ಬಿಜೆಪಿ ಆಕಾಂಕ್ಷಿ ನಿಂಗರಾಜಗೌಡ ಅನಿಸಿಕೆ



ಮೈಸೂರು, ಮೇ 2(ಬಿಎಲ್‌ಯು)– ಮೈಸೂರಿನ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಮೈತ್ರಿ ಅಥವಾ ಫ್ರೆಂಡ್ಲಿ ಫೈಟ್‌ನಲ್ಲಿ ಚುನಾವಣೆ ನಡೆಯಬೇಕು. ಬಿಜೆಪಿ ಹಾಗೂ ಜೆಡಿಎಸ್ ಪ್ರತ್ಯೇಕವಾಗಿ ಸ್ಪರ್ಧಿಸಿ ಪೈಪೋಟಿಗಿಳಿದರೆ ಕಾಂಗ್ರೆಸ್‌ಗೆ ಅನುಕೂಲವಾಗುತ್ತದೆ ಎಂದು ಬಿಜೆಪಿ ಆಕಾಂಕ್ಷಿ ಡಾ.ಈ.ಸಿ. ನಿಂಗರಾಜಗೌಡ ಅಭಿಪ್ರಾಯಪಟ್ಟಿದ್ದಾರೆ.

ಲೋಕಸಭಾ ಚುನಾವಣೆಯಂತೆ ಎರಡು ಪಕ್ಷಗಳಲ್ಲಿ ಒಮ್ಮತ ಮೂಡಿ, ಮೈತ್ರಿ ಅಭ್ಯರ್ಥಿ ಕಣಕ್ಕಿಳಿಯಬೇಕು. ಇಲ್ಲವೆಂದರೆ ಫ್ರೆಂಡ್ಲಿ ಫೈಟ್‌ನಲ್ಲಿ ಬಿಜೆಪಿ ಅಭ್ಯರ್ಥಿ ಎರಡನೇ ಪ್ರಾಶಸ್ತ್ಯದ ಮತವನ್ನು ಜೆಡಿಎಸ್‌ಗೆ ಕೇಳಬೇಕು. ಜೆಡಿಎಸ್ ಅಭ್ಯರ್ಥಿ ಎರಡನೇ ಪ್ರಾಶಸ್ತ್ಯ ಮತವನ್ನು ಬಿಜೆಪಿಗೆ ಕೇಳಬೇಕು. ಆಗ ಇಬ್ಬರಲ್ಲಿ ಒಬ್ಬರು ಗೆಲುವು ಸಾಧಿಸಬಹುದು ಎಂದು ಹೇಳಿದರು.

ಮೈತ್ರಿಯೂ ಇಲ್ಲದೆ, ಫ್ರೆಂಡ್ಲಿ ಫೈಟ್ ಕೂಡ ಇಲ್ಲದೆ ಎರಾಳಿಗಳಾಗಿ ಬಿಜೆಪಿ ಹಾಗೂ ಜೆಡಿಎಸ್ ಪ್ರತ್ಯೇಕವಾಗಿ ಸ್ಪರ್ಧೆ ಮಾಡಿದರೆ ಅದು ಕಾಂಗ್ರೆಸ್‌ಗೆ ಅನುಕೂಲವಾಗಲಿದೆ ಎಂದರು.

ಒಟ್ಟಾರೆ 34 ವರ್ಷಗಳಿಂದ ಸಂಘ ಪರಿವಾರದಲ್ಲಿರುವ ನನಗೆ ಟಿಕೆಟ್ ನೀಡಬೇಕೆಂದು ಬಿಜೆಪಿ ವರಿಷ್ಠರಲ್ಲಿ ಕೇಳಿಕೊಂಡಿದ್ದೇನೆ. ಸಿಂಡಿಕೇಟ್ ಸದಸ್ಯನಾಗಿ, ಅಕಾಡೆಮಿಕ್ ಕೌನ್ಸಿಲ್ ಸದಸ್ಯನಾಗಿ ಕಾರ್ಯನಿರ್ವಹಿಸಿರುವ ನನ್ನ ಪರಿಗಣಿಸುವಂತೆ ವಿನಂತಿಸಿದ್ದೇನೆ. ಮೂರು ಬಾರಿ ಟಿಕೆಟ್ ಕೈ ತಪ್ಪಿರುವ ಕಾರಣ ಈ ಬಾರಿ ನನಗೆ ಬಿಜೆಪಿ ವರಿಷ್ಠರು ಟಿಕೆಟ್ ನೀಡುತ್ತಾರೆ ಎಂದು ವಿಶ್ವಾಸವಿದೆ ಎಂದು ನಿಂಗರಾಜ್‌ಗೌಡ ಹೇಳಿದರು.

ಬಿಜೆಪಿ, ಜೆಡಿಎಸ್ ನಡುವೆ ಮೈತ್ರಿಯಾದರೆ ದೊಡ್ಡ ಶಕ್ತಿ

ಜೆಡಿಎಸ್ ಆಕಾಂಕ್ಷಿ ವಿವೇಕಾನಂದ ಅಭಿಪ್ರಾಯ



ಮೈಸೂರು, ಮೇ 2(ಬಿಎಲ್‌ಯು)– ಮೈಸೂರು ಶಿಕ್ಷಕರ ಕ್ಷೇತ್ರದಲ್ಲಿ ಟಿಕೆಟ್ ನೀಡುವ ಕುರಿತಂತೆ ಜೆಡಿಎಸ್ ವರಿಷ್ಠರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಏನೇ ತೀರ್ಮಾನ ಕೈಗೊಂಡರೂ ಅದಕ್ಕೆ ನಾನು ಬದ್ಧ ಎಂದು ಜೆಡಿಎಸ್ ಆಕಾಂಕ್ಷಿ ಕೆ.ವಿವೇಕಾನಂದ ಸ್ಪಷ್ಟಪಡಿಸಿದರು.

ಮೈಸೂರು ದಕ್ಷಿಣ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮಾಡಿಕೊಂಡು ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕು. ಆಗ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗೆ ಎರಡೂ ಪಕ್ಷದ ದೊಡ್ಡ ಶಕ್ತಿ ಬರುತ್ತದೆ ಎಂದು ವಿವೇಕಾನಂದ ಅಭಿಪ್ರಾಯಪಟ್ಟರು.

ನಾನು ಕಳೆದ 20 ವರ್ಷಗಳಿಂದ ಜೆಡಿಎಸ್ ಪಕ್ಷದಲ್ಲೇ ಇದ್ದೇನೆ. ನನ್ನ ಸೇವಾ ಕಾರ್ಯ ಪರಿಗಣಿಸಿ ಟಿಕೆಟ್ ನೀಡುವಂತೆ ಮನವಿ ಮಾಡಿದ್ದೇನೆ. ಈ ಸಂಬಂಧ ಜೆಡಿಎಸ್ ವರಿಷ್ಠರು ಏನೇ ತೀರ್ಮಾನ ಕೈಗೊಂಡರೂ ಅದಕ್ಕೆ ನಾನು ಬದ್ಧನಾಗಿದ್ದೇನೆ ಎಂದು ಹೇಳಿದರು.

ಮೂಲತಃ ಮಂಡ್ಯ ಜಿಲ್ಲೆಯವನಾಗಿದ್ದು, ಮೈಸೂರಿನಲ್ಲೇ ವಾಸ ಮಾಡುತ್ತಿದ್ದೇನೆ. ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಕಾರಣ ಟಿಕೆಟ್ ಕೊಟ್ಟರೆ ಶಿಕ್ಷಕರು ನನ್ನ ಬೆಂಬಲಿಸಲಿದ್ದು, ಗೆಲುವು ನನಗೆ ಖಚಿತ ಎಂದು ವಿವೇಕಾನಂದ ವಿಶ್ವಾಸದಿಂದ ನುಡಿದರು.

ನಾಳೆ ಮಾಸಿಕ ಕಾರ್ಯಕ್ರಮ

ಮೈಸೂರು, ಮೇ 2–ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್, ಭಾರತೀಯ ಪ್ರದರ್ಶಕ ಕಲೆಗಳ ಕಲಾವಿದರಿಗೆ ಪ್ರೋತ್ಸಾಹ ನೀಡಲು "ಚಂಪಕ ರಾಷ್ಟ್ರೀಯ ಕಲಾ ಉತ್ಸವ" ಶೀರ್ಷಿಕೆಯಡಿ ಮಾಸಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಚೈತ್ರ ಮಾಸದ ಅಂಕವು ಮೇ 4ನೇ ತಾರೀಖು ಶನಿವಾರ ಸಂಜೆ 5 ಗಂಟೆಗೆ ರಾಮಕೃಷ್ಣನಗರದಲ್ಲಿ ಇರುವ ಚಂಪಕ ಅಕಾಡೆಮಿಯ ಸಭಾಂಗಣದಲ್ಲಿ ನಡೆಯಲಿದೆ. ಮೊದಲಿಗೆ ವಿಶ್ವಕಲಾನಿಕೇತನ ಇನ್ಸ್ಟಿಟ್ಯೂಟ್ ಆಫ್ ಆರ್ಟ್ಸ್ & ಕಲ್ಚರ್, ಪುತ್ತೂರು, ಕುದ್ಕಾಡಿ ಸಂಸ್ಥಾಪಕರು ಮತ್ತು ನಿರ್ದೇಶಕರಾದ ಖ್ಯಾತ ವಿದುಷಿ ಕರ್ನಾಟಕ ಕಲಾಶ್ರೀ ನಯನ ವಿ ರೈ ಮತ್ತು ವಿದುಷಿ ಸ್ವಸ್ತಿಕ ಆರ್ ಶೆಟ್ಟಿ ಅವರ ಶಿಷ್ಯಂದಿರು ಭರತನಾಟ್ಯ ಕಾರ್ಯಕ್ರಮ ನೀಡಲಿದ್ದಾರೆ. ನಂತರ ಮೈಸೂರಿನ ನಾಟ್ಯ ಸಂಸ್ಕೃತಿ ಕಲಾನಿಕೇತನ, ನಿರ್ದೇಶಕರಾದ ವಿದುಷಿ ಎಸ್.ಎನ್.ಮೇಘನಾರಾವ್ ಮತ್ತು ಶಿಷ್ಯಂದಿರು ಭರತನಾಟ್ಯ ಕಾರ್ಯಕ್ರಮ ನೀಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಕರ್ನಾಟಕ ಕಲಾಶ್ರೀ ವಿದುಷಿ ಜಿ. ರಾಜಲಕ್ಷ್ಮಿ ಶ್ರೀಧರ್, ನಿವೃತ್ತ ಸಹಾಯಕ ನಿರ್ದೇಶಕರು, AIR, ಮೈಸೂರು ಮುಖ್ಯ ಅತಿಥಿಗಳಾಗಿರುವರು.

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ 2– 2024–25ನೇ ಸಾಲಿಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು 5ನೇ ತರಗತಿಯಲ್ಲಿ ಶೇ.60ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು ಹಾಗೂ ಕುಟುಂಬದ ವಾರ್ಷಿಕ ಆದಾಯ ಎರಡು ಲಕ್ಷ ರೂ.ಗಳ ಒಳಗಿರಬೇಕು. ಅರ್ಜಿಗಳನ್ನು ಮೇ 21ರವರೆಗೆ ತಾಲೂಕು ಕಚೇರಿಗಳಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಿಸಿದ ಕಚೇರಿಗಳಿಗೆ ಕಚೇರಿ ವೇಳೆಯಲ್ಲಿ ಸಲ್ಲಿಸಲು ಮೇ 21 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2427140 ಅನ್ನು ಸಂಪರ್ಕಿಸಬಹುದು.



ಮೈಸೂರು ಬೋಗಾದಿ ನಿರ್ಮಿತಿ ಕೇಂದ್ರದ ಬಳಿ ಇರುವ ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ 5 ದಿನಗಳ ಚಿಣ್ಣರ ಬೇಸಿಗೆ ಸಂಭ್ರಮ ಶಿಬಿರ ಸಮಾರೋಪಗೊಂಡಿತು. ಈ ವೇಳೆ ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಪುಷ್ಪಾಜೀ, ಬಿಕೆ.ಭಾರತಿ, ಬಿ.ಕೆ.ಆಶಾಜೀ, ಬಿ.ಕೆ.ಇಂದ್ರ, ಕಿರಣ್ ಓಂ ಶಾಂತಿ ನ್ಯೂಸ್ ಸರ್ವೀಸ್‌ನ ಬ್ರಹ್ಮಕುಮಾರ ಆರಾಧ್ಯ, ಪೋಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ರಂಗಭೂಮಿ ಕಲೆಗೆ ರಾಜ್ಯ ಸರ್ಕಾರ ಮತ್ತಷ್ಟು ಆದ್ಯತೆ ನೀಡಿದರೆ ಉತ್ತಮ

ರಂಗಭೂಮಿ ನಿರ್ದೇಶಕ ಬೀರಿಹುಂಡಿ ಗೋವಿಂದರಾಜು ಅಭಿಮತ



ಮೈಸೂರು, ಮೇ 2– ಮೈಸೂರಿನ ಐಪಿಎಸ್ ನಗರದ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ನಡೆಯುತ್ತಿರುವ ಮಕ್ಕಳ ಬೇಸಿಗೆ ಶಿಬಿರದಲ್ಲಿ ಮೈಸೂರಿನ ವೀರಶೈವ ಸಮಾನಮನಸ್ಕರ ಸ್ನೇಹ ಬಳಗ, ಕುದೇರು ಮಠದ ವತಿಯಿಂದ ರಂಗಭೂಮಿ ನಿರ್ದೇಶಕ ಬೀರಿಹುಂಡಿ ಗೋವಿಂದರಾಜು, ಹಿರಿಯ ಕಲಾವಿದರಾದ ಚಿಕ್ಕಹಳ್ಳಿ ಪುಟ್ಟಣ್ಣ, ಕೆರೆಹಳ್ಳಿ ದೊರೆಸ್ವಾಮಿ ಸಾರಥ್ಯದಲ್ಲಿ ರಂಗಭೂಮಿ ಮಹತ್ವ, ಹಾಡುಗಾರಿಕೆ, ಅಭಿನಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಮಾತನಾಡಿದ ರಂಗಭೂಮಿ ನಿರ್ದೇಶಕ ಬೀರಿಹುಂಡಿ ಗೋವಿಂದರಾಜು, ರಂಗಭೂಮಿ ನಿರ್ದೇಶಕರು, ಸ್ತ್ರೀ ಪಾತ್ರಧಾರಿಗಳು, ವಾದ್ಯಗೋಷ್ಠಿ, ವಸ್ತ್ರಾಲಂಕಾರ ಕಲಾವಿದರು ಬದುಕುತ್ತಿರುವುದು ರಂಗಭೂಮಿಯಿಂದ ಕಲಾವಿದರು ಸ್ವಂತ ಹಣ ಖರ್ಚು ಮಾಡಿಕೊಂಡು ತನ್ನ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾರೆ. ಒಂದು ನಾಟಕ ಮಾಡಲು ಲಕ್ಷಾಂತರ ಹಣ ಬೇಕಾಗುತ್ತದೆ. ತನ್ನ ತಂಡದ ಸಹಕಾರದಿಂದ ಹಣ ಸಂಗ್ರಹಿಸಿ ಅನೇಕ ಕಲಾವಿದರ ಜೀವನಕ್ಕೆ ಬೆನ್ನೆಲುಬಾಗಿರುತ್ತಾರೆ. ಆದ್ದರಿಂದ ಸರ್ಕಾರ ನಾಟಕ ತಂಡಗಳಿಗೆ ಸಹಕರಿಸಿದರೆ ಅನೇಕ ಕಲಾವಿದರು ಬದುಕುತ್ತಾರೆ. 60 ವರ್ಷ ಮೇಲ್ಪಟ್ಟ ಹಿರಿಯ ಕಲಾವಿದರಿಗೆ ಗೌರವಧನ ಹೆಚ್ಚಿಸಿದರೆ ಬಹಳ ಸೂಕ್ತ. ಇದರಿಂದ ರಂಗಭೂಮಿ ಕಲೆ ಉಳಿಯುತ್ತದೆ, ಬೆಳೆಯುತ್ತದೆ ಎಂದು ತಿಳಿಸಿದರು.

ಹಿರಿಯ ರಂಗಭೂಮಿ ಕಲಾವಿದ ಚಿಕ್ಕಹಳ್ಳಿ ಪುಟ್ಟಣ್ಣ ಮಾತನಾಡಿ, ರಂಗಭೂಮಿಯಿಂದ ಅನೇಕ ದಿಗ್ಗಜ ಚಲನಚಿತ್ರ ನಟರು ಬೆಳೆದಿದ್ದಾರೆ. ರಂಗಭೂಮಿಯನ್ನು ಸಮರ್ಥವಾಗಿ ಬಳಸಿಕೊಂಡರೆ ಯಶಸ್ಸು, ಕೀರ್ತಿ ದೊರೆಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸೋಮೇಶ್ವರಪುರದ ಸೋಮಶೇಖರಣ್ಣ, ಹೊಸಕೋಟೆ ನಂದೀಶ್, ಮುಳ್ಳೂರು ಪರ್ವತಪ್ಪ, ಮೊಸಂಬಾಯನಹಳ್ಳಿ ದೊಡ್ಡಬುದ್ಧಿ, ಕೆರೆಹಳ್ಳಿ ಲೋಹಿತ್, ಹೊಸಕೋಟೆ ಪ್ರಭುಸ್ವಾಮಿ, ಹೊಸಕೋಟೆ ಶಿವಮಲ್ಲಪ್ಪ, ಕೆಬ್ಬೆಹುಂಡಿ ಶಿವಕುಮಾರ್, ಹೊಸಕೋಟೆ ಸುಂದ್ರಪ್ಪ, ಸುತ್ತೂರು ನಾಗೇಶ್ ಬಾಗಳಿ ಮಹೇಶ್, ರಂಗಸ್ವಾಮಿ, ದೇವಪ್ಪಾಜಿ, ಪುಟ್ಟಂಜಪ್ಪ, ಧನಂಜಯ್, ಕೆರೆಹಳ್ಳಿ ಪರಶಿವಮೂರ್ತಿ, ಹೂಟಗಳ್ಳಿ ನಾಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಲೈಂಗಿಕ ದೌರ್ಜನ್ಯ ಆರೋಪ

ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹ



ಮೈಸೂರು,ಮೇ 2–ಮಹಿಳೆಯರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡ ಆರೋಪ ಹೊತ್ತಿರುವ ಸಂಸದ ಪ್ರಜ್ವಲ್ ರೇವಣ್ಣನನ್ನು ಬಂಧಿಸಿ, ವಿಚಾರಣೆ ನಡೆಸಿ ಕಠಿಣ ಶಿಕ್ಷೆ ನೀಡಬೇಕು. ಈ ಮೂಲಕ ಸಂತ್ರಸ್ತ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು ಒತ್ತಾಯಿಸಿದ್ದಾರೆ.

ಸಂಸದನಾಗಿದ್ದ ಅವಧಿಯಲ್ಲಿ ತನ್ನ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವ ಬದಲು ಅಮಾಯಕ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆಸಿ ವಿಡಿಯೊ ಚಿತ್ರಿಸಿಕೊಂಡಿದ್ದಾರೆ. ಇದು ನಾಗರಿಕ ಸಮಾಜ ತಲೆತಗ್ಗಿಸುವ ಸಂಗತಿ. ಇಂತಹ ವಿಕೃತ ಕಾಮಿಗಳು ಸಮಾಜದಲ್ಲಿ ಇರುವಷ್ಟು ದಿನಗಳು ಅಪಾಯ ತಪ್ಪಿದ್ದಲ್ಲ ಎಂದು ಟೀಕಿಸಿದ್ದಾರೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಕುಟುಂಬದಲ್ಲಿಯೇ ಇಂತಹ ಹೇಯ ಕೃತ್ಯ ನಡೆದಿರುವುದು ಶೋಚನೀಯ. ಸಾವಿರಾರು ಹೆಣ್ಣುಮಕ್ಕಳ ಜೀವನ ಹಾಳು ಮಾಡಿದ ಆರೋಪ ಹೊತ್ತು ವಿದೇಶಕ್ಕೆ ಪರಾರಿಯಾಗಿರುವ ಸಂಸ ಪ್ರಜ್ವಲ್ ರೇವಣ್ಣ ಅವರನ್ನು ತಕ್ಷಣವೇ ಬಂಧಿಸಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ನಾಳೆ ಜಯಪ್ರಕಾಶ್‌ರಾವ್ ವಿಶೇಷ ಉಪನ್ಯಾಸ



ಮೈಸೂರು, ಮೇ 2– ಮೈಸೂರಿನ ಸಂಪನ್ಮೂಲ ಉಪನ್ಯಾಸಕ, ಜೇಸಿಸ್‌ನ ಅಂತರರಾಷ್ಟ್ರೀಯ ತರಬೇತುದಾರ ಮತ್ತು ಡಿ.ಆರ್.ಡಿ.ಓ ಸಂಸ್ಥೆಯ ಮಾಜಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿದ್ದ ಜಯಪ್ರಕಾಶ್‌ರಾವ್, ಮಾರಿಷಸ್ ಪ್ರವಾಸದ ವೇಳೆ ಅಲ್ಲಿನ ಏಮಿಟಿ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣದ ಸಂಸ್ಥೆಗಳ ವಿದ್ಯಾರ್ಥಿಗಳು ಹಾಗೂ ಶಿಕ್ಷಕ ವೃಂದಕ್ಕೆ 2 ವಿಶೇಷ ಉಪನ್ಯಾಸ ನೀಡಲಿದ್ದಾರೆ. ವ್ಯಕ್ತಿ ವಿಕಸನ ತಂತ್ರಗಳ ಕುರಿತು ಇವರು ಮಾತನಾಡಲಿದ್ದು, ಮೇ 4ರಂದು ಪ್ರಯಾಣ ಬೆಳೆಸಲಿದ್ದಾರೆ. ಜಯಪ್ರಕಾಶ್ ರಾವ್ ತಮ್ಮ ಸೇವಾವಧಿಯಲ್ಲಿ ಡಾ.ಕಲಾಂ ಅವರ ಶಿಷ್ಟಾಚಾರ ಹಾಗೂ ಸಮನ್ವಯ ಅಧಿಕಾರಿಯಾಗಿಯೂ ಆಗಿದ್ದು, ಹಲವು ರಾಜ್ಯ ಹಾಗೂ ರಾಷ್ಟ್ರಮಟ್ಟದ ಪುರಸ್ಕಾರಗಳನ್ನು ಪಡೆದಿದ್ದಾರೆ. ಯುವಜನರಿಗಾಗಿ 500ಕ್ಕೂ ಹೆಚ್ಚು ತರಬೇತಿ ಕಾರ್ಯಕ್ರಮಗಳನ್ನು ನೀಡಿ, ದಾಖಲೆ ಬರೆದಿದ್ದಾರೆ.

ಅಂತರ ಕಾಲೇಜು ಮಹಿಳಾ ಕ್ರೀಡಾಕೂಟಕ್ಕೆ ಚಾಲನೆ





ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಗುರುವಾರ ಆರಂಭವಾದ ಮೂರು ದಿನಗಳ ಅಂತರ ಕಾಲೇಜು ಮಹಿಳಾ ಕ್ರೀಡಾಕೂಟಕ್ಕೆ ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ ಚಾಲನೆ ನೀಡಿದರು. ಜಿಮ್ನಾಷಿಯಂ ಸಭಾಂಗಣದಲ್ಲಿ ಚೆಸ್ ಆಟದಲ್ಲಿ ಮಗ್ನರಾಗಿರುವ ಮಹಿಳಾ ಚೆಸ್ ಪಟುಗಳು.

ಮೈಸೂರು,ಮೇ2(ಎಂಟಿವೈ)–ಮೈಸೂರು ವಿಶ್ವವಿದ್ಯಾನಿಲಯ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನ ಸೇರಿದಂತೆ ವಿವಿಧೆಡೆ ಗುರುವಾರ ಆರಂಭವಾದ 3 ದಿನಗಳ ಅಂತರ ಕಾಲೇಜು, ಅಂತರ ವಲಯದ ಮಹಿಳಾ ಕ್ರೀಡಾಕೂಟದಲ್ಲಿ 400ಕ್ಕೂ ಹೆಚ್ಚು ಮಹಿಳಾ ಕ್ರೀಡಾಪಟುಗಳು ಪಾಲ್ಗೊಂಡು ಗಮನ ಸೆಳೆದರು. ಮೈಸೂರು ವಿಶ್ವವಿದ್ಯಾನಿಲಯದ ಪೆವಿಲಿಯನ್ ಮೈದಾನದಲ್ಲಿ ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ, 2023–24ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಂತರ ವಲಯ ಮಹಿಳೆಯರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಶುಭಕೋರಿದರು. ಇದೇ ವೇಳೆ ಕ್ರೀಡಾಕೂಟದಲ್ಲಿ ಪಾಲ್ಗೊಂಡಿರುವ 32 ಕಾಲೇಜುಗಳ 400ಕ್ಕೂ ಹೆಚ್ಚು ಮಹಿಳಾ ಕ್ರೀಡಾಪಟುಗಳು ಆಕರ್ಷಕ ಪಥಸಂಚಲನ ನಡೆಸಿ, ಅತಿಥಿಗಳಿಗೆ ಗೌರವ ಸೂಚಿಸಿದರು. ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿ, ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ಡಾ.ಸವಿತ ಪ್ರಶಾಂತ್ ರಾಮಯ್ಯ ಹಾಗೂ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ. ವೆಂಕಟೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೇ 5ರಂದು ಗಾಯನ ಕಾರ್ಯಕ್ರಮ

ಮೈಸೂರು, ಮೇ 2(ಜಿಎ)–ಸ್ನೇಹ ಸಂಗಮ ಹಾಡುಗಳ ಸಂಭ್ರಮ ತಂಡದಿಂದ ಮೇ 5ರಂದು ಸಂಜೆ 4ಕ್ಕೆ ಜಗನ್ಮೋಹನ ಅರಮನೆಯಲ್ಲಿ ಮಧುರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಂಡದ ಸದಸ್ಯ ಲಿಂಗರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಕೂರ್ಗಳ್ಳಿ ಗ್ರಾಮದ ಮುಖಂಡ ಆರ್.ರಾಮು ಉದ್ಘಾಟಿಸುವರು. ಗಾಯಕಿ ಅಮೂಲ್ಯ ಅತಿಥಿಯಾಗಿ ಭಾಗವಹಿಸುವರು. ಒಟ್ಟು 11 ಮಂದಿಯಿಂದ ಕನ್ನಡ, ಹಿಂದಿ ಚಲನಚಿತ್ರಗಳ 40ರಿಂದ 45 ಗೀತೆಗಳ ಗಾಯನ ಪ್ರಸ್ತುತಗೊಳ್ಳಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ತಂಡದ ಗಾಯಕರಾದ ಕೆ.ಐ. ಪ್ರಕಾಶ್, ಸತೀಶ್‌ರಾಜು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 3 ಮೇ 2024

ಪ್ರಜ್ವಲ್, ಹೆಚ್.ಡಿ.ರೇವಣ್ಣ ಬಂಧನಕ್ಕೆ ಆಗ್ರಹಿಸಿ ಜನಪರ ಸಂಘಟನೆಗಳ ಒಕ್ಕೂಟ ಪ್ರತಿಭಟನೆ

ಮಂಡ್ಯ, ಮೇ 2– ಹಾಸನ ಜಿಲ್ಲೆಯಲ್ಲಿ ನಡೆದಿರುವ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದ ಪ್ರಜ್ವಲ್ ರೇವಣ್ಣ, ಶಾಸಕ ಹೆಚ್.ಡಿ.ರೇವಣ್ಣರನ್ನು ಬಂಧಿಸುವಂತೆ ಆಗ್ರಹಿಸಿ ಜನಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಗುರುವಾರ ನಗರದ ಸರ್‌ಎಂವಿ ಪ್ರತಿಮೆ ಬಳಿಯಿಂದ ಮೆರವಣಿಗೆ ಹೊರಟ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮುಖ್ಯಮಂತ್ರಿಗೆ ಮನವಿ ಪತ್ರ ರವಾನಿಸಿದರು. ಹಾಸನದಲ್ಲಿ ಪೆನ್‌ಡ್ರೈವ್ ಮುಖಾಂತರ ಲೈಂಗಿಕ ಚಿತ್ರಗಳು ಮತ್ತು ದೃಶ್ಯಗಳನ್ನು ಹರಿಬಿಡಲಾಗಿದೆ. ಆ ಲೈಂಗಿಕ ಚಿತ್ರಗಳು ಮತ್ತು ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು ಇದರಿಂದ ಮಹಿಳೆಯರ ಘನತೆ ಮತ್ತು ಖಾಸಗಿ ಬದುಕಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಕಿಡಿಕಾರಿದರು.

ಸಂಸದ ಪ್ರಜ್ವಲ್ ರೇವಣ್ಣ, ಶಾಸಕ ರೇವಣ್ಣ ವಿರುದ್ಧ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಜನಪ್ರತಿನಿಧಿ ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿರುವುದು ಕಾಣುತ್ತಿದೆ. ಯಾವುದೇ ವ್ಯಕ್ತಿಯ ಖಾಸಗಿ ಬದುಕಿನ ವಿಚಾರಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವುದು ಅಪರಾಧವಾಗುತ್ತದೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಲಾಭವನ್ನಷ್ಟೇ ಗುರಿಯಾಗಿಸಿಕೊಂಡು ಮಹಿಳೆಯರ ಖಾಸಗಿ ಬದುಕಿನ ಲೈಂಗಿಕ ಚಿತ್ರಗಳು ಮತ್ತು ದೃಶ್ಯಗಳನ್ನು ಸಾರ್ವಜನಿಕವಾಗಿ ಬಿತ್ತರಿಸಿರುವುದು ಅತ್ಯಂತ ಹೀನ ಕೃತ್ಯವಾಗಿದೆ. ಆದ್ದರಿಂದ ಕೃತ್ಯ ಎಸಗಿದವರಷ್ಟೇ ಅಲ್ಲದೆ ಬಹಿರಂಗ ಪಡಿಸಿದವರೂ ಶಿಕ್ಷಾರ್ಹವೇ ಆಗಿದ್ದು, ಹಾಗಾಗಿ ಅವರನ್ನು ಪತ್ತೆ ಹಚ್ಚಿ ಸತ್ಯವನ್ನು ಬಹಿರಂಗಪಡಿಸಬೇಕು ಮತ್ತು ಇಂತಹ ಹೀನ ಕೃತ್ಯವನ್ನು ರಾಜಕೀಯಕ್ಕೆ ಬಳಸಿಕೊಳ್ಳಲು ಪ್ರಯತ್ನ ಮಾಡಿದವರನ್ನೂ ಶಿಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು.



ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹಿಸಿ ಜನಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ದೂರು ದಾಖಲಿಸಲು ಸಿದ್ಧವಿರುವ ಮಹಿಳೆಯರಿಗೆ ಮಾಜಿ ಸಚಿವ ಸಾ.ರಾ.ಮಹೇಶ್ ಬೆದರಿಕೆ ಹಾಕುತಿದ್ದಾರೆ ಎಂಬುದು ಮಾಧ್ಯಮಗಳಲ್ಲಿ ವರದಿಯಾಗಿದ್ದು, ಇವರ ವಿರುದ್ಧವೂ ಸಹ ಕ್ರಮ ವಹಿಸಬೇಕು, ಪ್ರಕರಣದ ತನಿಖೆಗೆ ಜನಸ್ನೇಹಿ ಹಾಗೂ ಮಹಿಳಾ ಪರ ಸಂವೇದನೆ ಹೊಂದಿರುವ ಪೊಲೀಸ್ ಅಧಿಕಾರಿಗಳನ್ನು ಬಳಸಿಕೊಳ್ಳಬೇಕು. ಪ್ರಕರಣಕ್ಕೆ ನೇಮಕವಾಗಿರುವ ಪಬ್ಲಿಕ್ ಪ್ರಾಸಿಕ್ಯೂಟರ್ ಜೊತೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ರನ್ನು ನೇಮಿಸಿ ತನಿಖೆ ಚುರುಕಾಗಿ ನಡೆದು ಆದಷ್ಟು ಬೇಗ ಸತ್ಯಾಂಶ ಬಯಲುಗೊಳಿಸಿ ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

ಲೈಂಗಿಕ ದೌರ್ಜನ್ಯದಲ್ಲಿ ಸಂತ್ರಸ್ತರಾಗಿರುವ ಮಹಿಳೆಯ ಗೌಪ್ಯತೆ ಕಾಪಾಡಿ, ಅವರಿಗೆ ಸೂಕ್ತ ರಕ್ಷಣೆ ಒದಗಿಸಬೇಕು. ಸಂತ್ರಸ್ತ ಮಹಿಳೆಯರಿಗಾಗಿ ಪ್ರತ್ಯೇಕ ಕೌನ್ಸಿಲಿಂಗ್ ಕೇಂದ್ರಗಳನ್ನು ತೆರೆಯಬೇಕು. ಹಾಗೂ ಸಂತ್ರಸ್ಥ ಮಹಿಳೆಯರಿಗೆ ದೂರು ದಾಖಲಿಸಲು ಅನುಕೂಲವಾಗುವಂತೆ ಹಾಸನ ಹಾಗೂ ಬೆಂಗಳೂರಿನಲ್ಲಿ ಪ್ರತ್ಯೇಕವಾದ ದೂರು ಕೇಂದ್ರಗಳನ್ನು ಸ್ಥಾಪಿಸಬೇಕು. ಜೊತೆಗೆ ದೂರು ದಾಖಲಿಸಲು ಬರುವ ಸಂತ್ರಸ್ತ ಮಹಿಳೆಯರಿಗೆ ಸೂಕ್ತ ಭದ್ರತೆ ಮತ್ತು ಪ್ರಯಾಣ ವ್ಯವಸ್ಥೆ ಒದಗಿಸಬೇಕು ಎಂದು ಒತ್ತಾಯಿಸಿದರು.

ಜನಪರ ಒಕ್ಕೂಟದ ದೇವಿ, ಸಿ.ಕುಮಾರಿ, ಸುನಂದ ಜಯರಾಮ್, ಲತಾ, ಸುಶೀಲಾ, ಮಂಜುಳಾ, ಭರತ್ ರಾಜ್, ಪ್ರೇಮಮ್ಮ, ಮಹಾದೇವಮ್ಮ, ಸತ್ಯಭಾಮ, ರೈತ ಸಂಘದ ಕೆಂಪೂಗೌಡ, ಕಾಂಗ್ರೆಸ್ ಮುಖಂಡರಾದ ಅಂಜನಾ ಶ್ರೀಕಾಂತ್, ವಿಜಯಲಕ್ಷ್ಮಿ ರಘುನಂದನ್ ಭಾಗವಹಿಸಿದ್ದರು.

ಪೌರಕಾರ್ಮಿಕರ ಸೇವೆ ಅತ್ಯಮೂಲ್ಯ

ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕಿ ತುಷಾರಮಣಿ

ಮಂಡ್ಯ, ಮೇ 2–ಗಾಳಿ, ಮಳೆ, ಬಿಸಿಲು, ಚಳಿ ಎನ್ನದೆ ದಿನನಿತ್ಯ ನಸುಕಿನ ಜಾವದಿಂದ ಸ್ವಚ್ಛತಾ ಕಾರ್ಯ ಕೈಗೆತ್ತಿಕೊಳ್ಳುವ ಪೌರಕಾರ್ಮಿಕರು ನೈಜ ಕಾಯಕಯೋಗಿಗಳು, ಸ್ವಚ್ಛತಾ ರೂವಾರಿಗಳು ಜಿಲ್ಲೆಯಲ್ಲಿ ಪೌರಕಾರ್ಮಿಕರ ಸೇವೆ ಅತ್ಯಮೂಲ್ಯ ಎಂದು ಜಿಲ್ಲಾ ನಗರಭಿವೃದ್ಧಿ ಕೋಶ ಯೋಜನಾ ನಿರ್ದೇಶಕಿ ತುಷಾರಮಣಿ ತಿಳಿಸಿದರು.

ಗುರುವಾರ ರಾಷ್ಟ್ರೀಯ ಸೇವಾ ಯೋಜನೆ ಘಟಕ ಎಮ್ಸ್, ಸಮುದಾಯ ವೈದ್ಯಶಾಸ್ತ್ರ ವಿಭಾಗ ಎಮ್ಸ್, ವಿಕಸನ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ವಿಶ್ವ ಕಾರ್ಮಿಕ ದಿನಾಚರಣೆಯ ಅಂಗವಾಗಿ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಸಂಸ್ಥೆ ವತಿಯಿಂದ ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೈನಂದಿನ ಜೀವನದಲ್ಲಿ ನಮ್ಮ ದೇಹದಲ್ಲಿ ಆಗುವ ಅನೇಕ ಅಡ್ಡ ಪರಿಣಾಮಗಳ ಕಡೆ ಹೆಚ್ಚಿನ ಗಮನ ಹರಿಸಬೇಕು ಇಲ್ಲದಿದ್ದರೆ ಅನೇಕ ಕಾಯಿಲೆಗೆ ತುತ್ತಾಗಬಹುದು ಆದ್ದರಿಂದ ಆರೋಗ್ಯದ ಕಡೆ ಎಲ್ಲರೂ ಗಮನ ಹರಿಸಿ ಎಂದರು.

ವಿಕಸನ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕ ಮಹೇಶ್ ಚಂದ್ರಗುರು ಮಾತನಾಡಿ, ಕಾರ್ಮಿಕರು ಜಗತ್ತಿನ ಆಸ್ತಿ. ಕಾರ್ಮಿಕರಿಲ್ಲದ ಜಗತ್ತನ್ನು ಊಹಿಸುವುದಕ್ಕೇ ಸಾಧ್ಯವಿಲ್ಲ. ಇಂತಹ ಶ್ರಮಜೀವಿಗಳನ್ನು ಗೌರವಿಸುವ, ಅವರ ಸೇವೆಯನ್ನು ಸ್ಮರಿಸುವ ದಿನವಾಗಿ ಪ್ರತಿ ವರ್ಷ ಅಂತಾರಾಷ್ಟ್ರೀಯ ಕಾರ್ಮಿಕರ ದಿನವನ್ನು ಆಚರಿಸಲಾಗುತ್ತದೆ ಎಂದರು.



ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಜಿಲ್ಲಾ ಆರೋಗ್ಯ ಕುಟುಂಬ ಇಲಾಖೆಯ ಆರ್.ಸಿ.ಹೆಚ್ ಅಧಿಕಾರಿ ಡಾ.ಅನಿಲ್‌ಕುಮಾರ್ ಮಾತನಾಡಿ, ಪ್ರತಿಯೊಬ್ಬ ಪೌರ ಕಾರ್ಮಿಕರು ಆರೋಗ್ಯದಿಂದಿರಬೇಕು ಎಂದು ಈ ದಿನ ಅವರಿಗೋಸ್ಕರ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ. ಹಾಗೆಯೇ ಮುಂದಿನ ದಿನಗಳಲೂ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ ಎಂದು ಹೇಳಿದರು.

ಬಿ.ಜಿ.ಎಸ್ ವೈದ್ಯಕೀಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರು ಹಾಗೂ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಡಾ.ವಿಜಯ್ ಹೂಗಾರ್ ಮಾತನಾಡಿ, ಮಾನಸಿಕ ಆರೋಗ್ಯ ಮತ್ತು ದೈಹಿಕ ಆರೋಗ್ಯ ಎರಡು ಸಹ ಪ್ರತಿಯೊಬ್ಬ ಮನುಷ್ಯನಿಗೆ ಅಗತ್ಯವಾದದ್ದು ಅದರಲ್ಲಿಯೂ ಸಹ ಪೌರಕಾರ್ಮಿಕರಿಗೆ ಈ ಆರೋಗ್ಯ ತಪಾಸಣಾ ಶಿಬಿರ ಬಹುಮುಖ್ಯವಾಗಿದೆ. ಇಂತಹ ಕಾರ್ಯಕ್ರಮಗಳನ್ನು ಬಿ.ಜಿ.ಎಸ್ ವೈದ್ಯಕೀಯ ಮಹಾವಿದ್ಯಾಲಯ ನಡೆಸಿಕೊಂಡು ಬಂದಿದೆ ಎಂದರು.

ಈ ವೇಳೆ ಇಇ ರುದ್ರೇಗೌಡ, ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಶ್ರೀನಿವಾಸ್, ಕರ್ನಾಟಕ ಪೌರ ಕಾರ್ಮಿಕರ ಸಂಘದ ರಾಜ್ಯ ಉಪಾಧ್ಯಕ್ಷ ಆರ್.ನಾಗರಾಜು, ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಸಂಸ್ಥೆಯ ವೈದ್ಯಾಧಿಕಾರಿಗಳು, ವಿಕಸನ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ಸಂಸ್ಥೆ ಹಾಗೂ ನಗರಸಭೆ ಸಿಬ್ಬಂದಿ ವರ್ಗ, ಪೌರಕಾರ್ಮಿಕರು ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಶ್ರೀರಂಗಪಟ್ಟಣ, ಮೇ 2– ಬೆಳಗೊಳ ವಿದ್ಯುತ್ ವಿತರಣಾ ಕೇಂದ್ರದ ಸುತ್ತಲಿನ ಗ್ರಾಮಗಳಾದ ಬೆಳಗೊಳ, ಕೆ.ಆರ್.ಸಾಗರ, ಹೊಸ ಆನಂದೂರು, ಮೊಗರಹಳ್ಳಿ, ಕಾರೇಕುರ, ಕುಪ್ಪೆದಡ, ಕೆಐಡಿಬಿಐ ಇಂಡಸ್ಟ್ರಿಯಲ್, ಹೊಂಗಹಳ್ಳಿ, ವಾಟರ್‌ಸಪ್ಲೈ, ಆನಗನಹಳ್ಳಿ, ಹೊಸ ಉಂಡವಾಡಿ, ಮಜ್ಜಿಗೆಪುರ, ಎಂಎಂಜಿ ಲೇಔಟ್, ಹುಲಿಕೆರೆ ಹೊಸಹಳ್ಳಿ, ಪಾಲಹಳ್ಳಿ ಮತ್ತು ಸುತ್ತಲಿನ ಗ್ರಾಮಗಳಲ್ಲಿ ಮೇ 3 ರಂದು ಬೆಳಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ವಾಲಿಬಾಲ್ ಪಂದ್ಯಾವಳಿ: ಬಿಜಿಎಸ್ ಕಾಲೇಜು ಪ್ರಥಮ

ನಾಗಮಂಗಲ, ಮೇ 2– ತಾಲೂಕಿನ ಶ್ರೀಆದಿಚುಂಚನಗಿರಿ ವಿಶ್ವವಿದ್ಯಾಲಯದ ಬಿಜಿಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಏ.29 ಹಾಗೂ 30ರಂದು ರಾಜ್ಯ ಮಟ್ಟದ ಪುರುಷ ಹಾಗೂ ಮಹಿಳಾ ವಿಭಾಗದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿತ್ತು.



ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ 22 ಪುರುಷ ಹಾಗೂ 10 ಮಹಿಳಾ ತಂಡಗಳು ಭಾಗವಹಿಸಿದ್ದವು.

2 ದಿನ ನಡೆದ ಪಂದ್ಯಾ ವಳಿಯಲ್ಲಿ ಪುರುಷ ವಿಭಾಗದ ಬಿಜಿಎಸ್ ಇಂಜಿನಿಯರಿಂಗ್ ಕಾಲೇಜು ಬಿ.ಜಿ.ನಗರ ತಂಡ ಪ್ರಥಮ ಸ್ಥಾನ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಕುಶಾಲನಗರ ದ್ವಿತೀಯ ಸ್ಥಾನವನ್ನು ಪಡೆದಿದೆ. ಮಹಿಳಾ ವಿಭಾಗದಲ್ಲಿ ಆರ್‌ಐಟಿ ಇಂಜಿನಿಯರಿಂಗ್ ಕಾಲೇಜು ಹಾಸನ ಪ್ರಥಮ ಸ್ಥಾನ ಪಡೆದಿದ್ದು, ಎಸ್‌ಐಟಿ ಇಂಜಿನಿಯರಿಂಗ್ ಕಾಲೇಜು ತುಮಕೂರು ದ್ವಿತೀಯ ಸ್ಥಾನವನ್ನು ಪಡೆದಿದೆ.

ಪಂದ್ಯಾವಳಿಯ ಸಮಾರೋಪದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಲಸಚಿವರು, ಪ್ರಾಂಶುಪಾಲರು ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರು ಉಪಸ್ಥಿತರಿದ್ದರು.

ಮೇ 5ರಿಂದ ರೇಷ್ಮೆ ಬೆಳೆಗಾರರ ಒಕ್ಕೂಟದಿಂದ ಬರ ಅಧ್ಯಯನ

ಮಂಡ್ಯ, ಮೇ 2– ರೇಷ್ಮೆ ಬೆಳೆಗಾರರ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ರೇಷ್ಮೆ ಬೆಳಗಾರರ ಒಕ್ಕೂಟದ ವತಿಯಿಂದ ಜಿಲ್ಲೆಯ ಎಲ್ಲಾ ತಾಲೂಕಿಗೂ ಪ್ರವಾಸ ಮಾಡಿ ರೈತರ ಸಂಕಷ್ಟಗಳನ್ನು ಜಿಲ್ಲಾಡಳಿತಕ್ಕೆ ತಿಳಿಸಿ ತಕ್ಷಣ ಕಾರ್ಯಕ್ರಮ ರೂಪಿಸುವುದಕ್ಕೆ ಬರ ಅಧ್ಯಯನ ಮತ್ತು ಜನ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ರೇಷ್ಮೆ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಶಿವಲಿಂಗಯ್ಯ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಶಿವಲಿಂಗಯ್ಯ ಮಾತನಾಡಿದರು. ಶಿವಕುಮಾರ್, ರಾಮಚಂದ್ರ, ಪುಟ್ಟೇಗೌಡ, ಅಪ್ಪಾಜಿಗೌಡ, ಚನ್ನಪ್ಪ ಇದ್ದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೇಷ್ಮೆ ಬೆಳೆಗಾರರ ಹಿತದೃಷ್ಟಿಯಿಂದ ಬೆಲೆ ಕುಸಿತ ಹಾಗೂ ರೇಷ್ಮೆ ಬೆಳೆಗೆ ಹೆಚ್ಚು ಕೀಟ ಬಾಧೆ, ಈ ವರ್ಷ ಮಳೆ ಮತ್ತು ನೀರು ಕೊರತೆ ಹಿನ್ನೆಲೆ ಹಿಪ್ಪು ನೇರಳೆ ಬೆಳೆಯು ಸಂಪೂರ್ಣ ನೆಲ ಕಚ್ಚಿರುವ ಬಗ್ಗೆ ಅಧ್ಯಯನ ಮಾಡಿ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ವರದಿ ಸಲ್ಲಿಸಿ ರೇಷ್ಮೆ ಬೆಳೆಗಾರರ ಹಿತ ಕಾಯಲು ಬರ ಅಧ್ಯಯನ ಮತ್ತು ಜನ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ರೇಷ್ಮೆ ಬೆಳೆಗಾರರ ಒಕ್ಕೂಟ ಮತ್ತು ಟ್ರಸ್ಟ್‌ನ ಸಂಚಾಲಕ ಜೋಗಿಗೌಡ ಮಾತನಾಡಿ, ಮೇ 5ರಿಂದ 15ರವರಿಗೆ ಮಂಡ್ಯ ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಬರ ಅಧ್ಯಯನ ಮಾಡಲಿದ್ದೇವೆ. ಆಯಾ ತಾಲೂಕಿನ ರೈತರು ಸಭೆಗೆ ಹಾಜರಾಗಿ ಸ್ಥಳೀಯ ಸಮಸ್ಯೆಗಳನ್ನು ಪರಿಶೀಲಿಸಿ ಅಲ್ಲಿ ಚರ್ಚಿಸಿದ ವರದಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಒತ್ತಡ ತಂದು ಪ್ರಸ್ತುತ ಕಂಡರಿಯದ ತೀವ್ರ ಬರಗಾಲಕ್ಕೆ ತುತ್ತಾಗಿರುವ ತೋಟಗಾರಿಕೆ ಬೆಳೆಗಳು, ರೇಷ್ಮೆ, ಕಬ್ಬು ಇತ್ಯಾದಿ ರೈತರಿಗೆ ಸಂಬಂಧಿಸಿದ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ. ಆ ಬೆಳೆಯ ಆದ್ಯತೆಯ ಮೇಲೆ ಕನಿಷ್ಠ ಎಕರೆಗೆ 25 ಸಾವಿರ ರೂ.ಗೂ ಹೆಚ್ಚು ಪರಿಹಾರ ಘೋಷಿಸಿ, ತಕ್ಷಣ ರೈತರ ಪರ ಸರ್ಕಾರ ನಿಲ್ಲಬೇಕು. ಇಂತಹ ಬರವನ್ನು ನಾವು ಎಂದೂ ನೋಡಿರಲಿಲ್ಲ. ಅಂತರ್ಜಲ ತಕ್ಷಣ ಕುಸಿತದಿಂದ ಬೋರ್‌ವೆಲ್ ನಿಂತಿರುವುದು ಆಘಾತಕಾರಿ ವಿಷಯ. ಆದ್ದರಿಂದ ಮಾಹಿತಿ ಸಂಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಕೊಡುವ ಮುಖಾಂತರ ಸರ್ಕಾರಕ್ಕೆ ಒತ್ತಾಯಿಸಲಿದ್ದೇವೆ ಎಂದರು.

ಗೋಷ್ಠಿಯಲ್ಲಿ ಒಕ್ಕೂಟದ ಮುಖಂಡರಾದ ಶಿವಕುಮಾರ್, ರಾಮಚಂದ್ರ, ಪುಟ್ಟೇಗೌಡ, ಅಪ್ಪಾಜಿಗೌಡ, ಚನ್ನಪ್ಪ ಸೇರಿದಂತೆ ಇತರರು ಹಾಜರಿದ್ದರು.

ಕುಡಿಯುವ ನೀರು ಕೊರತೆಯಾಗದಂತೆ ಕ್ರಮ ವಹಿಸಿ

ಅಧಿಕಾರಿಗಳಿಗೆ ಜಿಪ ಸಿಇಓ ಆನಂದ್ ಪ್ರಕಾಶ್ ಮೀನಾ ಸೂಚನೆ

ಚಾಮರಾಜನಗರ, ಮೇ 2–ಜಿಲ್ಲೆಯ ಯಾವುದೇ ಭಾಗದ ಜನರಿಗೆ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಜವಾಬ್ದಾರಿ ಅರಿತು ಕ್ರಮ ವಹಿಸಲು ಮುಂದಾಗಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ಆನಂದ್ ಪ್ರಕಾಶ್ ಮೀನಾ

ಜಿಲ್ಲೆಯಲ್ಲಿ ತೀವ್ರ ಬರ ಪರಿಸ್ಥಿತಿ ಎದುರಾಗಿರುವ ಹಿನ್ನೆಲೆಯಲ್ಲಿ ಇಂದು ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ನಡೆದ ಗೂಗಲ್ ಮೀಟ್ ಸಭೆಯಲ್ಲಿ ಮಾತನಾಡಿದ ಅವರು, ಜನ–ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆ ಯಾಗಬಾರದು. ನೀರಿನ ಸಮಸ್ಯೆಯ ದೂರುಗಳು ಬಂದ ತಕ್ಷಣ ಆದ್ಯತೆ ಮೇರೆಗೆ ಪರಿಹರಿಸಬೇಕು. ಪೈಪ್‌ಲೈನ್‌ನಿಂದ ನೀರು ಅನಾವಶ್ಯಕವಾಗಿ ಪೋಲಾಗದಂತೆ ಸಂರಕ್ಷಿಸಲು ಎಚ್ಚರ ವಹಿಸಬೇಕು. ಎಲ್ಲಾ ಅಧಿಕಾರಿಗಳು ಕೇಂದ್ರಸ್ಥಾನದಲ್ಲಿದ್ದು, ಸಾರ್ವಜನಿಕರಿಗೆ ಕುಡಿಯುವ ನೀರು ಪೂರೈಸಲು ಮುಂದಾಗಬೇಕು. ಸಮಸ್ಯೆ ಪರಿಹರಿಸಲು ವಿಳಂಬ ಧೋರಣೆ ಸಲ್ಲದು. ಇದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಎಚ್ಚರಿಸಿದರು.

ಜಾನುವಾರುಗಳಿಗೆ ನಿಯಮಾನುಸಾರ ಮೇವು ಸಮರ್ಪಕವಾಗಿ ಲಭ್ಯವಾಗಬೇಕು. ಸಮಸ್ಯೆ ಎದುರಾಗುವ ಮೊದಲೇ ಮೇವು ದಾಸ್ತಾನು ಇರುವ ಬಗ್ಗೆ ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. ರೈತರಿಂದ ಯಾವುದೇ ದೂರುಗಳು ಬರದಂತೆ ನಿಗಾ ವಹಿಸಬೇಕು. ನೀರು ಹಾಗೂ ಮೇವು ಒದಗಿಸಲು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪೂರ್ವಸಿದ್ಧತಾ ಕ್ರಮ ಅನುಸರಿಸಬೇಕು. ಈ ಕುರಿತು ಆಯಾಯ ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರು ಮಾಹಿತಿ ಕಲೆಹಾಕಬೇಕು ಎಂದು ತಿಳಿಸಿದರು.

ಪ್ರಸ್ತುತ ಬರ ಪರಿಸ್ಥಿತಿಯಲ್ಲದೆ, ಬಿಸಿಲಿನ ತಾಪ ಹೆಚ್ಚಾಗಿ ಉಷ್ಣಾಂಶ ಅಧಿಕವಾಗಿರುವುದರಿಂದ ಜನರು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸಬೇಕು. ಮಧ್ಯಾಹ್ನದ ವೇಳೆ ಬಿಸಿಲು ಹೆಚ್ಚಾಗಿದ್ದು, ಬಿಸಲಾಘಾತ (ಸನ್ ಸ್ಟ್ರೋಕ್) ಸಂಭವಿಸುವ ಸಾಧ್ಯತೆ ಇರುವುದರಿಂದ ನೆರಳಿನ ವ್ಯವಸ್ಥೆಯಲ್ಲಿ ಕೆಲಸ ಮಾಡುವಂತಿರಬೇಕು. ಜನರು ಮಧ್ಯಾಹ್ನ ಹೊರಹೋಗುವುದನ್ನು ಮುಂದೂಡಬೇಕು. ಬಿಸಿಲಾಘಾತ ತಡೆಯಲು ಮುಂಜಾಗ್ರತೆಯಾಗಿ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು ಅರಿವು ಮೂಡಿಸಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿ, ಜಿಲ್ಲೆಯಲ್ಲಿ ಕುಡಿಯುವ ನೀರು ಸೇರಿದಂತೆ ಜಾನುವಾರುಗಳಿಗೆ ಮೇವಿನ ಸಮಸ್ಯೆಯಾಗದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸೂಕ್ತ ನಿರ್ದೇಶನ ನೀಡಲಾಗಿದೆ. ಕುಡಿಯುವ ನೀರಿನ ಸಮಸ್ಯೆ ಹಾಗೂ ಮೇವು ಅಲಭ್ಯತೆ ಕುರಿತು ಅಧಿಕಾರಿಗಳು ಯಾವುದೇ ಸಬೂಬು ಹೇಳುವಂತಿಲ್ಲ. ಅನುದಾನದ ಅವಶ್ಯವಿದ್ದರೆ ತಕ್ಷಣ ಅಗತ್ಯ ಪ್ರಸ್ತಾವನೆ ಸಲ್ಲಿಸಬೇಕು. ಈ ಸಂಬಂಧ ಆಯಾ ತಾಲೂಕಿನ ತಹಶೀಲ್ದಾರ್‌ಗಳು ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿಗಳು ಸಮನ್ವಯ ಸಾಧಿಸಬೇಕು ಎಂದು ತಿಳಿಸಿದರು.

ಗೂಗಲ್ ಮೀಟ್ ಸಭೆಯಲ್ಲಿ ವಿವಿಧ ತಾಲೂಕು, ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ರಾಹುಲ್ ಗಾಂಧಿ ಗ್ಯಾರಂಟಿ!: 3 ವರ್ಷವಾದರೂ ಈಡೇರಿಲ್ಲ

● ಕಾಯಂ ಉದ್ಯೋಗಕ್ಕಾಗಿ ಕಾಯುತ್ತಿರುವ ಸಂತ್ರಸ್ತರು ● ಸಂಕಷ್ಟಕ್ಕೆ ಸ್ಪಂದಿಸದ ರಾಜ್ಯ ಕಾಂಗ್ರೆಸ್ ಸರ್ಕಾರ



ಚಾಮರಾಜನಗರದ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ ಕುಟುಂಬಸ್ಥರನ್ನು ಭಾರತ್ ಜೋಡೋ ಯಾತ್ರೆ ವೇಳೆ ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಭೇಟಿಯಾಗಿ ಉದ್ಯೋಗ ನೀಡುವ ಭರವಸೆ ನೀಡಿದ್ದರು.

> ಆಕ್ಸಿಜನ್ ಸಂತ್ರಸ್ತರ ಕುಟುಂಬದ 16 ಮಂದಿಗೆ ಈಗಾಗಲೇ ಹೊರಗುತ್ತಿಗೆ ಆಧಾರದಡಿ ನೌಕರಿ ನೀಡಲಾಗಿದೆ. ಕೆಲವರು ನೌಕರಿಗೆ ಅಗತ್ಯವಾದ ಕೋರ್ಸ್‌ಗಳನ್ನು ಪೂರ್ಣಗೊಳಿಸಿಲ್ಲ. ಅದು ಪೂರ್ಣಗೊಂಡ ನಂತರ ಅವರಿಗೆ ಕಾಯಂ ಉದ್ಯೋಗ ನೀಡಲಾಗುವುದು. ಇನ್ನೂ ಉಳಿದವರು ಇದಕ್ಕಿಂತಲೂ ಉತ್ತಮವಾಗಿರುವ ಉದ್ಯೋಗದಲ್ಲಿ ಇದ್ದಾರೆ. ಹೀಗಾಗಿ ಅವರು ಗುತ್ತಿಗೆ ನೌಕರಿಯನ್ನು ತಿರಸ್ಕರಿಸಿದ್ದಾರೆ.
> –ಗೀತಾ ಹುಡೇದಾ, ಹೆಚ್ಚುವರಿ ಜಿಲ್ಲಾಧಿಕಾರಿ

ಚಾಮರಾಜನಗರ, ಮೇ.2–ಭಾರತ್ ಜೋಡೋ ಯಾತ್ರೆ ಹಾಗೂ ಕಳೆದ ವಿಧಾನ ಸಭಾ ಚುನಾವಣಾ ಪ್ರಚಾರದಲ್ಲಿ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರು ನೀಡಿದ್ದ ಕಾಯಂ ಉದ್ಯೋಗದ ಗ್ಯಾರಂಟಿ ಇನ್ನೂ ಈಡೇರದೇ ಆಮ್ಲಜನಕ ದುರಂತದ ಸಂತ್ರಸ್ತರು ಕಣ್ಣೀರಿಡುತ್ತಿದ್ದಾರೆ.

ಇಂದಿಗೆ (2021ರ ಮೇ 2) ಸುಮಾರು 3 ವರ್ಷಗಳ ಹಿಂದೆ ಕೋವಿಡ್ ಎರಡನೇ ಅವಧಿಯಲ್ಲಿ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಸೂಕ್ತ ಸಮಯಕ್ಕೆ ಆಮ್ಲಜನಕ ಸಿಗದ ಪರಿಣಾಮ ಸರ್ಕಾರದ ವರದಿ ಪ್ರಕಾರ 24 ಜನ ಅಸುನೀಗಿದ್ದರು. ನ್ಯಾಯಾಲಯದ ಆದೇಶದಂತೆ ಕೆಲವರಿಗೆ ಅಲ್ಪಸ್ವಲ್ಪ ಪರಿಹಾರ ಸಿಕ್ಕಿದ್ದರೂ ಕಾಂಗ್ರೆಸ್ ನಾಯಕರು ಕೊಟ್ಟಿದ್ದ ಉದ್ಯೋಗ ಗ್ಯಾರಂಟಿ ಮಾತ್ರ ಘಟನೆ ನಡೆದು ಮೂರು ವರ್ಷ ಕಳೆದರು ಇನ್ನೂ ಈಡೇರಿಲ್ಲ.

ರಾಹುಲ್ ಗಾಂಧಿ ಗ್ಯಾರಂಟಿ: ಭಾರತ್ ಜೋಡೋ ಯಾತ್ರೆ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಕ್ಸಿಜನ್ ದುರಂತ ಸಂತ್ರಸ್ತರ ಜೊತೆ ಸಂವಾದ ನಡೆಸಿದ್ದರು. ಆ ವೇಳೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದೇ ಬರಲಿದ್ದು, ಆಕ್ಸಿಜನ್ ದುರಂತ ಕುಟುಂಬದ ಒಬ್ಬರಿಗೆ ಸರ್ಕಾರಿ ಉದ್ಯೋಗ ಕೊಡುತ್ತೇವೆ ಎಂದು ಭರವಸೆ ನೀಡಿದ್ದರು.

ಕಳೆದ ವಿಧಾನಸಭಾ ಚುನಾವಣಾ ಪ್ರಚಾರದ ಸಮಯದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ ಕೊಟ್ಟಿದ್ದರು. ಅದಕ್ಕೂ ಮುನ್ನ ಡಿಕೆಶಿ ಆಕ್ಸಿಜನ್ ದುರಂತ ಕುಟುಂಬಗಳನ್ನೂ ಭೇಟಿ ಮಾಡಿ, ತಲಾ 1 ಲಕ್ಷ ರೂ. ವೈಯಕ್ತಿಕ ಪರಿಹಾರ ನೆರವು ನೀಡಿದ್ದರು.

ಈಗ ಆಗಿರುವುದು ಏನು?: ಸದ್ಯ ಕಾಂಗ್ರೆಸ್ ಸರ್ಕಾರ ಬಂದು ವರ್ಷವಾದರೂ ಇವರಿಗೆ ಉದ್ಯೋಗ ನೀಡಿಲ್ಲ. ಈ ಸಂಬಂಧ ಸಂತ್ರಸ್ತರು ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಸೇರಿದಂತೆ ಸರ್ಕಾರದ ಹಲವು ಸಚಿವರು, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು ಕೂಡ ಕ್ರಮ ಕೈಗೊಳ್ಳುವ ಭರವಸೆಯಷ್ಟೇ ಸಿಕ್ಕಿದೆ ವಿನಾಃ ಇವರಿಗೆ ಕೊಟ್ಟಿದ್ದ ಗ್ಯಾರಂಟಿ ಈಡೇರಿಲ್ಲ.

ಹೊರಗುತ್ತಿಗೆ ನೌಕರಿಗೆ ನಕಾರ: ಸರ್ಕಾರಿ ಉದ್ಯೋಗ ನೀಡಲು ಕೆಲವೊಂದು ಅಡೆತಡೆಗಳಿದ್ದು, ಅದರ ನಿವಾರಣೆ ಯಾಗುವವರೆಗೆ ತಾತ್ಕಾಲಿಕ ಹೊರಗುತ್ತಿಗೆ ಯಡಿ ಉದ್ಯೋಗ ನೀಡಲು ಜಿಲ್ಲಾ ಉಸ್ತುವಾರಿ ಸಚಿವರು ಕೆಲ ತಿಂಗಳ ಹಿಂದೆ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಂತ್ರಸ್ತರಿಗೆ ಭರವಸೆ ನೀಡಿ, ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಮಗೆ ಹೊರಗುತ್ತಿಗೆ ನೌಕರಿ ಬೇಡ. ನಮಗೆ ಕಾಯಂ ಉದ್ಯೋಗವನ್ನೇ ಕೊಡಿ ಎಂದು ಸಚಿವರ ಭರವಸೆಯನ್ನು ಕೆಲವು ಸಂತ್ರಸ್ತರು ತಿರಸ್ಕರಿಸಿದರು. ಇನ್ನೂ ಸರ್ಕಾರ ಕೆಲವರಿಗೆ ಮಾತ್ರ ಪರಿಹಾರ ನೀಡಿತ್ತು ಆದರೆ, ಇನ್ನೂ ಕೆಲವರಿಗೆ ಪರಿಹಾರ ಸಿಕ್ಕಿಲ್ಲ. ಇದರಿಂದ ಜೀವನ ನಡೆಸಲು ಇಂದಿಗೂ ಸಂತ್ರಸ್ತರ ಕುಟುಂಬ ಪರಿತಪ್ಪಿಸುವಂತಾಗಿದೆ.



ರಿಯಾಲಿಟಿ ಶೋ ಒಂದರಲ್ಲಿ ಮೆಕ್ಯಾನಿಕ್‌ಗಳ ಕುರಿತು ಅವಹೇಳನ ಮಾಡಿರುವ ಆರೋಪದಡಿ ಖಾಸಗಿ ದೃಶ್ಯವಾಹಿನಿ, ಕಾರ್ಯಕ್ರಮದ ಆಯೋಜಕರು, ತೀರ್ಪುಗಾರರು ಹಾಗೂ ನಿರೂಪಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕೊಳ್ಳೇಗಾಲ ಟೌನ್ ದ್ವಿಚಕ್ರ ವಾಹನ ದುರಸ್ತಿಗಾರರ ಸಂಘದಿಂದ ಪಟ್ಟಣ ಠಾಣೆ ಪೊಲೀಸರಿಗೆ ಮನವಿ ಸಲ್ಲಿಲಾಯಿತು. ಸಂಘದ ಅಧ್ಯಕ್ಷ ಅಜ್ಗರ್, ಉಪಾಧ್ಯಕ್ಷ ಗಣೇಶ್, ಖಜಾಂಚಿ ಕೃಷ್ಣ, ಕಾರ್ಯದರ್ಶಿ ಸೋಯೇಬ್, ಮಾಜಿ ಕಾರ್ಯದರ್ಶಿ ರಮೇಶ್, ಪದಾಧಿಕಾರಿಗಳಾದ ಆರ್.ಕಣ್ಣನ್, ಸಫೀಉಲ್ಲಾ, ಸರ್ದಾರ್ ಪಾಷ, ಇನಾಯತ್ ಇದ್ದರು.



ಮಹಿಳೆಯರ ರಕ್ಷಣೆಗೆ ಆಗ್ರಹಿಸಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಚಾಮರಾಜನಗರದಲ್ಲಿ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ಕರ್ನಾಟಕ ಸೇನಾ ಪಡೆ ರಾಜ್ಯಾಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಚಾ.ರ.ಕುಮಾರ್, ಗು.ಪುರುಷೋತ್ತಮ್, ನಂಜುಂಡಸ್ವಾಮಿ, ವೀರಭದ್ರ, ಅಮಚವಾಡಿ ಶಿವಣ್ಣ, ಲಿಂಗರಾಜು, ವೀರಭದ್ರ, ಪ್ರಕಾಶ್, ರವಿಚಂದ್ರಪ್ರಸಾದ್, ಆಟೋ ನಾಗೇಶ್, ತಾಂಡವಮೂರ್ತಿ ಇದ್ದರು.

ಶ್ರೀನಿವಾಸಪ್ರಸಾದ್‌ರಿಗೆ ವಕೀಲರ ಶ್ರದ್ಧಾಂಜಲಿ

ಚಾಮರಾಜನಗರ: ನಗರದ ನ್ಯಾಯಾಲಯ ಆವರಣದ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ಮಾಜಿ ಕೇಂದ್ರ ಸಚಿವ ವಿ.ಶ್ರೀನಿವಾಸಪ್ರಸಾದ್ ಅವರಿಗೆ ವಕೀಲರು ಶ್ರದ್ಧಾಂಜಲಿ ಸಲ್ಲಿಸಿದರು.

ಸಂಘದ ಅಧ್ಯಕ್ಷ ನಂಜಯ್ಯ ಮಾತನಾಡಿ, ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದಲ್ಲಿ ಶ್ರೀನಿವಾಸಪ್ರಸಾದ್ ತಮ್ಮದೇ ಛಾಪು ಮೂಡಿಸಿ ಸ್ವಾಭಿಮಾನಿ ಚಕ್ರವರ್ತಿಯಾಗಿದ್ದಾರೆ. ದೀನ ದಲಿತರು, ಬಡವರು ಹಾಗೂ ಎಲ್ಲಾ ವರ್ಗದ ಅಭಿವೃದ್ಧಿಗೆ ಶ್ರಮಿಸಿದ ಧೀಮಂತ ನಾಯಕರು ಎಂದರು.

ಪ್ರಧಾನ ಕಾರ್ಯದರ್ಶಿ ದೊಡ್ಡಮೋಳೆ ರಂಗಸ್ವಾಮಿ ಮಾತನಾಡಿ, ನಾಡಿನ ದಲಿತ ಸೂರ್ಯ ಶ್ರೀನಿವಾಸಪ್ರಸಾದ್ ಅವರು ದಲಿತರ ಶ್ರೇಯೋಭಿವೃದ್ಧಿಗೆ ಸದಾ ಚಿಂತನೆ ಮಾಡುತ್ತಾ ಅವರಿಗೆ ಸಲವತ್ತುಗಳನ್ನು ಕಲ್ಪಿಸುತ್ತಿದ್ದರು. ಇಂತಹ ವ್ಯಕ್ತಿತ್ವದ ನಾಯಕನ ಅಗಲಿಕೆಯ ನೋವುನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಭಗವಂತ ನೀಡಲಿ ಎಂದು ಪ್ರಾರ್ಥಿಸಿದರು. ವಕೀಲರಾದ ಸಿ.ಚೆನ್ನಸ್ವಾಮಿ, ಮೋಹನ್ ಜಗದೀಶ್, ಬಿ.ಯೋಗೇಶ್, ಸಿ.ರಮೇಶ್, ವಕೀಲರಾದ ಎ.ಎಸ್. ವಿಜಯಕುಮಾರ್, ನಟರಾಜು, ಮಹೇಂದ್ರ, ಸುಂದರ್‌ರಾಜು, ಶಿವಕುಮಾರ್, ಮಹೇಶ್, ಹೆಗ್ಗವಾಡಿ ಮಹೇಂದ್ರ ಇದ್ದರು.



ಚಾಮರಾಜನಗರ ನ್ಯಾಯಾಲಯದ ಆವರಣದಲ್ಲಿನ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರಿಗೆ ವಕೀಲರು ಶ್ರದ್ಧಾಂಜಲಿ ಸಲ್ಲಿಸಿದರು.



ಸಿಡಿಲಿಗೆ ಮೂರು ಜಾನುವಾರು ಬಲಿ

ಹನೂರು, ಮೇ.2–ಮರದ ಕೆಳಗೆ ಕಟ್ಟಿಹಾಕಿದ್ದ ಮೂರು ಜಾನುವಾರಗಳು ಸಿಡಿಲು ಬಡಿದು ಮೃತಪಟ್ಟಿರುವ ಘಟನೆ ತಾಲೂಕಿನ ಚೆನ್ನೂರು ಗ್ರಾಮದಲ್ಲಿ ಗುರುವಾರ ಸಂಜೆ ನಡೆದಿದೆ.

ಗ್ರಾಮದ ರೈತರಾದ ದೊರೆಸ್ವಾಮಿಗೆ ಸೇರಿದ ಎರಡು ಜಾನುವಾರು ಹಾಗೂ ವೀರಭದ್ರೇಗೌಡರಿಗೆ ಸೇರಿದ ಒಂದು ಜಾನುವಾರು ಮೃತಪಟ್ಟಿದೆ.

ಬಿಸಿಲಿನ ತಾಪ ಹೆಚ್ಚಾಗಿದ್ದರಿಂದ ರೈತರು ಮರದ ಕೆಳಗೆ ಜಾನುವಾರಗಳನ್ನು ಕಟ್ಟಿಹಾಕಿದ್ದರು. ಸಂಜೆ 4 ಗಂಟೆಗೆ ಬಿರುಗಾಳಿ ಮಳೆ ಪ್ರಾರಂಭವಾಗಿದೆ. ಈ ವೇಳೆ ಸಿಡಿಲು ಬಡಿದು ಜಾನುವಾರುಗಳು ಮೃತಪಟ್ಟಿವೆ. ಇದರಿಂದ ಇಬ್ಬರು ರೈತರಿಗೆ ಸಾವಿರಾರು ರೂ. ನಷ್ಟ ಉಂಟಾಗಿದೆ. ಸ್ಥಳಕ್ಕೆ ತಾಲೂಕು ಪಶು ವೈದ್ಯಾಧಿಕಾರಿ ಭೇಟಿ ನೀಡಿ, ಜಾನುವಾರುಗಳ ಮರಣೋತ್ತರ ಪರೀಕ್ಷೆ ನಡೆಸಿದರು.

ಸೂಕ್ತ ಪರಿಹಾರಕ್ಕೆ ಆಗ್ರಹ: ಚೆನ್ನೂರು ಗ್ರಾಮದಲ್ಲಿ ಸಿಡಿಲಿಗೆ ಮೃತಪಟ್ಟಿರುವ ಜಾನುವಾರುಗಳ ಮಾಲೀಕರಿಗೆ ಜಿಲ್ಲಾಡಳಿತ ಪ್ರಕೃತಿ ವಿಕೋಪದಡಿ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಸಂಘಟನೆಯ ಮುಖಂಡರು ಒತ್ತಾಯಿಸಿದ್ದಾರೆ.


ಮೇ 7ರವರೆಗೆ ದಾಖಲಾತಿ

ಚಾಮರಾಜನಗರ: ನಗರದ ಹೊರವಲಯದ ಮಲ್ಲಯ್ಯನಪುರ ಆದರ್ಶ ವಿದ್ಯಾಲಯದಲ್ಲಿ 2024–25ನೇ ಸಾಲಿನ 6ನೇ ತರಗತಿಗೆ ಮೊದಲ ಸುತ್ತಿನ ಆಯ್ಕೆ ಪಟ್ಟಿಯನ್ನು ಈಗಾಗಲೇ ಪ್ರಕಟ್ಟಿಸಲಾಗಿದ್ದು, ಆಯ್ಕೆಯಾಗಿರುವ ವಿದ್ಯಾರ್ಥಿಗಳನ್ನು ಮೇ 7ರವರೆಗೆ ದಾಖಲಾತಿ ಮಾಡಿಕೊಳ್ಳಲಾಗುವುದು ಎಂದು ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಶುಕ್ರವಾರ 3 ಮೇ 2024

ಮೋದಿ ಫೋಟೋ ಬಳಕೆಗೆ ಅವಕಾಶ ಸಿಕ್ಕಿದೆ; ದೂರು ನೀಡಿದವರಿಗೆ ಮುಖಭಂಗವಾಗಿದೆ



ಶಿವಮೊಗ್ಗ, ಮೇ 2– ಮೋದಿ ಫೋಟೋ ಬಳಕೆಗೆ ನನಗೆ ಅವಕಾಶ ಸಿಕ್ಕಿದ್ದು, ದೂರು ನೀಡಿದ್ದವರಿಗೆ ಮುಖಭಂಗವಾಗಿದೆ ಎಂದು ಕೆಎಸ್ ಈಶ್ವರಪ್ಪ ಅವರು ಗುರುವಾರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ನರೇಂದ್ರ ಮೋದಿ ಫೋಟೋ ಬಳಸಬಾರದು ಎಂದು ಬಿಜೆಪಿ ನಾಯಕರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದರು. ಆದರೆ, ಇದೀಗ ಮೋದಿ ಫೋಟೋ ಬಳಸಬೇಡಿ ಎಂದು ದೂರು ನೀಡಿದವರಿಗೆ ಮುಖಭಂಗವಾಗಿದೆ. ಮೋದಿಯವರ ಫೋಟೋ ಬಳಕೆಗೆ ನನಗೆ ಅಧಿಕಾರ ಸಿಕ್ಕಿದೆ. ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡುತ್ತೇನೆ. ಈ ಚುನಾವಣೆಯಲ್ಲಿ ಜೀವನ ಪೂರ್ತಿ ಅವರ ಫೋಟೋ ಬಳಸುತ್ತೇನೆ. ನರೇಂದ್ರ ಮೋದಿಯವರ ವಿಚಾರಧಾರೆಯನ್ನು ನಾನು ಎಲ್ಲಿಗೂ ತಿಳಿಸುತ್ತೇನೆ ಎಂದು ಹೇಳಿದರು.

ಒಂದನೇ ಪುಟದಿಂದ

ಎಲೆಕ್ಟ್ರಿಕ್ ವಾಹನ ಬಳಕೆ ಪ್ರಮಾಣ ಹೆಚ್ಚಳ

ವಿದ್ಯುತ್‌ಗೆ 4.50ರೂ ದರ ಪಾವತಿಸಬೇಕು. LT6(C) ಸಂಪರ್ಕ ಪಡೆದವರ ಮಾಹಿತಿ ಮಾತ್ರ ನಮ್ಮಲ್ಲಿ ಲಭ್ಯವಾಗಿದೆ. ಆದರೆ, ಕೆಲವರು ವಾಣಿಜ್ಯ ಉದ್ದೇಶಗಳಿಗೆ ಮಂಜೂರಾತಿ ಪಡೆದು ಅಲ್ಲಿ ಇವಿ ಚಾರ್ಜಿಂಗ್ ಪಾಯಿಂಟ್ ಮಾಡುತ್ತಿದ್ದಾರೆ. ಆ ಸಂಪರ್ಕಕ್ಕೆ ಹೆಚ್ಚಿನ ಬೆಲೆ ಪಾವತಿಸುತ್ತಿರುವುದರಿಂದ ಅಂತಹ ಯೂನಿಟ್‌ಗಳ ಬಗ್ಗೆ ನಾವು ಗಮನಹರಿಸುವುದಿಲ್ಲ. ಏಕೆಂದರೆ ಆ ವ್ಯವಸ್ಥೆಯಲ್ಲಿ ಯೂನಿಟ್‌ಗೆ ಗ್ರಾಹಕರು 7ರಿಂದ 8ರೂ ವಿದ್ಯುತ್ ಶುಲ್ಕ ಪಾವತಿಸುತ್ತಿದ್ದಾರೆ ಎಂದು ಸೆಸ್ಕ್ ಅಧಿಕಾರಿಗಳು ತಿಳಿಸಿದ್ದಾರೆ. ಮೈಸೂರಿನ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣ, ಬನ್ನಿಮಂಟಪದ ಬಸ್ ಡಿಪೋ, ವಿರಾಜಪೇಟೆ ಬಸ್ ನಿಲ್ದಾಣ, ಮಡಿಕೇರಿ ಬಸ್ ಡಿಪೋ ಮತ್ತು ಗುಂಡ್ಲುಪೇಟೆ ಬಸ್‌ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿಯಿಂದಲೇ ಎಲೆಕ್ಟ್ರಿಕ್ ಬಸ್‌ಗಳಿಗೆ ಚಾರ್ಜಿಂಗ್ ಘಟಕಗಳನ್ನು ಸ್ಥಾಪಿಸಲಾಗಿದೆ.

ಉಳಿದಂತೆ ವಾಹನ ಮಾರಾಟ ಶೋ ರೂಂಗಳು, ಕೆಲ ಹೋಟೆಲುಗಳು, ಮಾಲ್‌ಗಳ ಬಳಿ ಖಾಸಗಿಯಾಗಿ ಇವಿ ಚಾರ್ಜಿಂಗ್ ಪಾಯಿಂಟ್‌ಗಳನ್ನು ಸ್ಥಾಪಿಸಿ ತಮ್ಮ ಗ್ರಾಹಕರ ವಾಹನಗಳಿಗೆ ಚಾರ್ಜಿಂಗ್ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಲುಕ್‌ಔಟ್ ನೋಟಿಸ್

ಕೇಳಿದರೂ ಕಾನೂನಿನಡಿಯಲ್ಲಿ ಸಮಯ ನೀಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಕೇಂದ್ರ ಸರ್ಕಾರವೇ ಪ್ರಜ್ವಲ್‌ಗೆ ರಾಜತಾಂತ್ರಿಕ (ಡಿಪ್ಲೊಮ್ಯಾಟಿಕ್) ಪಾಸ್ ಪೋರ್ಟ್ ನೀಡಿದೆ. ಹಾಗಾಗಿ ಆತ ರಾತ್ರೋರಾತ್ರಿ ವಿದೇಶಕ್ಕೆ ಹಾರಿದ್ದಾನೆ. ಈ ಪಾಸ್‌ಪೋರ್ಟ್ ಅನ್ನು ರದ್ದುಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಕೋರಿದ್ದಾರೆ. ಪ್ರಜ್ವಲ್ ಅನ್ನು ವಿದೇಶದಿಂದ ಕರೆಸಿ ವಿಚಾರಣೆ ನಡೆಸಲಾಗುವುದು. ಇದರಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಪ್ರಮುಖ ಆರೋಪಿಯಾಗಿ ಎಚ್.ಡಿ.ರೇವಣ್ಣ, ಎರಡನೇ ಆರೋಪಿ ಪ್ರಜ್ವಲ್ ರೇವಣ್ಣ ಇಬ್ಬರಿಗೂ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ ಎಂದರು. ಹಲವು ಮಹಿಳೆಯರ ಮೇಲೆ ಲೈಂಗಿಕ ಶೋಷಣೆ ಮಾಡಿರುವ ದೃಶ್ಯಗಳಿರುವ ಪೆನ್‌ಡ್ರೈವ್ ಮತ್ತು ಸಿಡಿಗಳು ಹಾಸನ ಲೋಕಸಭಾ ಕ್ಷೇತ್ರದ ಚುನಾವಣೆಗೆ 48 ಗಂಟೆ ಮುನ್ನ ಹರಿದಾಡಿದ್ದವು. ಪ್ರಜ್ವಲ್ ಮರು ಆಯ್ಕೆ ಬಯಸಿ ಎನ್‌ಡಿಎ ಕೂಟದ ಅಭ್ಯರ್ಥಿಯಾಗಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಈ ನಡುವೆ ಮತ್ತೊರ್ವ ಮಹಿಳೆ ಪ್ರಜ್ವಲ್ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿದ್ದಾರೆ.

ಪ್ರಜ್ವಲ್ ರಾಜ್ಯಕ್ಕೆ ಮರಳುವ ಸಾಧ್ಯತೆ

ಅಸ್ವಸ್ಥನಾಗಿ ಮಾಡಿಕೊಂಡಿದ್ದಾರೆ. ಎರಡನೇ ಹಂತದ ಚುನಾವಣೆಯ ಮತದಾನ ಸನಿಹ ಸಂದರ್ಭದಲ್ಲಿ ತಮ್ಮನ್ನು ರಾಜಕೀಯವಾಗಿ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬ ಭಾವನೆ ಪ್ರಜ್ವಲ್‌ಗೆ ಬಂದಿದೆ. ವಿದೇಶದಿಂದ ಹಿಂತಿರುಗುತ್ತಿದ್ದಂತೆ ತಮ್ಮನ್ನು ತನಿಖಾಧಿಕಾರಿಗಳು ಬಂಧಿಸಿ ವಿಚಾರಣೆಗೆ ಒಳಪಡಿಸಿದರೆ, ಅದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿ ಉತ್ತರ ಕರ್ನಾಟಕದಲ್ಲಿ ನಡೆಯುತ್ತಿರುವ ಚುನಾವಣೆಯಲ್ಲಿ ಎನ್‌ಡಿಎ ಕೂಟಕ್ಕೆ ಭಾರಿ ಹಿನ್ನಡೆಯಾಗಬಹುದು. ಪಕ್ಷದ ವರಿಷ್ಠರು ಹಾಗೂ ಎನ್‌ಡಿಎ ಕೂಟದ ಕೆಲವು ಮುಖಂಡರು ನೀಡಿದ ಸಲಹೆಯಂತೆ ಮತದಾನ ಮುಗಿದ ನಂತರ ಪ್ರಜ್ವಲ್ ರಾಜ್ಯಕ್ಕೆ ಹಿಂತಿರುಗಲಿದ್ದಾರೆ. ಮತದಾನದ ವರೆಗೂ ಪ್ರಕರಣವನ್ನು ಜೀವಂತವಾಗಿರಿಸಿ ಕಾಂಗ್ರೆಸ್ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತದೆ. ಇದರಿಂದ ಎನ್‌ಡಿಎ ಕೂಟಕ್ಕೆ ಭಾರೀ ಮುಜುಗರವಾಗಲಿದೆ. ಈ ಹಿನ್ನೆಲೆಯಲ್ಲಿ ಪ್ರಜ್ವಲ್ ಏಕಾಏಕಿ ತಮ್ಮ ನಿರ್ಧಾರವನ್ನು ಬದಲಿಸಿ ಮೇ 13ರಂದು ತಾವು ತಂಗಿರುವ ದೇಶದಿಂದ ಹೊರಟು ನಗರಕ್ಕೆ ಧಾವಿಸಲಿದ್ದಾರೆ. ಹಿಂತಿರುಗಿದ ಒಂದೆರಡು ದಿನಗಳ ನಂತರ ಎಸ್‌ಐಟಿ ಮುಂದೆ ಹಾಜರಾಗುವ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಇದಕ್ಕೂ ಮುನ್ನ ಸರ್ಕಾರ ಹಾಗೂ ಎಸ್‌ಐಟಿ ಅವರನ್ನು ಕರೆತರಲು ಯಾವ ತಂತ್ರ ಅನುಸರಿಸುತ್ತದೋ ಕಾದುನೋಡಬೇಕಿದೆ.

ಜೂ.3ರಂದು ಚುನಾವಣೆ

ಮತ್ತಷ್ಟು ಕಾವು: ಲೋಕಸಭಾ ಚುನಾವಣೆ ಕಾವೇರಿರುವ ಸಂದರ್ಭದಲ್ಲಿ ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರವೂ ಸೇರಿದಂತೆ ಆರು ಕ್ಷೇತ್ರಗಳಿಂದ ವಿಧಾನ ಪರಿಷತ್‌ನ 6 ಸ್ಥಾನಗಳಿಗೆ ಚುನಾವಣಾ ಆಯೋಗ ದಿನಾಂಕ ಘೋಷಣೆ ಮಾಡಿದೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಸೇರಿದಂತೆ ದಕ್ಷಿಣ ಕರ್ನಾಟಕದ 14 ಸ್ಥಾನಗಳಿಗೆ ಈಗಾಗಲೇ ಚುನಾವಣೆ ನಡೆದಿದೆ. ಉತ್ತರ ಕರ್ನಾಟಕದ 14 ಕ್ಷೇತ್ರಗಳಿಗೆ ಮೇ.7 ರಂದು ಮತದಾನ ನಡೆಯಲಿದೆ. ದೇಶದಲ್ಲಿ 7 ಹಂತದಲ್ಲಿ ನಡೆಯುತ್ತಿರುವ ಲೋಕಸಭಾ ಚುನಾವಣೆ ಜೂನ್ 1ಕ್ಕೆ ಕೊನೆಯಾಗಲಿದೆ. ಕರ್ನಾಟಕ ಮಾತ್ರವಲ್ಲದೆ ಇಡೀ ದೇಶದಲ್ಲಿ ಲೋಕಸಭಾ ಚುನಾವಣೆಯ ಕಾವು ದಿನ ಕಳೆದಂತೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರವೂ ಸೇರಿದಂತೆ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ನ 6 ಸ್ಥಾನಗಳಿಗೆ ಜೂನ್ 3ರಂದು, ಲೋಕಸಭಾ ಚುನಾವಣೆ ಮತ ಎಣಿಕೆ ಹಿಂದಿನ ದಿನ ಚುನಾವಣೆ ನಡೆಯಲಿದೆ.

ಲೋಕಸಭಾ ಚುನಾವಣೆಯ ಮತ ಎಣಿಕೆ ಜೂನ್ 4 ರಂದು ನಡೆಯಲಿದ್ದು, ಒಂದು ದಿನ ಕಳೆದ ನಂತರ ವಿಧಾನ ಪರಿಷತ್‌ನ ಆರು ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ. ಒಂದಾದ ಮೇಲೆ ಒಂದರಂತೆ ಚುನಾವಣೆ ನಡೆಯುತ್ತಿದ್ದು, ಇದರ ಫಲಿತಾಂಶ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಹಾಗೂ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿರುವ ಕಾಂಗ್ರೆಸ್ ಸರ್ಕಾರದ ಬಲಾಬಲ ಪ್ರದರ್ಶನಕ್ಕೆ ಹಿಡಿದ ಕನ್ನಡಿಯಾಗಲಿದೆ.

ರವಿಗೆ ಮೈಸೂರು ಕೋರ್ಟ್‌ನಿಂದ ಜಾಮೀನು

ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಏ.29ರಂದು ಜಾಮೀನು ಮಂಜೂರು ಮಾಡಿದ್ದು, ಏ.30ರಂದು ಜೈಲಿನಿಂದ ಆತನನ್ನು ಬಿಡುಗಡೆಗೊಳಿಸಲಾಗಿದೆ. ಸ್ಯಾಂಟ್ರೋ ರವಿಗೆ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗುವುದಾಗಿ ಒಡನಾಡಿ ಸೇವಾ ಸಂಸ್ಥೆಯ ಸ್ಟ್ಯಾನ್ಲಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಜಿಲ್ಲಾ ನ್ಯಾಯಾಲಯ ಈತನಿಗೆ ಜಾಮೀನು ನೀಡಿರುವುದು ಅಚ್ಚರಿ ತಂದಿದೆ. ಈತ ಸಲ್ಲಿಸಿದ್ದ ಜಾಮೀನು ಅರ್ಜಿ ಹೈಕೋರ್ಟ್‌ನಲ್ಲಿ ತಿರಸ್ಕೃತವಾಗಿತ್ತು. ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ತಿರಸ್ಕೃತವಾಗುವ ಹಂತದಲ್ಲಿ ಆತನ ವಕೀಲರು ಅರ್ಜಿ ಹಿಂಪಡೆದಿದ್ದರು. ಹೀಗಿದ್ದರೂ ಸಾಕ್ಷಿಗಳ ವಿಚಾರಣೆ ಬಾಕಿ ಇರುವಾಗ ಜಾಮೀನು ನೀಡಿರುವುದು ಸರಿಯಲ್ಲ ಎಂದು ಹೈಕೋರ್ಟ್‌ನಲ್ಲಿ ವಾದಿಸಲಾಗುವುದು. ಈತ ಜಾಮೀನಿನ ಮೇಲೆ ಹೊರ ಬಂದರೆ ಸಾಕ್ಷಿಗಳಿಗೆ ಬೆದರಿಕೆ ಹಾಕುವ ಸಾಧ್ಯತೆ ಇದೆ. ಅನೇಕ ಹಿರಿಯ ಅಧಿಕಾರಿಗಳು ಈತನ ಮರ್ಜಿಯಲ್ಲಿದ್ದಾರೆ. ಈತನ ವಿರುದ್ಧ ದೂರು ಸಲ್ಲಿಸಿದ್ದ ಸಂತ್ರಸ್ತೆಯ ಮೇಲೆಯೇ ಈತನ ಪ್ರಭಾವದಿಂದ ಪೊಲೀಸ್ ಅಧಿಕಾರಿ ಸುಳ್ಳು ಪ್ರಕರಣ ದಾಖಲಿಸಿ, ಆಕೆಯನ್ನು ಜೈಲು ಸೇರುವಂತೆ ಮಾಡಿದ್ದ ಎಂಬುದಕ್ಕೆ ಸಾಕಷ್ಟು ದಾಖಲೆಗಳಿದ್ದು, ಅವುಗಳನ್ನೆಲ್ಲಾ ಹೈಕೋರ್ಟ್ ಗಮನಕ್ಕೆ ತರಲಾಗುವುದು ಎಂದು ಸ್ಟ್ಯಾನ್ಲಿ ಹೇಳಿದರು.

ಆರೆಂಜ್ ಅಲರ್ಟ್

ಹವಾಮಾನ ಇಲಾಖೆ ನೀಡಿರುವ ವೈಜ್ಞಾನಿಕ ವರದಿ ಪ್ರಕಾರ ಮೈಸೂರಿನಲ್ಲಿ ಮೇ 1ರ ಬೆಳಿಗ್ಗೆ 8.30 ರಿಂದ ಮೇ 2ರ ಬೆಳಿಗ್ಗೆ 8.30 ಗಂಟೆ ತನಕ 40.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದರೆ, 22.7 ಡಿಗ್ರಿ ಸೆಲ್ಸಿಯಸ್ ಕನಿಷ್ಟ ಉಷ್ಣಾಂಶವಿದೆ.

ಇತಿಹಾಸದಲ್ಲಿ ಈ ಪ್ರಮಾಣದ ಬಿಸಿಲನ್ನು ಮೈಸೂರು ಜನರು ಎಂದೂ ನೋಡಿರಲಿಲ್ಲ. ಇದೇ ಮೊದಲ ಬಾರಿಗೆ ಉತ್ತರ ಕರ್ನಾಟಕದ ಪ್ರಮಾಣದಷ್ಟೆ ಬಿಸಿಲು ಮೈಸೂರಿಗೂ ಎದುರಾಗಿರುವುದು ಆಘಾತಕಾರಿ ವಿಚಾರವಾಗಿದೆ. ಮೈಸೂರಿನ ಈ ಹಿಂದಿನ ಗರಿಷ್ಠ ಉಷ್ಣಾಂಶದ ದಾಖಲಾತಿ ನೋಡಿದರೆ 38 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ಉಷ್ಣಾಂಶ ಎಂದೂ ದಾಖಲಾಗಿರಲಿಲ್ಲ. ಆದರೆ ಇದೇ ಮೊದಲ ಬಾರಿಗೆ ಮೈಸೂರು, ಮಂಡ್ಯದಲ್ಲಿ 40 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿನ ಉಷ್ಣಾಂಶ ದಾಖಲಾಗಿದೆ.

ಬಿಸಿಲಿನ ಝಳದಿಂದ ಬಿಸಿ ಗಾಳಿ ಅಥವಾ ತೀವ್ರ ಶಾಖದ ಅಲೆಗಳು ಹೆಚ್ಚಾಗಲಿದೆ. ಇದರಿಂದ ಬಿಸಿಲಿನ ತಾಪದಲ್ಲಿ ಆರ್ದ್ರ ಪರಿಸ್ಥಿತಿ ಅಥವ ಗಂಭೀರ ಪರಿಸ್ಥಿತಿ ಎದುರಾಗಲಿದೆ ಎಂದು ಎಚ್ಚರಿಕೆ ನೀಡಿರುವ ಭಾರತೀಯ ಹವಾಮಾನ ಇಲಾಖೆ, ಮೈಸೂರು, ಮಂಡ್ಯ ಸೇರಿದಂತೆ 8 ಜಿಲ್ಲೆಗಳಲ್ಲಿ ಆರೆಂಜ್, ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಇಂದಿನಿಂದ ಮುಂದಿನ ನಾಲ್ಕು ದಿನ, ಅಂದರೆ ಮೇ 5ರವರೆಗೆ ರೆಡ್ ಹಾಗೂ ಆರೆಂಜ್ ಅಲರ್ಟ್ ಘೋಷಿಸಿರುವ ಹವಾಮಾನ ಇಲಾಖೆ, ಈ ದಿನಗಳಲ್ಲಿ ಗರಿಷ್ಟ ಉಷ್ಣಾಂಶದಿಂದ ತೀವ್ರ ಶಾಖದ ಅಲೆ ಅಥವ ಬಿಸಿ ಗಾಳಿ ಹೆಚ್ಚಾಗುತ್ತದೆ ಎಂದು ಎಚ್ಚರಿಕೆ ನೀಡಿದೆ. ಕರ್ನಾಟಕದಲ್ಲಿ ಗರಿಷ್ಠ ಉಷ್ಣಾಂಶ 41 ರಿಂದ 43 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಗುತ್ತಿತ್ತು. ಆದರೆ 2017 ರಿಂದ 2024 ರವರೆಗೆ ವರ್ಷ ಕಳೆದಂತೆ ಉಷ್ಣತೆಯ ಪ್ರಮಾಣ ಹೆಚ್ಚಾಗುತ್ತಿದೆ. ಈಗಿನ ಬಿಸಿಲಿನ ತಾಪ ಹಾಗೂ ಶಾಖದ ಅಲೆಗಳ ಆಧಾರದ ಮೇಲೆ ಕರ್ನಾಟಕದಲ್ಲಿ ಗರಿಷ್ಠ ಉಷ್ಣಾಂಶ 47 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆ ಇದೆ.

ಸಂಸದನಾದರೂ ನಿತ್ಯ 2 ಗಂಟೆ ಜನರಿಗೆ ಆರೋಗ್ಯ ಸೇವೆ

- ಜಯದೇವ ಹೃದ್ರೋಗ ಆಸ್ಪತ್ರೆ ಮಾಜಿ ನಿರ್ದೇಶಕರೂ ಆದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್.ಮಂಜುನಾಥ್ ಜನಹಿತ ನುಡಿ
- ಮೂರನೇ ಬಾರಿ ಮೋದಿ ಪ್ರಧಾನಿಯಾಗುವುದು ಖಚಿತ
- ಬೆಂಗಳೂರು ಗ್ರಾಮಾಂತರದಲ್ಲಿ ನನ್ನ ಗೆಲುವು ನಿಶ್ಚಿತ
- ನಗರ ಪ್ರದೇಶದಲ್ಲಿ ವಾರಾಂತ್ಯ ದಿನ ಮತದಾನ ನಡೆಸಬಾರದು

ಮೈಸೂರು, ಮೇ 2(ಎಂಟಿವೈ)– ರಾಜಕಾರಣದ ಹೊರತಾಗಿಯೂ ಜನರಿಗೆ ಪ್ರತಿದಿನ ಎರಡು ಗಂಟೆ ಆರೋಗ್ಯ ಸೇವೆ ನೀಡಲು ನಿರ್ಧರಿಸಿದ್ದೇನೆ ಎಂದು ಜಯದೇವ ಹೃದ್ರೋಗ ಆಸ್ಪತ್ರೆ ಮಾಜಿ ನಿರ್ದೇಶಕರೂ ಆದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪದ್ಮಶ್ರೀ ಡಾ. ಸಿ.ಎನ್. ಮಂಜುನಾಥ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ನಾನು ಗೆಲುವು ಸಾಧಿಸುವ ವಿಶ್ವಾಸವಿದೆ. ರಾಜಕಾರಣವನ್ನು ಹೊರತುಪಡಿಸಿದರೆ ಪ್ರತಿದಿನ ಜನರಿಗೆ 2 ಗಂಟೆ ಆರೋಗ್ಯ ಸೇವೆ ನೀಡುತ್ತೇನೆ. ಹೃದ್ರೋಗದ ಬಗ್ಗೆ ಜನರಿಗೆ ಅರಿವು ಮೂಡಿಸಬೇಕಾದ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಮುಂದೆ ಸಂಸದನಾಗಿ ಆಯ್ಕೆಯಾದರೂ ಜನರಿಗೆ ಆರೋಗ್ಯ ಸೇವೆ ನೀಡುವುದನ್ನು ನಿಲ್ಲಿಸುವುದಿಲ್ಲ.

ಗೆಲುವು ನಿಶ್ಚಿತ: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು, ಕಾರ್ಯಕರ್ತರು ಒಟ್ಟಾಗಿ ಕೆಲಸ ಮಾಡಿರುವುದರಿಂದ ಈ ಬಾರಿ ನಾನು ಗೆಲ್ಲುವ ವಿಶ್ವಾಸವಿದೆ. ಅಲ್ಲದೆ, ಕಳೆದ



ಮೈಸೂರಿನ ಜಯದೇವ ಆಸ್ಪತ್ರೆಗೆ ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಭೇಟಿ ನೀಡಿದ್ದರು.

ಚುನಾವಣೆಗಿಂತ ಈ ಬಾರಿ ಶೇ.2ರಷ್ಟು ಹೆಚ್ಚಿನ ಮತದಾನವಾಗಿದೆ ಎಂದರು.

ದೇಶದ ಹಿತ ಮುಖ್ಯ: ಲೋಕಸಭಾ ಚುನಾವಣೆಗೂ ವಿಧಾನಸಭಾ ಚುನಾವಣೆಗೂ ವ್ಯತ್ಯಾಸವಿದ್ದು ದೇಶದ ಹಿತಕಾಯುವ ದೃಷ್ಟಿಯಿಂದ ಜನ ಬೇರೆ ರೀತಿಯಲ್ಲಿ ಯೋಚಿಸುತ್ತಾರೆ. ರಾಷ್ಟ್ರ ಮಟ್ಟದಲ್ಲಿ ಸ್ಥಿರ, ಸುಭದ್ರ ಸರ್ಕಾರ ಬೇಕೆಂದು ನೋಡುತ್ತಾರೆ. ದೂರಾಲೋಚನೆ ಇರುವ ಸಮರ್ಥ ನಾಯಕ ಬೇಕು ಎಂದು ಚಿಂತಿಸಿ ಮತ ಚಲಾಯಿಸುತ್ತಾರೆ. ಕೇಂದ್ರ ಸರ್ಕಾರದ ಜನಪರ ಯೋಜನೆಗಳನ್ನು ನೋಡುತ್ತಾರೆ. ಒಟ್ಟಾರೆ ಜನರು ಈ ಬಾರಿ ಬದಲಾವಣೆ ಬಯಸಿರುವುದರಿಂದ ಎಲ್ಲಾ 8 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಉತ್ತಮ ಜನಸ್ಪಂದನೆ ಇರುವುದರಿಂದ ಹಾಗೂ ಕಳೆದ 35 ವರ್ಷ ಜಯದೇವ ಆಸ್ಪತ್ರೆಯಲ್ಲಿ ನಿರಂತರ ಸೇವೆ ಮಾಡಿರುವುದರಿಂದ ಪ್ರತಿಯೊಂದು ಊರಿನಲ್ಲೂ ಹೃದ್ರೋಗಿಗಳಿದ್ದಾರೆ. ಹೋದ ಕಡೆಯಲ್ಲೆಲ್ಲಾ ಅವರೇ ಬಂದು ಮಾತನಾಡಿಸಿ ಬೆಂಬಲ ಸೂಚಿಸಿದ್ದಾರೆ. ನೀವು ಗೆಲ್ಲಬೇಕು ಎಂದು ಆಶೀರ್ವದಿಸಿದ್ದಾರೆ. ಆದ್ದರಿಂದ ನನಗೆ ಗೆಲುವಿನ ವಿಶ್ವಾಸವಿದೆ. ರಾಜ್ಯದಲ್ಲೂ ಬಿಜೆಪಿ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದ್ದು, ಮೋದಿ ಮತ್ತೆ 3ನೇ ಬಾರಿಗೆ ಈ ದೇಶದ ಪ್ರಧಾನಿಯಾಗಲಿದ್ದಾರೆ ಎಂದರು.

ಸೋಮವಾರದಿಂದ ಗುರುವಾರದ ವರೆಗೆ ಮಾತ್ರ ಮತದಾನವಾಗಬೇಕು: ಬೆಂಗಳೂರಿನಂತಹ ನಗರಗಳಲ್ಲಿ ಮತದಾನದ ಪ್ರಮಾಣ ಹೆಚ್ಚಾಗಬೇಕಾದರೆ ಚುನಾವಣೆ ನಡೆಯುವ ದಿನಗಳು ಪ್ರಮುಖ ಪಾತ್ರ ವಹಿಸುತ್ತವೆ. ಚುನಾವಣಾ ಆಯೋಗ ಚಿಂತನೆ ಮಾಡಿ ದೊಡ್ಡ ನಗರದಲ್ಲಿ ಸೋಮವಾರದಿಂದ ಗುರುವಾರದ ನಡುವೆ ಮತದಾನ ನಡೆಯುವಂತೆ ಕ್ರಮ ಕೈಗೊಳ್ಳಬೇಕು. ವಾರಾಂತ್ಯಕ್ಕೆ ಹೊಂದಿಕೊಂಡಂತೆ ಶುಕ್ರವಾರ ಮತದಾನದ ದಿನ ನಿಗದಿಯಾದರೆ, ಕೆಲವರು ಮತದಾನದಿಂದ ದೂರವುಳಿದು ಬೇರೆಡೆಗೆ ತೆರಳುವ ಸಾಧ್ಯತೆಯೂ ಇರುತ್ತದೆ. ಆ ಕಾರಣದಿಂದ ವಾರದ ಆರಂಭದ ದಿನಗಳಲ್ಲಿ ಮತದಾನ ನಡೆಸುವುದು ಸೂಕ್ತ ಎಂದು ಸಲಹೆ ನೀಡಿದರು.

ಜಯದೇವ ಆಸ್ಪತ್ರೆಗೆ ಭೇಟಿ: ಮೈಸೂರಿನ ಜಯದೇವ ಆಸ್ಪತ್ರೆಗೆ ಭೇಟಿ ನೀಡಿದ ಡಾ.ಸಿ.ಎನ್. ಮಂಜುನಾಥ್ ರೋಗಿಗಳು, ವೈದ್ಯರು, ಸಿಬ್ಬಂದಿಗಳೊಂದಿಗೆ ಸಮಾಲೋಚಿಸಿದರು. ಬಳಿಕ ಸಿಬ್ಬಂದಿಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ, ಡಾ.ಸಂತೋಷ್, ಡಾ.ಜಯಪ್ರಕಾಶ್, ಡಾ.ವಿಶ್ವನಾಥ್, ಡಾ.ಕುಮಾರ್, ಡಾ.ಶಿಸಿರ್ ಮಿರ್ಜಾ, ಡಾ. ಸೌಜನ್ಯ ಹಿರಿಯ ಶುಶ್ರೂಷಾಧಿಕಾರಿ ಹರೀಶ್‌ಕುಮಾರ್, ವಾಣಿ, ಚಂಪಕಮಾಲ ಉಪಸ್ಥಿತರಿದ್ದರು.

ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಮುನ್ನೆಚ್ಚರಿಕಾ ಕ್ರಮಕ್ಕೆ ಸೂಚನೆ

ಮೈಸೂರು,ಮೇ 2(ಆರ್‌ಕೆ)–ಬೇಸಿಗೆ ಬಿಸಿಲಿನ ತಾಪ ಹೆಚ್ಚಾಗುತ್ತಿರುವುದರಿಂದ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಮುಂಜಾಗ್ರತಾ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ತಮ್ಮ ಕಚೇರಿ ಕೆ–ಸ್ವಾನ ಸಭಾಂಗಣದಲ್ಲಿ ಇಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಅವರು, ಜಿಲ್ಲಾ ವಿಪತ್ತು ನಿರ್ವಹಣಾ ಯೋಜನೆಯಡಿ ಕಾರ್ಯ ಪ್ರವೃತ್ತರಾಗಿ ಜಿಲ್ಲೆಯಾದ್ಯಂತ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮ ವಹಿಸಿ ಎಂದು ತಹಶೀಲ್ದಾರ್, ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಅಸಿಸ್ಟಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ತಾಕೀತು ಮಾಡಿದರು.

ಪ್ರತೀ ದಿನ ಸಭೆ ನಡೆಸಿ ಎಲ್ಲೆಲ್ಲಿ ನೀರಿನ ಸಮಸ್ಯೆ ಇದೆ ಎಂಬುದನ್ನು ತಿಳಿದುಕೊಂಡು, ಆಯಾ ಗ್ರಾಮಗಳಿಗೆ ಭೇಟಿ ನೀಡಿ ಪರಿಹಾರೋಪಾಯಕ್ಕೆ ಮುಂದಾಗಿ



ಡಿಸಿ ಕಚೇರಿ ಸಭಾಂಗಣದಲ್ಲಿ ಡಿಸಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಎಂದ ಅವರು, ಈ ಉದ್ದೇಶಕ್ಕೆ ಬೇಕಾದ ಅನುದಾನ ನೀಡಲಾಗುವುದು. ಖಾಸಗಿ ಬೋರ್‌ವೆಲ್‌ಗಳನ್ನು ಪಡೆದು ಅದರ ಬಿಲ್ಲನ್ನು ವಿಪತ್ತು ನಿರ್ವಹಣೆಯಡಿ ಭರಿಸಿ ಎಂದರು.

ಈಗಾಗಲೇ ಸಮಸ್ಯೆ ಇರುವ 26 ಗ್ರಾಮಗಳಿಗೆ ಖಾಸಗಿ ಬೋರ್‌ವೆಲ್‌ಗಳಿಂದ ನೀರು ಪೂರೈಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮಳೆ ಬೀಳದಿದ್ದಲ್ಲಿ ಇನ್ನೂ 113 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಉಂಟಾಗುವ ಸಾಧ್ಯತೆ ಇರುವುದರಿಂದ ಮುಂಚಿತವಾಗಿಯೇ ಖಾಸಗಿ ಬೋರ್‌ವೆಲ್‌ಗಳನ್ನು ಗುರ್ತಿಸಿ ವಶಕ್ಕೆ ಪಡೆಯಬೇಕು ಎಂದು ಡಾ.ರಾಜೇಂದ್ರ ತಿಳಿಸಿದರು.

ಜಿಲ್ಲೆಯಾದ್ಯಂತ ಕೆರೆಗಳ ಹೂಳು ತೆಗೆಸಿ ಮಳೆ ನೀರು ಸಂಗ್ರಹವಾಗುವಂತೆ ಮಾಡಿದಲ್ಲಿ ಅಂತರ್ಜಲ ಹೆಚ್ಚಾಗಿ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತದೆ. ಒತ್ತುವರಿಯಾಗಿದ್ದರೆ ತೆರವುಗೊಳಿಸಿ ತಂತಿ ಬೇಲಿ ಹಾಕಿಸಬೇಕು, ರೈತ ಮುಖಂಡರುಗಳೊಂದಿಗೆ ಆಗಿಂದಾಗ್ಗೆ ಸಭೆ ನಡೆಸಿ ಜನ–ಜಾನುವಾರುಗಳಿಗೆ ನೀರು, ಮೇವಿನ ಸಮಸ್ಯೆ ಬಗ್ಗೆ ತಿಳಿದುಕೊಂಡು ಅಗತ್ಯ ಬಿದ್ದರೆ ಗೋಶಾಲೆ ತೆರೆದು ಸೌಲಭ್ಯ ಒದಗಿಸಿ ಎಂದು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೆಲವು ಖಾಸಗಿ ವ್ಯಕ್ತಿಗಳು ಅನುಮತಿ ಪಡೆಯದೇ ಕೊಳವೆ ಬಾವಿಗಳನ್ನು ಕೊರೆಸುತ್ತಿರುವುದರ ಬಗ್ಗೆ ದೂರುಗಳು ಕೇಳಿ ಬರುತ್ತಿರುವುದರಿಂದ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಕಾರ್ಯ ಸ್ಥಗಿತಗೊಂಡಿರುವ ಹಾಗೂ ಸಂಪರ್ಕ ಕಲ್ಪಿಸದಿರುವ ಬೋರ್‌ವೆಲ್‌ಗಳನ್ನು ಬಂದ್ ಮಾಡಿ ಅಪಾಯ ಸಂಭವಿಸುವುದನ್ನು ತಪ್ಪಿಸಿ ಎಂದು ಜಿಲ್ಲಾಧಿಕಾರಿಗಳು ಇದೇ ಸಂದರ್ಭ ಸೂಚನೆ ನೀಡಿದರು.

ಬೇಸಿಗೆ ಬಿಸಿಲಿನಲ್ಲಿ ಕಾಲರಾ ಪ್ರಕರಣ ಕಂಡು ಬರುತ್ತಿದ್ದು, ಶುದ್ಧ ಕುಡಿಯುವ ನೀರು ಪೂರೈಸಿ ಶುಚಿತ್ವ ಕಾಪಾಡಬೇಕು. ಹೋಟೇಲುಗಳಲ್ಲಿ ಬಿಸಿ ನೀರು, ಶುದ್ಧ ಹಾಗೂ ಗುಣಮಟ್ಟದ ಆಹಾರ ನೀಡಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದ ಅವರು, ನೀರಿನ ಸಮಸ್ಯೆ ಕಂಡು ಬಂದಲ್ಲಿ 1077 ಜಿಲ್ಲಾ ಕಂಟ್ರೋಲ್ ರೂಂಗೆ ಕರೆ ಮಾಡುವಂತೆ ಜನರಿಗೆ ಮಾಹಿತಿ ನೀಡಿ ಎಂದರು. ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ಹಾಗೂ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕಾಮಗಾರಿ ವೇಳೆ ಕಬ್ಬಿಣದ ರಾಡ್ ತಲೆಗೆ ಬಡಿದು ಬಾಲಕ ಸಾವು

ಹಲಗೂರು, ಮೇ.2– ದೇವಸ್ಥಾನದ ಕಾಮಗಾರಿ ವೇಳೆ ಕಬ್ಬಿಣದ ರಾಡು ತಲೆ ಮೇಲೆ ಬಿದ್ದು, ಮೈಸೂರಿನ ಬಾಲಕ ಸಾವನ್ನಪ್ಪಿದ ಘಟನೆ ಸಮೀಪದ ಕಂಸಾಗಾರ ಗ್ರಾಮದಲ್ಲಿ ನಡೆದಿದೆ.



ಮೈಸೂರಿನ ಗೌಸಿಯಾ ನಗರ ನಿವಾಸಿ ಕಲಿಂ ಪಾಷಾ ಎಂಬವರ ಪುತ್ರ ಮಹಮದ್ ಪಾಷಾ (15) ಮೃತಪಟ್ಟ ಬಾಲಕನಾಗಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದ ಈತ ತನ್ನ ಚಿಕ್ಕಪ್ಪಂದಿರಾದ ಮುಸ್ತಫ ಅಹಮದ್ ಮತ್ತು ಇಕ್ರಂ ಅಹಮದ್ ಅವರನ್ನು ನೋಡಿಕೊಂಡು ಹೋಗಲು ಕಂಸಾಗರ ಗ್ರಾಮಕ್ಕೆ ಬಂದಿದ್ದ. ಬುಧವಾರ ಮಹದೇಶ್ವರ ದೇವಸ್ಥಾನದ ಬಳಿ ಮೇಲ್ಛಾವಣಿಯ ವೆಲ್ಡಿಂಗ್ ಕೆಲಸ ಮಾಡುತ್ತಿದ್ದಾಗ ಆಯತಪ್ಪಿದ ಕಬ್ಬಿಣ ರಾಡು ಕೆಳಗೆ ನಿಂತಿದ್ದ ಮಹಮದ್ ಪಾಷಾ ತಲೆಗೆ ಬಡಿದಿದೆ. ತೀವ್ರ ಗಾಯಗೊಂಡ ಬಾಲಕ ಮಹಮದ್ ಪಾಷಾನನ್ನು ಮಳವಳ್ಳಿ ತಾಲೂಕು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಶಿವಮೊಗ್ಗದಲ್ಲಿ ವಿಚಾರಣಾಧೀನ ಕೈದಿಯ ಹೊಟ್ಟೆಯಿಂದ ಮೊಬೈಲ್ ಫೋನ್ ಹೊರತೆಗೆದ ವೈದ್ಯರು!

ಶಿವಮೊಗ್ಗ, ಮೇ 2– ಶಿವಮೊಗ್ಗ ಕೇಂದ್ರ ಕಾರಾಗೃಹದಲ್ಲಿರುವ ವಿಚಾರಣಾಧೀನ ಕೈದಿಯೊಬ್ಬರ ಹೊಟ್ಟೆಯಿಂದ ಮೊಬೈಲ್ ಫೋನ್ ಅನ್ನು ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದಿದ್ದಾರೆ.

ಪರಶುರಾಮ್ (26) ಎಂಬ ವಿಚಾರಣಾಧೀನ ಕೈದಿ ಮಾರ್ಚ್ 28ರಂದು ಹೊಟ್ಟೆನೋವಿನಿಂದ ಬಳಲುತ್ತಿದ್ದು, ಈ ವೇಳೆ ಕಾರಾಗೃಹದ ಸಿಬ್ಬಂದಿ ಜೈಲು ಆವರಣದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಬಳಿಕ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಈ ವೇಳೆ ಕೆಲ ಸಮಯದ ಹಿಂದೆ ಕಲ್ಲು ನುಂಗಿದ್ದೆ ಎಂದು ವೈದ್ಯರ ಬಳಿ ಹೇಳಿಕೊಂಡಿದ್ದಾನೆ. ಬಳಿಕ ವೈದ್ಯರು ಕಲ್ಲು ಸೇವನೆಯಿಂದ ಹೊಟ್ಟೆ ನೋವು ಕಾಣಿಸಿಕೊಂಡಿದೆ ಎಂದು ವರದಿ ಮಾಡಿ, ಚಿಕಿತ್ಸೆ ನೀಡಿದ್ದಾರೆ. ಏಪ್ರಿಲ್ 1 ರಂದು ಅವರ ಸ್ಥಿತಿ ಮತ್ತೆ ಹದಗೆಟ್ಟಿದೆ. ಬಳಿಕ ಪರಶುರಾಮ್‌ಗೆ ವಿಶೇಷ ಚಿಕಿತ್ಸೆಯ ಅಗತ್ಯವಿದೆ ಎಂದು ವೈದ್ಯರು ಜೈಲು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಏಪ್ರಿಲ್ 6 ರಂದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಏಪ್ರಿಲ್ 25ರಂದು ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರು, ಪರಶುರಾಮ್ ಹೊಟ್ಟೆಯಿಂದ ಮೊಬೈಲ್ ಫೋನ್ ಅನ್ನು ಹೊರ ತೆಗೆದಿದ್ದಾರೆ.ಕಾರಾಗೃಹದಲ್ಲಿರುವ ಸಮಯದಲ್ಲಿ ಮೊಬೈಲ್ ಫೋನ್ ಹೊಂದಿದ್ದ ಹಿನ್ನೆಲೆಯಲ್ಲಿ ಇದೀಗ ಪರಶುರಾಮ್ ವಿರುದ್ಧ ಕರ್ನಾಟಕ ಕಾರಾಗೃಹಗಳ (ತಿದ್ದುಪಡಿ) ಕಾಯ್ದೆ–2022ರ ಸೆಕ್ಷನ್ 42ರ ಅಡಿಯಲ್ಲಿ ಶಿವಮೊಗ್ಗದ ತುಂಗಾ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ

ಚಿಣ್ಣರ ನಾಟಕೋತ್ಸವಕ್ಕೆ ಚಾಲನೆ



ಚಿಣ್ಣರಮೇಳ–2024ರ ಚಿಣ್ಣರ ನಾಟಕೋತ್ಸವಕ್ಕೆ ರಂಗಕರ್ಮಿ ಶ್ರೀಧರ ಹೆಗ್ಗೋಡು ಹಾಡಿನ ಮೂಲಕ ಚಾಲನೆ ನೀಡಿದರು. ರಂಗಕರ್ಮಿ ಮೈಮ್ ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮತ್ತಿತರರಿದ್ದರು.

ಮೈಸೂರು, ಮೇ 2(ಎಂಕೆ)– ಆಟ... ಆಟ... ಚಿಣ್ಣರ ಮೇಳದಲ್ಲಿ ಮಕ್ಕಳ ಆಟ ಎಂಬ ಹಾಡಿನೊಂದಿಗೆ 'ಚಿಣ್ಣರ ನಾಟಕೋತ್ಸವ'ಕ್ಕೆ ಗುರುವಾರ ಚಾಲನೆ ನೀಡಲಾಯಿತು.

ಮೈಸೂರು ರಂಗಾಯಣದಲ್ಲಿ ಆಯೋಜಿಸಿರುವ ಚಿಣ್ಣರಮೇಳ–2024ರ ಅಂಗವಾಗಿ ಮೇ 6ರವರೆಗೆ ಹಮ್ಮಿಕೊಂಡಿರುವ ಚಿಣ್ಣರ ನಾಟಕೋತ್ಸವಕ್ಕೆ ರಂಗಕರ್ಮಿ ಶ್ರೀಧರ ಹೆಗ್ಗೋಡು, ಆಟ... ಆಟ.. ಚಿಣ್ಣರ ಮೇಳದಲ್ಲಿ ಮಕ್ಕಳ ಆಟ ಹಾಡನ್ನು ಹಾಡುವ ಮೂಲಕ ವಿಶೇಷವಾಗಿ ಚಾಲನೆ ನೀಡಿದರು.

ಬಳಿಕ ಮಕ್ಕಳನ್ನುದ್ದೇಶಿಸಿ ಮಾತನಾಡಿದ ಅವರು, ಈಗಷ್ಟೇ ರಂಗಭೂಮಿಯಲ್ಲಿ ತಮ್ಮ ಅಭಿನಯ ಶುರು ಮಾಡಿದ್ದೀರಿ. ಮುಂದಿನ ದಿನಗಳಲ್ಲಿ ಆಸಕ್ತ ರಂಗಕರ್ಮಿಗಳಾಗಿ, ಸಮಾಜದಲ್ಲಿ ಒಳ್ಳೆಯ ಹಾಗೂ ಉತ್ತಮ ಪ್ರಜೆಗಳಾಗಿ ಎಂದು ಹಾರೈಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಮಳೆ ಇಲ್ಲದೆಯೂ ರಂಗಾಯಣ ಆವರಣದಲ್ಲಿ ಹಕ್ಕಿ–ಪಕ್ಷಿಗಳ ಹಾಗೆ ಕಲರವ ಸೃಷ್ಟಿಸಿದ ಪುಟಾಣಿಗಳು ತಮ್ಮ ರಂಗ ಕಲಿಕೆಯ ಪ್ರದರ್ಶನ ನೀಡುವ ಹಂತಕ್ಕೆ ಕಲಿತಿದ್ದಾರೆ. ಬೇಸಿಗೆಯಾಗಿರುವುದರಿಂದ ಬಿಸಿಲಿನ ತಾಪಕ್ಕೆ ಎಲ್ಲಿ ಮಕ್ಕಳಿಗೆ ಏನಾದರೂ ತೊಂದರೆಯಾಗುತ್ತದೋ ಎಂಬ ಆತಂಕ ಇತ್ತು. ಆದರೆ, ಮಕ್ಕಳ ಮೊಗ್ಗಾಗಿ ಅರಳುತ್ತಿರುವ ಚಿಣ್ಣರ ನಮ್ಮ ಆತಂಕವನ್ನು ದೂರಮಾಡಿ ಚಿಣ್ಣರ ಮೇಳವನ್ನು ಯಶಸ್ವಿಗೊಳಿಸಿದ್ದಾರೆ ಎಂದು ಶಹಬಾಸ್‌ಗಿರಿ ನೀಡಿದರು.

ರಂಗಾಯಣ ಚಿಣ್ಣರ ಮೇಳವೇ ಉನ್ನತ: ಹಿರಿಯ ರಂಗಕರ್ಮಿ ಮೈಮ್ ರಮೇಶ್ ಮಾತನಾಡಿ, ಮೈಸೂರು ರಂಗಾಯಣದಲ್ಲಿ ನಡೆಯುವ ಚಿಣ್ಣರ ಮೇಳವೇ ಉನ್ನತವಾದುದು. 1997ರಿಂದ ರಂಗಾಯಣದಲ್ಲಿ ಚಿಣ್ಣರ ಮೇಳವನ್ನು ಆಯೋಜಿಸುತ್ತಾ ಬರಲಾಗುತ್ತಿದೆ. ರಂಗಾಯಣದಿಂದ ನಿವೃತ್ತಿಯಾಗಿ 7 ವರ್ಷಗಳ ನಂತರ ಮತ್ತೆ ರಂಗಾಯಣ ಚಿಣ್ಣರ ಮೇಳದಲ್ಲಿ ಭಾಗವಹಿಸಿರುವುದು ನನ್ನ ಪುಣ್ಯ ಎಂದರು.

ಸಮಯ ಪ್ರಜ್ಞೆ: ಮಕ್ಕಳು ದೇಶದ ಭವಿಷ್ಯ. ಹಾಗಾಗಿ ಪೋಷಕರು ಮಕ್ಕಳ ಎದುರು ಹೇಗೆ ವರ್ತಿಸುತ್ತಾರೆ ಎಂಬುದು ಬಹಳ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪೋಷಕರಲ್ಲಿ ಸಮಯಪ್ರಜ್ಞೆ ಬಹಳ ಮುಖ್ಯ. ಸಾಧ್ಯವಾದಷ್ಟು ಮೊಬೈಲ್ ಮತ್ತು ಟಿವಿಯಿಂದ ಮಕ್ಕಳನ್ನು ದೂರವಿಡಿ. ಮಕ್ಕಳಲ್ಲಿ ಸಂಸ್ಕೃತಿ–ಸಂಸ್ಕಾರದ ಜೊತೆಗೆ ಜಾತಿ–ಮತ, ಮೇಲು–ಕೀಳು ಎಂಬ ಭಾವನೆಗಳಿಗೆ ಅವಕಾಶವೇ ಇಲ್ಲದಂತಹ ಮಾನವೀಯತೆ ಪ್ರಜ್ಞೆ ದೊರೆಯುವ ಶಿಕ್ಷಣ ನೀಡುವುದು ಪೋಷಕರ ಜವಾಬ್ದಾರಿಯಾಗಿದೆ ಎಂದು ಎಚ್ಚರಿಸಿದರಲ್ಲದೆ, ಸೋಮಾರಿ ಬಾಲಕ ಶಾಲೆಗೆ ಹೇಗೆ ಹೊರಡುತ್ತಾರೆ ಎಂಬುದನ್ನು ಮೂಕಾಭಿನಯ(ಮೈಮ್)ದ ಮೂಲಕ ಪ್ರದರ್ಶಿಸುವುದರೊಂದಿಗೆ ಮಕ್ಕಳ ಮನ ಗೆದ್ದರು.

ಮಳೆ ಹನಿಗೆ ಕುಣಿದಾಡಿದ ಪುಟಾಣಿಗಳು: ವೇದಿಕೆ ಕಾರ್ಯಕ್ರಮದ ವೇಳೆ ಆಗಸದಿಂದ ವರುಣ ಸಿಂಚನವಾಗುತ್ತಿದ್ದಂತೆ ಪುಟಾಣಿಗಳು ಮಳೆ ಬಂತು... ಮಳೆ ಬಂತು ಎಂದು ಕುಣಿದು ಕುಪ್ಪಳಿಸಿದರು. ಕೆಲ ನಿಮಿಷಗಳ ಮಳೆ ಹನಿ ನಿಂತ ಬಳಿಕ ಮಕ್ಕಳ ಪ್ರತಿಭೆಯನ್ನು ಪೋಷಕರು ಕಣ್ತುಂಬಿಕೊಂಡರು. ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಚಿಣ್ಣರ ಮೇಳ ಶಿಬಿರದ ಸಂಚಾಲಕಿ ಗೀತಾ ಮೋಂಟಡ್ಕ ಉಪಸ್ಥಿತರಿದ್ದರು.

ಸಮರಸವೇ ಜೀವನ...!



'ಶ್ರೀ ಕೃಷ್ಣ ಗಾರುಡಿ' ನಾಟಕ ಪ್ರದರ್ಶನ ನೀಡಿದ ಪುಟಾಣಿಗಳು

ಚಿಣ್ಣರ ನಾಟಕೋತ್ಸವದಲ್ಲಿ ಪುಟಾಣಿಗಳು, 'ಶ್ರೀ ಕೃಷ್ಣ ಗಾರುಡಿ' ನಾಟಕದ ಮೂಲಕ ಚಿಣ್ಣರ ಮೇಳ–2024ರ 'ಸಮರಸವೇ ಜೀವನ' ಸಂದೇಶವನ್ನು ಅರ್ಥವತ್ತಾಗಿ ಸಾರಿದರು.

ಕುರುಕ್ಷೇತ್ರ ಯುದ್ಧದಲ್ಲಿ ಗೆದ್ದ ಬಳಿಕ ಪಾಂಡವರು ಹಸ್ತಿನಾವತಿಗೆ ಒಡೆಯರಾಗುತ್ತಾರೆ. ಕೃಷ್ಣನ ಸಲಹೆಯಂತೆ ಧರ್ಮರಾಯನು ಅಧಿಕಾರ ಹಂಚಿಕೆ ಮಾಡಿದ್ದರಿಂದ ಅಸಮಾಧಾನಗೊಂಡ ಭೀಮ ಮತ್ತು ಅರ್ಜುನರು ರಾಜ್ಯದ ಭಾಗಕ್ಕಾಗಿ ಹಠ ಹಿಡಿಯುತ್ತಾರೆ. ಇದನ್ನು ಅರ್ಥಮಾಡಿಕೊಂಡ ಕೃಷ್ಣ, ಗಾರುಡಿಯಾಗಿ ಇಬ್ಬರಿಗೂ ತಮ್ಮ ತಪ್ಪನ್ನು ಅರ್ಥಮಾಡಿಸುವ ಕಥಾಹಂದರದ ಮೂಲಕ 'ಸಮರಸವೇ ಜೀವನ' ಎಂಬ ಅಂಶವನ್ನು ಮನ ಮುಟ್ಟುವಂತೆ ತಿಳಿಸಲಾಯಿತು. ಸಂಭಾಷಣೆಗೆ ಅನುಗುಣವಾದ ಅಭಿನಯ, ಹಾಸ್ಯ ಹೊನಲು ಹರಿಸಿದ ಪುಟಾಣಿಗಳು, ನೆರೆದಿದ್ದವರ ಮನಗೆದ್ದರು.



'ಫಾದರ್'ಗೆ ಶುಭ ಕೋರಿದ ಶಿವಣ್ಣ ದಂಪತಿ



ಆರ್.ಸಿ.ಸ್ಟುಡಿಯೋಸ್ ನಿರ್ಮಾಣದ 'ಫಾದರ್' ಚಿತ್ರಕ್ಕೆ ಶ್ರೀ ಬಂಡೆ ಮಾಂಕಾಳಮ್ಮನ ಸನ್ನಿಧಿಯಲ್ಲಿ ಅಧಿಕೃತ ಚಾಲನೆ ದೊರೆತಿದೆ, ಶಿವರಾಜ್‌ಕುಮಾರ್ ದಂಪತಿ, ಮಾಜಿ ಸಚಿವ ಹೆಚ್.ಎಂ.ರೇವಣ್ಣ, ಶಾಸಕ ಪ್ರದೀಪ್ ಈಶ್ವರ್, ಚೇತನ್‌ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಚಿತ್ರಕ್ಕೆ ಶುಭ ಕೋರಿದರು, 5 ಭಾಷೆಗಳಲ್ಲಿ, ನೂರಾರು ಕೋಟಿ ಬಜೆಟ್‌ನಲ್ಲಿ ತಯಾರಾಗುತ್ತಿರುವ ಈ ಪ್ಯಾನ್ ಇಂಡಿಯಾ ಚಿತ್ರಕ್ಕೆ ರಾಜಮೋಹನ್ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳುತ್ತಿದ್ದಾರೆ. ಹನುಮಾನ್ ಖ್ಯಾತಿಯ ಗೌರಹರಿ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಡಾರ್ಲಿಂಗ್ ಕೃಷ್ಣ, ಅಮೃತಾ ಅಯ್ಯಂಗಾರ್ ಹಾಗೂ ಪ್ರಕಾಶ್ ರೈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ನಿರ್ಮಾಪಕ ಆರ್.ಚಂದ್ರು ಮಾತನಾಡಿ, ನಮ್ಮ ಬ್ಯಾನರನ್ನು ಸಿಎಂ.ಸಿದ್ದರಾಮಯ್ಯ ಲಾಂಚ್ ಮಾಡಿದ್ದರು. ಈಗ ಮೊದಲ ಚಿತ್ರಕ್ಕೆ ಶಿವಣ್ಣ ಬಂದು ವಿಶ್ ಮಾಡಿದ್ದಾರೆ. ಚಿತ್ರಕ್ಕೆ ಬೆಂಗಳೂರು, ಗೋಕರ್ಣ ಅಲ್ಲದೆ ಕಾಶಿ, ವಾರಣಾಸಿಯಲ್ಲಿ ಚಿತ್ರೀಕರಿಸುವ ಯೋಜನೆಯಿದೆ. ಬೈರಾಗಿಯಲ್ಲಿ ಅಸೋಸಿಯೇಟ್ ಆಗಿದ್ದ ರಾಜಮೋಹನ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಇವರು ಹೇಳಿದ ಕಥೆ ಕೇಳಿದಾಗ ನನಗರಿವಿಲ್ಲದಂತೆ ಕಣ್ಣೀರು ಬಂತು. ಅಷ್ಟು ಚೆನ್ನಾಗಿ ಕಥೆ ಮಾಡಿಕೊಂಡಿದ್ದಾರೆ. ಮಂಜು ಮಾಂಡವ್ಯ ಹಾಗೂ ನಾವೆಲ್ಲ ಸೇರಿ ಸ್ಕ್ರಿಪ್ಟ್ ರೆಡಿ ಮಾಡಿದ್ದೇವೆ. ಎಲ್ಲರೂ ಟೀಮ್‌ಥರ ಐದು ಸಿನಿಮಾಗಳನ್ನು ಮಾಡುತ್ತಿದ್ದೇವೆ, ಈಗಾಗಲೇ ಎಲ್ಲಾ ಕಥೆಗಳನ್ನು ಲಾಕ್ ಮಾಡಿದ್ದೇವೆ. ಪ್ರದೀಪ್ ಈಶ್ವರ್ ಹಿಂದೆ ಕಬ್ಜ ಚಿತ್ರಕ್ಕೆ ಡೈಲಾಗ್ ಬರೆದಿದ್ದರು, ಒಬ್ಬ ಸ್ನೇಹಿತನಾಗಿ ನನಗೆ ಶಕ್ತಿ ತುಂಬುತ್ತಿದ್ದಾರೆ ಎಂದು ಹೇಳಿದರು.

ಸಂಗೀತ ನಿರ್ದೇಶಕ ಗೌರಹರಿ ಮಾತನಾಡುತ್ತ, ಚಂದ್ರು ಅವರ ಸಿನಿಮಾಗಳಲ್ಲಿ ಎಮೋಷನ್ ತುಂಬಾ ಚನ್ನಾಗಿ ಕ್ಯಾರಿ ಆಗುತ್ತದೆ. ಈ ಚಿತ್ರದಲ್ಲೂ ಸಹ ಸಾಕಷ್ಟು ಎಮೋಷನ್ಸ್ ಇದೆ. ಈ ಹಿಂದೆ ನಾನು ಚಾರ್‌ಮಿನಾರ್ ಚಿತ್ರದಲ್ಲಿ ಚಂದ್ರು ಜೊತೆ ಕೆಲಸ ಮಾಡಿದ್ದೆ. ಇದು ಎರಡನೇ ಚಿತ್ರ ಎಂದು ಹೇಳಿದರು. ನಟ ಶಿವರಾಜ್ ಕುಮಾರ್ ಮಾತನಾಡಿ, ಚಂದ್ರು ಏನೇ ಮಾಡಿದರೂ ಸ್ಟೈಲಿಶ್ ಆಗೇ ಮಾಡ್ತಾರೆ. ಚಂದ್ರುಗೂ ತಂದೆ ಎಂಬ ಪದಕ್ಕೂ ಒಳ್ಳೇ ಸಂಬಂಧವಿದೆ. ತಮ್ಮ ಪ್ರತಿ ಚಿತ್ರದಲ್ಲೂ ತಂದೆಯ ಬಗ್ಗೆ ಹೇಳುತ್ತಾರೆ. ಅದನ್ನು ಮೈಲಾರಿ ಚಿತ್ರದಲ್ಲೇ ನೋಡಿದೆ. ಅವರ ಚಿತ್ರಗಳಲ್ಲಿ ಫ್ಯಾಮಿಲಿ ಫೀಲ್ ತುಂಬಾ ಚನ್ನಾಗಿರುತ್ತದೆ ಎಂದು ಹೇಳಿದರು.

ಸೋಷಿಯಲ್ ಮೀಡಿಯಾ ಆಟದ ಸಾಮಾನಾಗಿದೆ. ನಮ್ಮ ಕಾಲವೇ ಚೆನ್ನಾಗಿತ್ತು. ಆಗ ಇಂಟರ್‌ನೆಟ್, ಸೋಷಿಯಲ್ ಮೀಡಿಯಾ ಅಂತ ಯಾವುದೂ ಇರಲಿಲ್ಲ, ನಿಜಕ್ಕೂ ನಾವೆಲ್ಲ ಪುಣ್ಯ ಮಾಡಿದ್ದೆವು. ಈಗ ಯಾವುದೋ ಒಂದಕ್ಕೆ ಮತ್ತಿನ್ಯಾವುದನ್ನೋ ಲಿಂಕ್ ಮಾಡಿ ಹಾಕುತ್ತಾರೆ. ಫೇಮಸ್ ಆಗೋದಕ್ಕೆ ಸುಮ್ಮನೆ ಸೀನ್ ಕ್ರಿಯೇಟ್ ಮಾಡೋದನ್ನು ಬಿಟ್ಟು ಒಳ್ಳೆಯದಕ್ಕೆ ಸೋಷಿಯಲ್ ಮೀಡಿಯಾ ಬಳಸಿಕೊಳ್ಳಬೇಕು ಎಂದು ಶಿವರಾಜಕುಮಾರ್ ಬೇಸರ ವ್ಯಕ್ತಪಡಿಸಿದರು.

ತಮಟೆ ಹಿಡಿದ ರೀಷ್ಮಾ ನಾಣಯ್ಯ

ಕೊಡಗಿನ ಬೆಡಗಿ ರೀಷ್ಮಾ ನಾಣಯ್ಯ ಅವರು ಇದೇ ಮೊದಲ ಬಾರಿಗೆ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ಆ ಚಿತ್ರ ಯಾವುದು ಗೊತ್ತೇ? ಜೋಗಿ ಪ್ರೇಮ್ ನಿರ್ದೇಶನದ ಕೆಡಿ. ಧ್ರುವ ಸರ್ಜಾ ಈ ಚಿತ್ರದ ನಾಯಕ. ರೀಷ್ಮಾ ನಾಣಯ್ಯ ಈ ಚಿತ್ರದಲ್ಲಿ ಮಚ್ ಲಕ್ಷ್ಮಿಯ ಪಾತ್ರದಲ್ಲಿ ಮಿಂಚಿದ್ದಾರೆ. ರೀಷ್ಮಾ ನಾಣಯ್ಯ ಅವರ ಹುಟ್ಟುಹಬ್ಬದ ಪ್ರಯುಕ್ತ ಕೆಡಿ ಚಿತ್ರತಂಡ ಆಕೆಯ ವಿಶೇಷ ಪೋಸ್ಟರ್‌ನ್ನು ಬಿಡುಗಡೆ ಮಾಡುವ ಮೂಲಕ ರೀಷ್ಮಾ ನಾಣಯ್ಯ ಫ್ಯಾನ್ಸ್‌ಗೆ ಸರ್‌ಪ್ರೈಸ್ ನೀಡಿದೆ. ಕೈಯಲ್ಲಿ ತಮಟೆ ಹಿಡಿದು, ಪಕ್ಕಾ ಲೋಕಲ್ ಹಳ್ಳಿ ಹುಡುಗಿಯ ಗೆಟಪ್‌ನಲ್ಲಿ ಕಾಣಿಸಿಕೊಂಡಿರುವ ರೀಷ್ಮಾ ನಾಣಯ್ಯ ಅವರ ಪೋಸ್ಟರ್‌ಅನ್ನು ಚಿತ್ರತಂಡ ರಿವೀಲ್ ಮಾಡುವ ಮೂಲಕ ಕೆಡಿ ಚಿತ್ರದಲ್ಲಿ ರೀಷ್ಮಾ ಅವರ ಮಚ್ ಲಕ್ಷ್ಮಿಯ ಪಾತ್ರದ ಲುಕ್‌ನ್ನು ಅಭಿಮಾನಿಗಳಿಗೆ ಪರಿಚಯಿಸಿದೆ.

ಉದ್ದನೆಯ ಜಡೆ, ಕೆಂಪು ಬಣ್ಣದ ಲಂಗ, ದಾವಣಿಯಲ್ಲಿ ಮಿಂಚುತ್ತಿರುವ ನಟಿ ರೀಷ್ಮಾ ನಾಣಯ್ಯ ಮುದ್ದು ಮುದ್ದಾಗಿ ಕಾಣಿಸಿಕೊಂಡಿದ್ದಾರೆ. ತಮಟೆ ಹಿಡಿದು ಅದನ್ನು ಹೊಡೆಯುತ್ತಿರುವ ಪೋಸ್‌ನಲ್ಲಿ ರಗಡ್ ಆಗಿಯೂ ಕಾಣಿಸಿಕೊಂಡಿದ್ದಾರೆ. ಇದೀಗ ರೀಷ್ಮಾ ನಾಣಯ್ಯ ಅವರ ಹಳ್ಳಿ ಹುಡುಗಿಯ ಅವತಾರ ಕನ್ನಡ ಸಿನಿ ಪ್ರೇಕ್ಷಕರ ಗಮನ ಸೆಳೆದಿದೆ.

ಕಾಂತಾರ ಚಾಪ್ಟರ್-1 ಕುಂದಾಪುರದಲ್ಲಿ ಬೃಹತ್ ಸೆಟ್




ಇಡೀ ದೇಶವೇ ಸ್ಯಾಂಡಲ್ವುಡ್‌ನತ್ತ ತಿರುಗಿ ನೋಡುವಂತೆ ಮಾಡಿದ ಕಾಂತಾರ ಚಿತ್ರವನ್ನು ಕೊಡುಗೆಯಾಗಿ ನೀಡಿದ ನಟ, ನಿರ್ದೇಶಕ ರಿಷಬ್ ಶೆಟ್ಟಿ ಅವರು ಈಗಾಗಲೇ ಕಾಂತಾರ ಅಧ್ಯಾಯ-1ಗೆ ಸ್ಕ್ರಿಪ್ಟ್‌ವರ್ಕ್ ಜೊತೆಗೆ ಮುಹೂರ್ತ ಮುಗಿಸಿ, ಕೆಲಸ ಶುರು ಮಾಡಿರುವುದು ಗೊತ್ತೇ ಇದೆ. ಈಗ ಕುಂದಾಪುರದಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನೊಳಗೊಂಡ ಬೃಹತ್ ಸೆಟ್ ನಿರ್ಮಾಣದ ಕೆಲಸ ನಡೆಯುತ್ತಿದೆ.

ಕಾಂತಾರ ಅಧ್ಯಾಯ-1ಕ್ಕೆ ಸದ್ಯದಲ್ಲೇ ಪೂರ್ಣ ಪ್ರಮಾಣದ ಚಿತ್ರೀಕರಣ ಆರಂಭವಾಗಲಿದ್ದು, ಮೊದಲ ಹಂತದಲ್ಲಿ 20 ದಿನಗಳ ಶೂಟಿಂಗ್ ನಡೆಯಲಿದೆ. ಸದ್ಯ ಚಿತ್ರತಂಡ ತಾತ್ಕಾಲಿಕವಾಗಿ ಕುಂದಾಪುರದಲ್ಲಿ ಬಿಡಾರ ಹೂಡಿದೆ. ಹೊರಾಂಗಣ ದೃಶ್ಯಗಳನ್ನು ಕಾಡಿನಲ್ಲಿ ಚಿತ್ರೀಕರಿಸಲಾಗುತ್ತಿದ್ದರೂ ಸಹ, ಕುಂದಾಪುರದ ಕರಾವಳಿಯ ಹಿನ್ನೆಲೆಯಲ್ಲಿ ಚಿತ್ರದ ಒಳಾಂಗಣ ದೃಶ್ಯಗಳನ್ನು ಚಿತ್ರೀಕರಿಸಲಾಗುತ್ತಿದೆ. ಸೂಪರ್‌ಹಿಟ್ ಕಾಂತಾರ ಚಿತ್ರದ ಮುಂದುವರಿದ ಭಾಗವಾಗಿ ಕಾಂತಾರ ಅಧ್ಯಾಯ-1 ನಿರ್ಮಾಣವಾಗುತ್ತಿದೆ. ಅತಿದೊಡ್ಡ ಬಜೆಟ್ ಹಾಗೂ ವಿಶೇಷ ತಂತ್ರಜ್ಞಾನದ ಹಿನ್ನೆಲೆಯಲ್ಲಿ ತಯಾರಾಗುತ್ತಿರುವ ಈ ಚಿತ್ರಕ್ಕೆ ಕುಂದಾಪುರದಲ್ಲಿ ಬೃಹತ್ ಪ್ರಮಾಣದ ಕಸ್ಟಮ್-ನಿರ್ಮಿತ ಸೆಟ್‌ಅನ್ನು ಹಾಕಲಾಗುತ್ತಿದೆ. ಇದು ರಾಮೋಜಿ ಫಿಲಂ ಸಿಟಿ ನಂತರದಲ್ಲಿ ಹಾಕಲಾಗಿರುವ ಅತಿದೊಡ್ಡ ಸೆಟ್‌ಗಳಲ್ಲಿ ಒಂದಾಗಿದೆ. ಈ 200X200 ಅಡಿ ವಿಸ್ತೀರ್ಣದ ಸೆಟ್ ಸಂಪೂರ್ಣ ಹವಾನಿಯಂತ್ರಣ ವ್ಯವಸ್ಥೆಯನ್ನು ಹೊಂದಿದ್ದು, ಅತ್ಯಾಧುನಿಕ ಡಬ್ಬಿಂಗ್ ಸ್ಟುಡಿಯೋ ಮತ್ತು ಎಡಿಟಿಂಗ್ ವ್ಯವಸ್ಥೆಯನ್ನು ಒಳಗೊಂಡು ನೂತನ ತಂತ್ರಜ್ಞಾನದಲ್ಲಿ ನಿರ್ಮಿತವಾಗಿದೆ. ಒಂದು ಚಲನಚಿತ್ರ ನಿರ್ಮಾಣಕ್ಕೆ ಬೇಕಾಗುವ ಎಲ್ಲವೂ ಈ ವ್ಯವಸ್ಥೆಯಲ್ಲಿ ಲಭ್ಯವಾಗಲಿದೆ. ಸುಮಾರು 600 ಜನ ಕಾರ್ಪೆಂಟರ್‌ಗಳು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಮುಂಬೈ, ಬೆಂಗಳೂರು ಮತ್ತು ಹೈದರಾಬಾದ್‌ನ ತಂತ್ರಜ್ಞರು ಕುಂದಾಪುರದಲ್ಲಿ ನೆಲೆಸಿದ್ದಾರೆ. ಇಲ್ಲಿ ಒಂದಷ್ಟು ಕಲಾವಿದರು ಕಲರಿ ಪಟ್ಟು ಮತ್ತು ಕುದುರೆ ಸವಾರಿಯ ತರಬೇತಿಯನ್ನು ಪಡೆಯುತ್ತಿದ್ದಾರೆ. ಈ ಸೆಟ್‌ನ್ನು ಶಾಶ್ವತವಾಗಿರುವಂತೆ ಭವಿಷ್ಯದ ಯೋಜನೆಗಳಿಗೆ ಬಳಸಿಕೊಳ್ಳಲು ಚಿತ್ರತಂಡ ಯೋಚಿಸುತ್ತಿದೆ. ಮುಂದಿನ ದಿನಗಳಲ್ಲಿ ಇತರ ಸಿನಿಮಾಗಳ ನಿರ್ಮಾಣಕ್ಕೆ ಬಾಡಿಗೆ ಆಧಾರದಲ್ಲಿ ಈ ಸೆಟ್ ಲಭ್ಯವಿರುತ್ತದೆ. ಇದೀಗ ಕರ್ನಾಟಕದ ಕರಾವಳಿ ಪ್ರದೇಶ ಸಿನಿಮಾ ನಿರ್ಮಾಪಕರ ಹಾಟ್‌ಸ್ಪಾಟ್ ಆಗಿ ಬದಲಾಗಿದೆ, ಅದರ ರಮಣೀಯ ಸೌಂದರ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಅನೇಕ ಚಲನಚಿತ್ರಗಳನ್ನು ಚಿತ್ರಿಸಲಾಗುತ್ತಿದೆ. ಇಲ್ಲಿನ ಮೂಲಸೌಕರ್ಯ ಮತ್ತು ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ನೀಡುವ ಮೂಲಕ ಅದರ ಬೆಳವಣಿಗೆಗೆ ಕೊಡುಗೆ ನೀಡುವ ಗುರಿಯನ್ನು ಹೊಂದಿದೆ.

ಕಾಂತಾರ ಅಧ್ಯಾಯ-1ಕ್ಕೆ ರಿಷಬ್‌ಶೆಟ್ಟಿ ಅವರೇ ಕಥೆ, ಚಿತ್ರಕಥೆ ರಚಿಸಿದ್ದಾರೆ, ಅನಿರುದ್ಧ್ ಮಹೇಶ್ ಮತ್ತು ಅನಿಲ್‌ಗುರು ಸ್ಕ್ರಿಪ್ಟ್‌ವರ್ಕ್‌ನಲ್ಲಿ ಜೊತೆಯಾಗಿದ್ದಾರೆ. ಈ ಚಿತ್ರಕ್ಕೂ ಸಹ ಅಜನೀಶ್ ಲೋಕನಾಥ್ ಅವರೇ ಸಂಗೀತ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದು, ಅರವಿಂದ್ ಕಶ್ಯಪ್ ಅವರು ಕ್ಯಾಮೆರಾ ವರ್ಕ್ ನಿಭಾಯಿಸುತ್ತಿದ್ದಾರೆ. ಮೂಲ ಚಿತ್ರದಲ್ಲಿದ್ದ ಬಹುತೇಕ ಕಲಾವಿದರುಗಳು ಮುಂದುವರಿದ ಭಾಗದಲ್ಲೂ ಸಹ ಇರಲಿದ್ದು, ಚಿತ್ರತಂಡ ಇನ್ನೂ ಪೂರ್ಣಪ್ರಮಾಣದ ಪಾತ್ರವರ್ಗವನ್ನು ಅಧಿಕೃತವಾಗಿ ಘೋಷಿಸಬೇಕಾಗಿದೆ.

ರಕ್ಷಿತ್ ಶೆಟ್ಟಿಯ 'ರಿಚರ್ಡ್ ಆಂಟನಿ' ಸದ್ಯದಲ್ಲೇ ಶುರು




777 ಚಾರ್ಲಿ, ಸಪ್ತ ಸಾಗರದಾಚೆಯೆಲ್ಲೋ ಖ್ಯಾತಿಯ ನಟ, ನಿರ್ಮಾಪಕ ರಕ್ಷಿತ್‌ಶೆಟ್ಟಿ ಅವರ ಮುಂದಿನ ಚಿತ್ರ ರಿಚರ್ಡ್ ಆಂಟನಿ, ರಕ್ಷಿತ್‌ಶೆಟ್ಟಿ ಅವರೇ ನಾಯಕನಾಗಿ ನಟಿಸುವ ಜೊತೆಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಸಹ ಮಾಡುತ್ತಿದ್ದಾರೆ. ಇನ್ನು ಚಿತ್ರದ ಶೂಟಿಂಗ್ ಯಾವಾಗ ಪ್ರಾರಂಭವಾಗಲಿದೆ ಎಂಬುದಕ್ಕೆ ಸ್ವತಃ ರಕ್ಷಿತ್‌ಶೆಟ್ಟಿ ಅವರೇ ಮಾಹಿತಿ ನೀಡಿದ್ದಾರೆ. ಸದ್ಯದಲ್ಲೇ ರಿಚರ್ಡ್ ಆಂಟನಿ ಚಿತ್ರದ ಚಿತ್ರೀಕರಣವನ್ನು ಶುರು ಮಾಡುತ್ತೇವೆ. ಈಗಾಗಲೇ ಚಿತ್ರದ ಸ್ಕ್ರಿಪ್ಟ್ ವರ್ಕ್ ಬಹುತೇಕ ಫೈನಲ್ ಆಗಿದೆ. ಇನ್ನೂ ಸ್ವಲ್ಪ ಕೆಲಸ ಬಾಕಿಯಿದೆ. ಅದನ್ನು ಸದ್ಯದಲ್ಲೇ ಮುಗಿಸುತ್ತೇವೆ. ಚಿತ್ರದ ಶೇ.60 ರಷ್ಟು ಭಾಗದ ಕಥೆ ಪಶ್ಚಿಮ ಕರಾವಳಿ ಭಾಗದಲ್ಲೇ ನಡೆಯುತ್ತದೆ. ನಾನು ಉಡುಪಿ ಅಂತಲೇ ಹೇಳುವುದಿಲ್ಲ. ಏಕೆಂದರೆ, 1960, 70, 80ರ ದಶಕದಲ್ಲಿ ನಡೆಯುವ ಕಥಾಹಂದರ ಈ ಚಿತ್ರದಲ್ಲಿದ್ದು, ಆ ದಶಕದಲ್ಲಿದ್ದ ಉಡುಪಿಯನ್ನು, ಆಗಿನ ಕಾಲಘಟ್ಟವನ್ನು ಇಲ್ಲಿ ಮರುಸೃಷ್ಟಿ ಮಾಡಬೇಕಿದೆ. ಅದು ಸಾಧ್ಯವಿಲ್ಲ. ಕಳೆದ ಬಾರಿ ನಾನು ಪೂರ್ತಿ ಉಡುಪಿಯನ್ನು ಸುತ್ತಾಡಿದೆ. ದಶಕಗಳ ಹಿಂದಿನ ಲೊಕೇಶನ್ ಸಿಗುವುದು ಸುಲಭವಲ್ಲ

10 ವರ್ಷಗಳ ಹಿಂದೆ ಉಳಿದವರು ಕಂಡಂತೆ ಚಿತ್ರದ ಚಿತ್ರೀಕರಣ ಮಾಡುವಾಗ ನಮಗೆ ಯಾವ ಲೊಕೇಶನ್ ಸಿಕ್ಕಿತ್ತೋ, ಅದು ಈಗ ಸಿಗುವುದಿಲ್ಲ. ಹಿಂದಿನ ಲೊಕೇಶನ್ ಸಿಗುವುದು ಅಷ್ಟು ಸುಲಭವಲ್ಲ. ಇನ್ನಷ್ಟು ಇಂಟೀರಿಯರ್ ಹೋಗಬೇಕು. ಕೆಲವು ಲೊಕೇಶನ್‌ಗಳಿಗೆ ನಾವು ಕೇರಳಕ್ಕೆ ಹೋಗಬೇಕಾಗಬಹುದು. ಕೆಲವು ಲೊಕೇಶನ್‌ಗಳಿಗೆ ಗೋಕರ್ಣಕ್ಕೂ ಹೋಗಬೇಕಾಗಬಹುದು ಎಂದು ಅವರು ಮಾಹಿತಿ ನೀಡಿದ್ದಾರೆ.

ಈ ಚಿತ್ರವನ್ನು ಅದ್ದೂರಿಯಾಗಿ ತಯಾರಿಸುವುದಕ್ಕಾಗಿ ಸರ್ವ ರೀತಿಯಲ್ಲೂ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಹಲವು ತಿಂಗಳ ಹಿಂದೆಯೇ ಈ ಚಿತ್ರವನ್ನು ಹೊಂಬಾಳೆ ಫಿಲಂಸ್ ನಿರ್ಮಿಸುವುದಾಗಿ ಘೋಷಣೆ ಮಾಡಿತ್ತು. ರಕ್ಷಿತ್ ಶೆಟ್ಟಿ ಅವರು ನಟನೆಯಲ್ಲಿ ಬ್ಯುಸಿಯಾಗಿದ್ದರಿಂದ ಮುಹೂರ್ತ ನಡೆಸುವುದು ತಡವಾಗಿತ್ತು. ಸಪ್ತ ಸಾಗರದಾಚೆ ಎಲ್ಲೋ ಚಿತ್ರದ ಶೂಟಿಂಗ್ ಮತ್ತು ಬಿಡುಗಡೆಯ ನಂತರ ರಕ್ಷಿತ್ ಶೆಟ್ಟಿ ಅವರು ಸಂಪೂರ್ಣವಾಗಿ ರಿಚರ್ಡ್ ಆಂಟನಿ ಚಿತ್ರದ ಸ್ಕ್ರಿಪ್ಟ್ ವರ್ಕ್‌ನಲ್ಲಿ ತೊಡಗಿಕೊಂಡಿದ್ದರು. ಈಗ ಚಿತ್ರದ ಸ್ಕ್ರಿಪ್ಟ್ ಕೆಲಸವೂ ಕೂಡ ಬಹುತೇಕ ಮುಗಿದಿದ್ದು ಶೂಟಿಂಗ್ ಪ್ರಾರಂಭಿಸುವುದಷ್ಟೇ ಬಾಕಿಯಿದೆ.


ರಿಲಯನ್ಸ್ ತೆಕ್ಕೆಗೆ ಕ್ರೇಜಿಸ್ಟಾರ್ ಅಭಿನಯದ 'ದ ಜಡ್ಜ್‌ಮೆಂಟ್'



ಬಹಳ ದಿನಗಳ ನಂತರ ಕ್ರೇಜಿಸ್ಟಾರ್ ರವಿಚಂದ್ರನ್ ಲಾಯರ್ ಆಗಿ ಕೋಟ್ ಹಾಕಿ ವಾದ ಮಾಡಿರುವ 'ದ ಜಡ್ಜ್‌ಮೆಂಟ್' ಚಿತ್ರ ಬಿಡುಗಡೆಯ ಹಂತದಲ್ಲಿದೆ. ಈ ಚಿತ್ರದ ವಿತರಣೆಯ ಹಕ್ಕನ್ನು ದೇಶದ ಹೆಸರಾಂತ ರಿಲಯನ್ಸ್ ಎಂಟರ್‌ಟೈನ್ಮೆಂಟ್ ಸಂಸ್ಥೆ ಪಡೆದುಕೊಂಡಿದೆ. ಈಗಾಗಲೇ ಈ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು ಸಿನಿರಸಿಕರಲ್ಲಿ ದೊಡ್ಡ ಮಟ್ಟದ ಕುತೂಹಲ ಹುಟ್ಟುಹಾಕಿದೆ.

ಇತ್ತೀಚೆಗೆ ಡಾ||ರಾಜಕುಮಾರ್ ಅವರ ಹುಟ್ಟುಹಬ್ಬದಂದೇ ನಮ್ಮ ಚಿತ್ರದ ಚಿತ್ರೀಕರಣ ಮುಕ್ತಾಯ ಮಾಡಿ ಕುಂಬಳಕಾಯಿ ಒಡೆಯಲಾಯಿತು. ಚಿತ್ರದ ಮೇಕಿಂಗ್, ಟೀಸರ್‌ಗೆ ಎಲ್ಲ ಕಡೆಯಿಂದ ಪ್ರಶಂಸೆಯ ಮಾತುಗಳು ಕೇಳಿಬರುತ್ತಿದೆ. ಮತ್ತೊಂದು ಖುಷಿಯ ವಿಚಾರವೆಂದರೆ ಚಿತ್ರದ ವಿತರಣೆಯ ಹಕ್ಕನ್ನು ಪ್ರತಿಷ್ಠಿತ ರಿಲಯನ್ಸ್ ಎಂಟರ್‌ಟೈನ್ಮೆಂಟ್ ಸಂಸ್ಥೆ ಪಡೆದುಕೊಂಡಿದೆ. ಬಾಲಿವುಡ್‌ನಲ್ಲಿ ಹಲವಾರು ಸ್ಟಾರ್ಸ್ ಚಿತ್ರಗಳನ್ನು ರಿಲೀಸ್ ಮಾಡಿದ ಕೀರ್ತಿ ಈ ಸಂಸ್ಥೆಗಿದೆ. ಈ ಸಂಸ್ಥೆಯ ಮೂಲಕ ನಮ್ಮ ಚಿತ್ರ ದೇಶಾದ್ಯಂತ ಬಿಡುಗಡೆಯಾಗಲಿದೆ. ಈ ಚಿತ್ರದ ವಿತರಣೆ ಅಷ್ಟೇ ಅಲ್ಲದೆ, ಮುಂದೆ ನಮ್ಮ ಸಂಸ್ಥೆಯಿಂದ ನಿರ್ಮಾಣವಾಗುವ ಚಿತ್ರಗಳಲ್ಲೂ ಸಹ ಜೊತೆಯಾಗುವುದಾಗಿ ರಿಲಯನ್ಸ್ ಎಂಟರ್‌ಟೈನ್ಮೆಂಟ್ ಘೋಷಿಸಿದೆ. ಈವರೆಗೂ ಸಾಕಷ್ಟು ಜನಪ್ರಿಯ ಚಿತ್ರಗಳನ್ನು ರಿಲಯನ್ಸ್ ಎಂಟರ್‌ಟೈನ್ಮೆಂಟ್ ವಿತರಣೆ ಮಾಡಿದ್ದು ಆ ಪೈಕಿ ಹತ್ತೊಂಬತ್ತು ಚಿತ್ರಗಳು ಆಸ್ಕರ್ ಪ್ರಶಸ್ತಿಗೆ ಆಯ್ಕೆಯಾಗಿವೆ. ಇಂತಹ ಸಂಸ್ಥೆ ನಮ್ಮ ಚಿತ್ರವನ್ನು ವಿತರಣೆ ಮಾಡುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕೋರ್ಟ್ ಡ್ರಾಮ ಹಾಗೂ ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ಸದ್ಯದಲ್ಲೇ ತೆರೆಗೆ ತರುವುದಾಗಿ ನಿರ್ಮಾಪಕ ಹಾಗೂ ನಿರ್ದೇಶಕರೂ ಆದ ಗುರುರಾಜ ಕುಲಕರ್ಣಿ (ನಾಡಗೌಡ) ಅವರು ತಿಳಿಸಿದ್ದಾರೆ. ಪಿ.ಕೆ.ಹೆಚ್.ದಾಸ್ ಅವರ ಛಾಯಾಗ್ರಹಣ, ಅನೂಪ್ ಸೀಳಿನ್ ಅವರ ಸಂಗೀತ ನಿರ್ದೇಶನ ಹಾಗೂ ಕೆಂಪರಾಜ್ ಅವರ ಸಂಕಲನ ಈ ಚಿತ್ರಕ್ಕಿದೆ. ಕ್ರೇಜಿಸ್ಟಾರ್ ವಿ.ರವಿಚಂದ್ರನ್, ದಿಗಂತ್ ಮಂಚಾಲೆ, ಧನ್ಯ ರಾಮಕುಮಾರ್, ಮೇಘನಾ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಸಿನಿಪದಬಂಧ-524



ಹೆಸರು ______________

ವಿಳಾಸ ______________

ದೂರವಾಣಿ ಸಂಖ್ಯೆ ______________



ವಿಜೇತರು: ರಾಮಕೃಷ್ಣ (ಶ್ರೇಯಸ್), ವಿದ್ಯಾರ್ಥಿನಿಲಯ, ಕೆಆರ್ ಮೊಹಲ್ಲಾ, ಮೈಸೂರು-4

ಎಡದಿಂದ ಬಲಕ್ಕೆ

1. ತ್ರೇತಾ ಯುಗದ ಸಹೋದರರಿಬ್ಬರಿಗೆ ರವಿ-ಶಂಕರ್ ನಿರ್ದೇಶಕರು 5
5. ಆರ್.ನಾಗೇಂದ್ರರಾಯರ ಕುಂಡಲಿ ಭವಿಷ್ಯ 5
6. ಮಾನವನಾಗಿ ಹುಟ್ಟಿದ ಮೇಲೆ ಹಾಡಿನೊಳಗೆ ನದಿಯೊಂದು ನುಸುಳಿದೆ 4
9. ಹುಣಸೂರು ಕೃಷ್ಣಮೂರ್ತಿಯ ಮಣಿ ಗೊಂಚಲು 5
11. ಗೆಲುವಿನಲ್ಲಿ ಯಾತ್ರಾ ಸ್ಥಳ ಕಂಡ ನಟ 5
13. ಜಾಣ ಉಪೇಂದ್ರ ಇಲ್ಲಿ ತಿರುಗಿದ್ದಾನೆ 4
16. ರಾಮನ ಸಹೋದರ ಗೆರೆ ಎಳೆದಿದ್ದಾನೆ 5
17. ಉಪೇಂದ್ರ ವಾಸ್ತವಕ್ಕೆ ಹತ್ತಿರ 5

ಮೇಲಿನಿಂದ ಕೆಳಕ್ಕೆ

1. ಅರಸನ ಕೋಟೆಯಲ್ಲಿನ ಗೌಪ್ಯತೆಗೆ ರಾಜ್-ಭಾರತಿ ಅಭಿನಯವಿದೆ 8
2. ಇವರಿಬ್ಬರು ಇಲ್ಲೇ ಎಡದಿಂದ ಬಲಕ್ಕೆ 1ರಲ್ಲಿರುವವನೊಬ್ಬನ ಪುತ್ರರು 4
3. ಡಾ. ರಾಜ್, ಮಾಧವಿ, ಗೀತಾ ಅಭಿನಯಕ್ಕೆ ಟಿ. ಎಸ್. ನಾಗಾಭರಣ ನಿರ್ದೇಶಕ 4
4. ಸಿಂಧೂರದಿಂದ ಇಟ್ಟ ಬೊಟ್ಟು 3
5. ಈ ಚಿತ್ರ ಎಚ್ಚರಿಸುತಿದೆ 3
7. ಉಡುಪಿ ಜಿಲ್ಲೆಯ ಹಿರಿಯ ಪೋಷಕ ನಟ 8
8. ರಾಮ್ ಕುಮಾರ್ ಗೆ ಆದ "ವ್ರಣ" 2
10. ದರ್ಶನ್ ಅಭಿನಯದ ಸಕ್ಕರೆಯ ನಾಡು 2
12. ಮದುವೆ, ವಿವಾಹಕ್ಕೆ ಹೀಗೊಂದು ಪದ 4
13. ಗುಲ್ಜಾರ್ ಖಾನ್ ನಡೆಸಿದ ಶೋಧನೆ 3
14. ಮಾತಾಡಕಿಲ್ವ.. ಎಂದೊಡನೆ ನೆನಪಾಗುವ ದರ್ಶನ್ ಚಿತ್ರ 4
15. ಆಂಗ್ಲ ಖಳನಾಯಕ 3



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 523ರ ಉತ್ತರ

ಅ	ಭಿ	ಸಾ	ರಿ	ಕಾ			ಶ		ಅ	
ತಿ		ಹು			ಸ	ಮ	ರ	ಸಿಂ	ಹ	
ರ		ಕಾ			ಲ		ವೇ		ಲ್ಯ	
ಥ		ರ	ಣ	ರಂ	ಗ		ಗ			ದೇ
ಮ								ಚಂ		ವ
ಹಾ	ಲು	ಸ	ಕ್ಕ	ರೆ		ಕ	ರ	ಡಿ	ಪು	ರ
ರ		ತ್ಯಂ								ಗೆ
ಥ			ಮ		ವಿ	ಷ್ಣು	ಸೇ	ನಾ		ದ್ದ
	ಕುಂ		ಹಾ		ಕ್ಷ			ಗಾ		ಮಾ
	ಬಾ	ಳಿ	ನ	ದಾ	ರಿ			ರ್ಜು		ನ
	ರ		ದಿ			ಮು	ದ್ದಿ	ನ	ಮಾ	ವ

ಮೈಸೂರು ಮಿತ್ರ

ಶ್ರೀನಿವಾಸ ಪ್ರಸಾದ್ ಬದುಕು, ಸಂದೇಶ ನಮ್ಮೆಲ್ಲರಿಗೂ ಪ್ರೇರಣೆ

ಶ್ರದ್ಧಾಂಜಲಿ ಸಭೆಯಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್

ನಂಜನಗೂಡು, ಮೇ 2– ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ರಾಜಕೀಯ ಬದುಕು ಮತ್ತು ಸಂದೇಶಗಳು ನಮ್ಮೆಲ್ಲರಿಗೂ ಪ್ರೇರಣೆಯಾಗಿದ್ದು, ಅವರ ತತ್ವಾದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳುವ ಮೂಲಕ ಅವರ ಆಶಯಗಳನ್ನು ಈಡೇರಿಸಬೇಕಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ಗುರುವಾರ ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಬಿಜೆಪಿ ನಗರ ಮತ್ತು ಗ್ರಾಮಾಂತರ ಮಂಡಲದಿಂದ ಆಯೋಜಿಸಿದ್ದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಚಾಮರಾಜನಗರವನ್ನು ಕರ್ಮಭೂಮಿಯನ್ನಾಗಿಸಿಕೊಂಡು 50 ವರ್ಷಗಳ ಕಾಲ ರಾಜಕೀಯ ಜೀವನ ನಡೆಸಿದ್ದ ವಿ.ಶ್ರೀನಿವಾಸ ಪ್ರಸಾದ್ ಅವರ ನಿಧನದ ಬಳಿಕ ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಸೇರಿದಂತೆ ಇತರೆ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಅಭಿಮಾನಿಗಳು ಅವರ ಅಂತಿಮ ದರ್ಶನ ಪಡೆದು ಪ್ರಸಾದ್ ಅವರ ಸಾಧನೆಗಳನ್ನು ಸ್ಮರಿಸಿದ್ದರು. ಇನ್ನು ರಾಜ್ಯ ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತ ವಿ.ಶ್ರೀನಿವಾಸ ಪ್ರಸಾದ್ ಅಂತ್ಯಸಂಸ್ಕಾರಕ್ಕೆ ಅಗತ್ಯ ಭದ್ರತೆ ನೀಡಿ ವ್ಯವಸ್ಥಿತವಾಗಿ ಅಂತಿಮ ವಿಧಿ ವಿಧಾನಗಳು ನಡೆಯಲು ಸಹಕಾರ ನೀಡಿದರು. ಅವರಿಗೆ ನಮ್ಮ ಕುಟುಂಬದ ಪರವಾಗಿ ಧನ್ಯವಾದ ತಿಳಿಸುತ್ತೇನೆ ಎಂದರು.

ಸಕ್ರಿಯ ರಾಜಕೀಯ ಜೀವನದಿಂದ ನಿವೃತ್ತರಾದ ಬಳಿಕ ಶ್ರೀನಿವಾಸ ಪ್ರಸಾದ್ ಅವರು ಸಂಸದರಾಗಿದ್ದ ಸಂದರ್ಭ 7 ಪ್ರಧಾನಮಂತ್ರಿಗಳ ಒಡನಾಟದ ಬಗ್ಗೆ ಪುಸ್ತಕ ಬರೆಯುವ ಹಂಬಲ ಹೊಂದಿದ್ದರು. ಆದರೆ ದುರದೃಷ್ಟವಶಾತ್ ಅದು ನೆರವೇರಲಿಲ್ಲ. ಇನ್ನು 2023ರ ವಿಧಾನಸಭಾ ಚುನಾವಣೆಯಲ್ಲಿ ನನಗೆ ಸೋಲುಂಟಾದಾಗ ತೀವ್ರ ನೊಂದಿದ್ದ ವಿ.ಶ್ರೀನಿವಾಸ ಪ್ರಸಾದ್ ಕೆಲ ದಿನಗಳ ಬಳಿಕ ನನಗೆ ಸಮಾಧಾನ ಹೇಳಿದ್ದಲ್ಲದೆ ಮುಂಬರುವ ದಿನಗಳಲ್ಲಿ ಖಂಡಿತಾ ಕ್ಷೇತ್ರದ ಜನರು ನಿನ್ನನ್ನು ಮತ್ತೊಮ್ಮೆ ಬೆಂಬಲಿಸಲಿದ್ದಾರೆ ಧೃತಿಗೆಡುವುದು ಬೇಡ ಎಂದು ಧೈರ್ಯ ತುಂಬಿದ್ದರು. ಅವರೊಂದಿಗಿನ ಸುದೀರ್ಘ ಒಡನಾಟ ಹಾಗೂ ಮಾರ್ಗದರ್ಶನದಿಂದಾಗಿ ಪಕ್ಷದ ಕಾರ್ಯಕರ್ತರು ಹಾಗೂ ಪ್ರಸಾದ್ ಅವರ ಬೆಂಬಲಿಗರನ್ನು ಒಟ್ಟಿಗೆ ಕರೆದೊಯ್ಯುವ ಸಾಮರ್ಥ್ಯ ಪಡೆದಿದ್ದೇನೆ ಎಂದರು.



ನಂಜನಗೂಡಿನಲ್ಲಿ ಬಿಜೆಪಿ ವತಿಯಿಂದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ ಮಾತನಾಡಿ, ನಮ್ಮನ್ನಗಲಿದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಪಕ್ಷಾತೀತವಾಗಿ ಜನಮನ್ನಣೆ ಪಡೆದಿದ್ದರು. ಅವರ ತತ್ವಾದರ್ಶಗಳನ್ನು ರೂಢಿಸಿಕೊಂಡು ಅವರ ಆಶಯದಂತೆ ರಾಜಕೀಯವಾಗಿ ಮುನ್ನಡೆಯಲು ಪ್ರಸಾದ್ ಅಳಿಯ ಮಾಜಿ ಶಾಸಕ ಬಿ.ಹರ್ಷವರ್ಧನ್ ಅವರಿಗೆ ಅಗತ್ಯ ಶಕ್ತಿಯನ್ನು ಕಾರ್ಯಕರ್ತರು ನೀಡಬೇಕಿದೆ ಎಂದು ಹೇಳಿದರು.

ಸಭೆಯಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು. ಸಭೆಯನ್ನುದ್ದೇಶಿಸಿ ಪ್ರಥಮ ದರ್ಜೆ ಗುತ್ತಿಗೆದಾರ ಯು.ಎನ್.ಪದ್ಮನಾಭ ರಾವ್, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಮಂಗಳಾ ಸೋಮಶೇಖರ್, ಎಸ್.ಎಂ.ಕೆಂಪಣ್ಣ, ಬಿಜೆಪಿ ರಾಜ್ಯ ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ, ಹೊರಳವಾಡಿ ಪಿ.ಮಹೇಶ್, ಬಾಲಚಂದ್ರು, ಖಾದಿ ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಹೆಮ್ಮರಗಾಲ ಸೋಮಣ್ಣ, ಬಿಜೆಪಿ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ ಮತ್ತಿತರರು ಮಾತನಾಡಿದರು.

ಸಭೆಯಲ್ಲಿ ತಾಪಂ ಮಾಜಿ ಸದಸ್ಯರಾದ ಬಿ.ಎಸ್.ರಾಮು, ಮಹದೇವನಾಯಕ, ಹೆಮ್ಮರಗಾಲ ಶಿವಣ್ಣ, ಸಿ.ಎಂ.ಮಹದೇವಯ್ಯ, ಕೊಂಗಳ್ಳಿ ಬಸವರಾಜು, ನಗರಸಭಾ ಸದಸ್ಯರಾದ ಹೆಚ್.ಎಸ್.ಮಹದೇವಸ್ವಾಮಿ, ಸಿದ್ದರಾಜು, ಮಹದೇವಪ್ರಸಾದ್, ವಿಜಯಲಕ್ಷ್ಮಿ ಕುಮಾರ್, ಮಹೇಶ್ ಅತ್ತಿಖಾನೆ, ಶ್ರೀನಿವಾಸರೆಡ್ಡಿ, ಮಧುರಾಜ್, ಮುರುಗೇಶ್, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಗೋವರ್ಧನ್ ಸೇರಿದಂತೆ ಹಲವರಿದ್ದರು.

> ಶ್ರೀನಿವಾಸ ಪ್ರಸಾದ್ ಅವರು ನೇರ, ನಿಷ್ಠೂರ, ಎದೆಗಾರಿಕೆಯುಳ್ಳ ಹಾಗೂ ಲೆಕ್ಕಾಚಾರದ ರಾಜಕಾರಣಿ. 2008ರ ಚುನಾವಣೆಯಲ್ಲಿ ಅವರ ವಿರುದ್ಧ 435 ಮತಗಳ ಅಂತರದಿಂದ ಸೋತಾಗ ನನ್ನನ್ನು ಕರೆಸಿ ನನ್ನ ವಿರುದ್ಧ ಸ್ಪರ್ಧಿಸಿ ಹತ್ತಿರದಿಂದ ಪರಾಭವಗೊಂಡಿದ್ದೀಯಾ ಎಂದು ಸಂತೋಷಪಟ್ಟು ನಿನಗೆ ಉತ್ತಮ ಭವಿಷ್ಯವಿದೆ ಎಂದು ಹರಸಿದ್ದರು. ಅವರಲ್ಲಿ ದ್ವೇಷ, ಅಸೂಯೆ ಇರಲಿಲ್ಲ. ಅವರ ಹೆಸರು ಅಜರಾಮರವಾಗಲು ನಂಜನಗೂಡಿನಲ್ಲಿ ನಿರ್ಮಾಣವಾಗಿರುವ ರೈಲ್ವೆ ಮೇಲ್ಸೇತುವೆಗೆ ಅವರ ಹೆಸರನ್ನು ನಾಮಕರಣ ಮಾಡಬೇಕು.
>
> – ಎಸ್.ಮಹದೇವಯ್ಯ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಂಗರೂ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಊಡೂ ಈಸ್ ಬ್ಯಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ (ಕ)	4 ಪ್ರದರ್ಶನಗಳು
ಸಂಗಂ	
ಉಸಿರೇ ಉಸಿರೇ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಿಲ್ಲ (ತ)	4 ಪ್ರದರ್ಶನಗಳು
ಪ್ರಭಾ	
ಮಾರಣಾಯುದ್ಧಂ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.40ಕ್ಕೆ, ಗಿಲ್ಲಿ (ತ): ಸಂ.4ಕ್ಕೆ, ದಿ ಫಾಲ್ ಗಾಯ್ (ಇಂ): ರಾ.7.10ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಅಂಜಾಮ್ ಪೇದಂ (ಮ): ಬೆ.11ಕ್ಕೆ, O2 (ಕ): ಮ.1.45ಕ್ಕೆ, ಉಸಿರೇ ಉಸಿರೇ (ಕ): ಸಂ.4.05ಕ್ಕೆ, ಆವೇಶಂ (ಮ): ರಾ.7.05ಕ್ಕೆ, ನಡಿಕರ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂಗರೂ (ಕ): ಬೆ.11ಕ್ಕೆ, ಬಿಲ್ಲಾ (ತ): ಮ.1.35ಕ್ಕೆ, ಅರಮನೈ 4 (ತ): ಸಂ.4.20ಕ್ಕೆ, ರಾ.10.05ಕ್ಕೆ, ಪ್ರಸನ್ನವದನಂ (ತೆ): ರಾ.7.15ಕ್ಕೆ.
ಸ್ಕ್ರೀನ್ 4	ದಿ ಫಾಲ್ ಗಾಯ್ (ಇಂ): ಬೆ.11.10ಕ್ಕೆ, ಸಂ.4.35ಕ್ಕೆ, ಸಬರಿ (ತೆ): ಮ.1.50ಕ್ಕೆ, ಮಲಯಾಳಿ ಫ್ರಂ ಇಂಡಿಯಾ (ಮ): ರಾ.7.10ಕ್ಕೆ, ಆ ಒಕ್ಕಟಿ ಅಡಕ್ಕು (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೂರಗಲ್ಲು ಗ್ರಾಮದಲ್ಲಿ ಶಿವಕುಮಾರಶ್ರೀಗಳ ಸ್ಮರಣೆ



ಶ್ರೀ ಶಿವಕುಮಾರಸ್ವಾಮೀಜಿ ಮಾಸಿಕ ಸ್ಮರಣೆ ಕಾರ್ಯಕ್ರಮ ನಡೆಯಿತು.

ಬೆಟ್ಟದಪುರ, ಮೇ 2– ಇಲ್ಲಿಗೆ ಸಮೀಪದ ಕೂರಗಲ್ಲು ಗ್ರಾಮದಲ್ಲಿ ತುಮಕೂರಿನ ಸಿದ್ಧಗಂಗಾ ಮಠದ ಶ್ರೀಶಿವಕುಮಾರಸ್ವಾಮೀಜಿ ಅವರ ಮಾಸಿಕ ಸ್ಮರಣೆ ಕಾರ್ಯಕ್ರಮ ನಡೆಯಿತು.

ತಾಲೂಕು ಶಿವಕುಮಾರಸ್ವಾಮೀಜಿ ಸಂಘದ ಅಧ್ಯಕ್ಷ ಕೂರಗಲ್ಲು ಶಿವಕುಮಾರಸ್ವಾಮಿ ಮಾತನಾಡಿ, ಮುಂದಿನ ದಿನಗಳಲ್ಲಿ ತಾಲೂಕಿನ ಪ್ರತಿ ಗ್ರಾಮದಲ್ಲೂ ಶಿವಕುಮಾರಸ್ವಾಮಿಗಳ ಸಂಘ ಸ್ಥಾಪಿಸಿ, ಅವರ ಹಾಕಿಕೊಟ್ಟ ದಾರಿಯಲ್ಲಿ ಹಾಗೂ ತೋರಿದ ಮಾರ್ಗದರ್ಶನದಲ್ಲಿ ಪ್ರತಿ ತಿಂಗಳ ಒಂದನೇ ತಾರೀಕು ಸಮಾಜಮುಖಿ ಕೆಲಸ ಮಾಡಿದ ಗಣ್ಯರನ್ನು ಸನ್ಮಾನಿಸಲಾಗುವುದು ಎಂದರು.

ಇದೇ ವೇಳೆ ಗ್ರಾಮದ ಚಂದ್ರವರ ಮನೆಯಲ್ಲಿ ಅನ್ನದಾನ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮುಖಂಡರಾದ ಶಿವಶಂಕರ್, ಮಹೇಶ್, ಶಾಂತಕುಮಾರ್, ಪರಮೇಶ್, ಶಂಕರ್, ಮಂಜುನಾಥ್, ತೋಟಪಶೆಟ್ಟಿ, ಹರೀಶ್, ಗಣೇಶ, ಗಿರೀಶ್ ಸೇರಿದಂತೆ ಇತರರಿದ್ದರು.

ಶ್ರೀಬಣ್ಣಾರಿ ಮಾರಿಯಮ್ಮ ದೇವಸ್ಥಾನದ 79ನೇ ವಾರ್ಷಿಕೋತ್ಸವ

ಸಾಮೂಹಿಕ ಬಾಯಿ ಬೀಗ ಕಾರ್ಯಕ್ರಮ

ತಿ.ನರಸೀಪುರ, ಮೇ 2– ಪಟ್ಟಣದ ಕೊಳ್ಳೇಗಾಲ–ಚಾಮರಾಜನಗರ ರಸ್ತೆಯಲ್ಲಿರುವ ಶ್ರೀಬಣ್ಣಾರಿ ಮಾರಿಯಮ್ಮ ದೇವಸ್ಥಾನದ 79ನೇ ವಾರ್ಷಿಕೋತ್ಸವದ ಅಂಗವಾಗಿ ಪಟ್ಟಣದಲ್ಲಿ ನಡೆದ ಸಾಮೂಹಿಕ ಬಾಯಿ ಬೀಗ ಕಾರ್ಯಕ್ರಮ ಎಲ್ಲರ ಗಮನ ಸೆಳೆಯುವ ಜೊತೆಗೆ ನೋಡುಗರ ಮೈ ನವಿರೇಳುವಂತೆ ಮಾಡಿತು.

ಬೆಳಗ್ಗೆ 6 ಗಂಟೆಯಿಂದಲೇ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗದ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದ ಭಕ್ತರು ಸರತಿ ಸಾಲಿನಲ್ಲಿ ನಿಂತು ಬಾಯಿ ಬೀಗ ಹಾಕಿಸಿಕೊಂಡರು. ಸುಮಾರು 3 ಅಡಿಯಿಂದ 10 ಅಡಿ ಉದ್ದದ ಕಬ್ಬಿಣದ ಸರಳುಗಳಿಂದ ತಯಾರಿಸಲಾದ ತ್ರಿಶೂಲಾಕಾರಾದ ಬಾಯಿ ಬೀಗವನ್ನು ಭಕ್ತರಿಗೆ ಹಾಕಲಾಯಿತು. ಬಾಯಿಬೀಗ ಹಾಕಿಸಿಕೊಂಡ ಭಕ್ತರ ಮೆರವಣಿಗೆ ಪಟ್ಟಣದ ವಿವಿಧ ಬೀದಿಗಳಲ್ಲಿ ಸಂಚರಿಸಿ ಬಣ್ಣಾರಿ ಮಾರಿಯಮ್ಮನವರ ದೇವಸ್ಥಾನ ತಲುಪಿತು.



ತಿ.ನರಸೀಪುರದಲ್ಲಿ ನಡೆದ ಬಾಯಿ ಬೀಗ ಕಾರ್ಯಕ್ರಮದ ದೃಶ್ಯ

ಹರಕೆಹೊತ್ತ ಭಕ್ತರಿಗೆ ತಮಿಳುನಾಡಿನ ಯುವರಾಜ್, ಬಣ್ಣಾರಿ ಮಾರಿಯಮ್ಮ ದೇವಸ್ಥಾನ ಟ್ರಸ್ಟ್ ಸದಸ್ಯರು ಬಾಯಿ ಬೀಗ ಹಾಕುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ವಿಶೇಷವಾಗಿತ್ತು. ಈ ವೇಳೆ ತ್ರಿಶೂಲಾಕಾರದ ಸರಳನ್ನು ಭಕ್ತರ ಒಂದು ಕೆನ್ನೆಗೆ ಚುಚ್ಚಿ ಮತ್ತೊಂದು ಕೆನ್ನೆಯಿಂದ ಹೊರಕ್ಕೆ ತೆಗೆಯುತ್ತಿದ್ದರೆ ಒಂದೇ ಒಂದು ತೊಟ್ಟು ರಕ್ತ ಸಹ ಹೊರಗೆ ಬಾರದಿರುವುದು ಅಚ್ಚರಿ ಮೂಡಿಸಿತು. ಈ ವೇಳೆ ಬಣ್ಣಾರಿ ಮಾರಿಯಮ್ಮ ಟ್ರಸ್ಟ್ ಅಧ್ಯಕ್ಷ ಮಂಜುನಾಥ್, ಸದಸ್ಯ ವಾಸುದೇವ್, ಸುರೇಶ್, ಮಹೇಶ್, ಮೋಹನ್, ರಾಜಶೇಖರ್, ರಾಜ, ಬಾಬು, ಶೇಖರ್ ಮತ್ತಿತರರಿದ್ದರು.

ಅಪರಿಚಿತ ವ್ಯಕ್ತಿ ಶವ ಪತ್ತೆ

ತಿ.ನರಸೀಪುರ, ಮೇ 2– ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ರೇಷ್ಮೆ ಕಚೇರಿ ಬಳಿ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿದೆ. ಸುಮಾರು 35 ವರ್ಷ ವಯಸ್ಸಿನ ಅಪರಿಚಿತ ಪುರುಷನ ಶವದ ಬಲಗೈ ಮೇಲೆ ದೇವಿ ಎಂಬ ಹೆಸರು ಹಾಗೂ ಲವ್ ಸಿಂಬಲ್ ಹಚ್ಚೆ ಇದ್ದು, ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆ ಶವಾಗಾರಕ್ಕೆ ರವಾನಿಸಲಾಗಿದೆ. ಈತನ ವಾರಸುದಾರರಿದ್ದಲ್ಲಿ ತಿ.ನರಸೀಪುರ ಪೊಲೀಸ್ ಠಾಣೆ ದೂ:08227–261227 ಸಂಪರ್ಕಿಸುವಂತೆ ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ತಿಳಿಸಿದ್ದಾರೆ.

ತಿ.ನರಸೀಪುರದಲ್ಲಿ ನಡೆದ ಮಹಿಳೆಯರ ಕಬಿನಿ ವಲಯ ಮಟ್ಟದ ಕ್ರೀಡಾಕೂಟ

ಕೋಟೆ ಆದಿಚುಂಚನಗಿರಿ ಪಿಯು ಕಾಲೇಜು ಪ್ರಥಮ



ಹೆಚ್.ಡಿ.ಕೋಟೆ, ಮೇ 2– ಇತ್ತೀಚೆಗೆ ತಿ.ನರಸೀಪುರದಲ್ಲಿ ನಡೆದ ಮಹಿಳೆಯರ ಕಬಿನಿ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಕಬಡ್ಡಿ ಹಾಗೂ ವಾಲಿಬಾಲ್‌ನಲ್ಲಿ ಪ್ರಥಮ ಹಾಗೂ ಥ್ರೋಬಾಲ್ ಹಾಗೂ ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ ಪಡೆದು ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಬಿ.ಕಲ್ಲೇಶ್‌ಗೌಡ ತಿಳಿಸಿದ್ದಾರೆ.

ಇನ್ನು ಪುರುಷರ ಕಬಿನಿ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಕಬಡ್ಡಿಯಲ್ಲಿ ಪ್ರಥಮ, ಖೋಖೋ ಪಂದ್ಯಾವಳಿಯಲ್ಲಿ ದ್ವಿತೀಯ, ಷಟಲ್ ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ ಸ್ಥಾನ ಪಡೆದು ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜುಗಳ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ ಎಂದರು.

ವಿದ್ಯಾರ್ಥಿಗಳ ಸಾಧನೆಗೆ ಮೈಸೂರು ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ, ಆಡಳಿತಾಧಿಕಾರಿ ಪ್ರೊ.ಕೆ.ಪಿ.ಬಸವೇಗೌಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ವೇಳೆ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಕ್ರೀಡಾ ಕಾರ್ಯದರ್ಶಿಯಾದ ಬಿ.ಸಿ.ಮಹೇಂದ್ರ, ಪ್ರಥಮ ದರ್ಜೆ ಸಹಾಯಕ ಬಿ.ಎಸ್. ರಾಜೇಶ್, ಎನ್‌ಎಸ್‌ಎಸ್ ಅಧಿಕಾರಿ ಹೆಚ್.ಎಸ್. ಸಿದ್ದೇಗೌಡ ಹಾಗೂ ಎಲ್ಲಾ ಉಪನ್ಯಾಸಕರು ಹಾಜರಿದ್ದರು. ಇದೇ ಸಂದರ್ಭ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು.

ಸೋಲು, ಗೆಲುವಿನ ಲೆಕ್ಕಾಚಾರದಲ್ಲಿ ಸರ್ಕಾರಗಳು ಮಗ್ನ: ರೈತರಿಗೆ ಸಂಕಷ್ಟ

ತಿ.ನರಸೀಪುರ ಮೇ 2– ರಾಜ್ಯವನ್ನು ಭೀಕರ ಬರಗಾಲ ಕಾಡುತ್ತಿದ್ದು, ರೈತರ ಬದುಕು ಚಿಂತಾಜನಕವಾಗಿದೆ. ಆದರೆ ಸರ್ಕಾರಗಳು ಲೋಕಸಭಾ ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಗಳ ಸೋಲು–ಗೆಲುವಿನ ಲೆಕ್ಕಾಚಾರದಲ್ಲಿ ಮಗ್ನರಾಗಿದ್ದು,



ರೈತರ ಸಂಕಷ್ಟ ಕೇಳುವವರಿಲ್ಲದಂತಾಗಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಎಲ್ಲಾ ಕೆರೆ ಕಟ್ಟೆಗಳಲ್ಲಿ ಸಂಪೂರ್ಣವಾಗಿ ನೀರು ಬತ್ತಿ ಹೋಗಿದ್ದು ಬೆಳೆದು ನಿಂತಿರುವ ಬೆಳೆಗಳು ನೀರಿಲ್ಲದೆ ಒಣಗಿ ಹೋಗಿವೆ. ಕೃಷಿ ಪಂಪ್‌ಸೆಟ್ ನಂಬಿ ಬೆಳೆ ಬೆಳೆದು ಬದುಕುತ್ತಿದ್ದ ರೈತರು ಬೋರ್‌ವೆಲ್‌ಗಳಲ್ಲಿ ನೀರು ನಿಂತು ಹೋದ ಕಾರಣ ಬೆಳೆಗಳು ಒಣಗಿ ನೆಲ ಕಚ್ಚಿದ್ದು ಅವರ ಬದುಕು ಕೂಡ ದುಸ್ತರವಾಗಿದೆ. ಗ್ರಾಮೀಣ ಭಾಗದ ಜನಜಾನುವಾರುಗಳಿಗೆ ಕುಡಿಯುವ ನೀರು, ಮೇವಿನ ಕೊರತೆ ಕಾಡುತ್ತಿದ್ದು, ಕೊರತೆ ನೀಗಿಸಲು ಸರ್ಕಾರಗಳು ಕೈ ಚೆಲ್ಲಿ ಕುಳಿತು ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಗಳ ಸೋಲು ಗೆಲುವಿನ ಲೆಕ್ಕಾಚಾರದಲ್ಲಿ ತಲ್ಲೀನರಾಗಿದ್ದು, ರೈತರ ಗೋಳು ಕೇಳುವವರೇ ಇಲ್ಲದಂತಾಗಿದೆ. ಸರ್ಕಾರವೇ ಬರಗಾಲ ಘೋಷಣೆ ಮಾಡಿದ್ದು, ರೈತರಿಗೆ ಬರ ಪರಿಹಾರ ನೀಡಲು ವಿಫಲವಾಗಿದೆ. ರಾಜ್ಯ, ಕೇಂದ್ರ ಸರ್ಕಾರಗಳು ಒಬ್ಬರ ಮೇಲೊಬ್ಬರು ಕೆಸರೆರಚಾಟದಲ್ಲಿ ತೊಡಗಿದ್ದು ರೈತರು ಮೂಕಪ್ರೇಕ್ಷಕರಾಗಿ ಬಕಪಕ್ಷಿಗಳಂತೆ ಪರಿಹಾರಕ್ಕಾಗಿ ಕಾಯುತ್ತಿದ್ದರೂ ಯಾರೊಬ್ಬರೂ ರೈತರ ಕಡೆ ಗಮನ ಹರಿಸುತ್ತಿಲ್ಲ ಎಂದರು.

ಬ್ಯಾಂಕ್‌ಗಳಲ್ಲಿ ರೈತರು ಕೃಷಿಗಾಗಿ ಸಾಲ ಮಾಡಿದ್ದು, ಬರಗಾಲದ ಪರಿಣಾಮ ಸಾಲ ಕಟ್ಟಲು ಸಾಧ್ಯವಾಗದೇ ಜೀವನ ನಡೆಸುವುದೆ ಕಷ್ಟವಾಗಿರುವ ಈ ಸಂದರ್ಭ ಬ್ಯಾಂಕ್‌ಗಳು ರೈತರಿಗೆ ನೋಟಿಸ್ ಜಾರಿ ಮಾಡಿ ಕೋರ್ಟ್‌ಗಳಲ್ಲಿ ದಾವೆ ಹೂಡಿ ರೈತರ ಮಾನ ಹರಾಜು ಹಾಕುತ್ತಿರುವುದು ತಕ್ಷಣವೇ ನಿಲ್ಲಬೇಕು. ರೈತರ ಕೃಷಿ ಪಂಪ್‌ಸೆಟ್‌ಗೆ ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು. ರಾಜ್ಯ ಸರ್ಕಾರ ಭಿಕ್ಷೆ ರೂಪದಲ್ಲಿ ಒಬ್ಬರಿಗೆ ಪರಿಹಾರ ಧನ ನೀಡಿ ಮತ್ತೊಬ್ಬರಿಗೆ ಬಿಟ್ಟು ಎಲ್ಲಾ ರೈತರ ರಕ್ಷಣೆ ಮಾಡಿರುವ ರೀತಿ ವಾರಂಟಿಯೇ ಇಲ್ಲದ ಗ್ಯಾರಂಟಿಗಳ ಘೋಷಣೆ ಮಾಡಿದೆ ಎಂದ ಅವರು, ರೈತರ ಸಾಲ ಮನ್ನಾ ಮಾಡಿ ಎಕರೆಗೆ 25ಸಾವಿರ ಬೆಳೆ ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಕಳೆದ ವರ್ಷ ಸರ್ಕಾರ ಕಬ್ಬು ಬೆಳೆಗಾರರಿಗೆ ಹೆಚ್ಚುವರಿಯಾಗಿ ಟನ್ ಕಬ್ಬಿಗೆ 150 ರೂ. ಘೋಷಣೆ ಮಾಡಿದ್ದು, ಇದುವರೆಗೂ ಕೊಟ್ಟಿಲ್ಲ. ಈ ಭೀಕರ ಬರಗಾಲದಲ್ಲಿ ಕೊಟ್ಟರೆ ರೈತರಿಗೆ ತುಂಬಾ ನೆರವಾಗುತ್ತದೆ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸರ್ಕಾರಗಳು ಗ್ಯಾರಂಟಿಗಳನ್ನು ತಂದು ರೈತರನ್ನು ದಿಕ್ಕು ತಪ್ಪಿಸುತ್ತಿವೆ. ರೈತರ ಬಗ್ಗೆ ಯಾವುದೇ ಎಳ್ಳಷ್ಟೂ ಕಾಳಜಿ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ರೈತರ ರಕ್ಷಣೆ ಮಾಡಲು ಯಾವುದಾದರೂ ಒಂದು ಉತ್ತಮ ಯೋಜನೆ ಜಾರಿಗೆ ತರಬೇಕು. ಇಲ್ಲದಿದ್ದರೆ ಅನ್ನ ಕೊಡುವ ರೈತನ ಸ್ಥಿತಿ ಚಿಂತಾಜನಕವಾದರೆ, ನಮ್ಮ ದೇಶ ಕೂಡ ಅನ್ನಕ್ಕಾಗಿ ಕೈಚಾಚಬೇಕಾಗುತ್ತದೆ ಎಂದರು.

ಉರುಳಿಗೆ ಸಿಲುಕಿದ್ದ ಚಿರತೆ ರಕ್ಷಣೆ



ಬೆಟ್ಟದಪುರ, ಮೇ 2– ಪಿರಿಯಾಪಟ್ಟಣ ತಾಲೂಕಿನ ಮಲ್ಲಿನಾಥಪುರ ಗ್ರಾಮದ ಅರಣ್ಯ ನಡುತೋಪಿನಲ್ಲಿ ಉರುಳಿಗೆ ಸಿಲುಕಿದ್ದ ಐದು ವರ್ಷ ವಯಸ್ಸಿನ ಗಂಡು ಚಿರತೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ರಕ್ಷಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮೈಸೂರು ವಿಭಾಗದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯ, ಹುಣಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸೀಮಾ ಪಿ.ಎ, ಸಹಾಯಕ ಸಂರಕ್ಷಣಾಧಿಕಾರಿ ಮಹದೇವಪ್ಪ ಅವರ ನಿರ್ದೇಶನದ ಮೇರೆಗೆ ಪಿರಿಯಾಪಟ್ಟಣ ಪ್ರಾದೇಶಿಕ ವಲಯದ ಅರಣ್ಯಾಧಿಕಾರಿ ವೈ.ಕೆ.ಕಿರಣ್ ಕುಮಾರ್ ಮತ್ತು ಸಿಬ್ಬಂದಿ, ವೈದ್ಯಾಧಿಕಾರಿ ಡಾ.ರಮೇಶ್ ಅವರು ಚಿರತೆಗೆ ಅರವಳಿಕೆ ಚುಚ್ಚು ಮದ್ದು ನೀಡಿ ಉರುಳಿನಿಂದ ಚಿರತೆ ರಕ್ಷಿಸಿದರು. ಬಳಿಕ ಚಿರತೆ ಆರೋಗ್ಯ ತಪಾಸಣೆಗೆ ಒಳಪಡಿಸಿದರು. ಈ ವೇಳೆ ವೈದ್ಯಾಧಿಕಾರಿಗಳು ಚಿರತೆ ಆರೋಗ್ಯ ಸದೃಢವಾಗಿರುವ ಬಗ್ಗೆ ದೃಢೀಕರಿಸಿದ ಮೇರೆಗೆ ಮೇಲಾಧಿಕಾರಿಗಳ ನಿರ್ದೇಶನದಂತೆ ನಾಗರಹೊಳೆ ಅಭಯಾರಣ್ಯಕ್ಕೆ ಚಿರತೆ ಬಿಡಲಾಗಿದೆ ಎಂದು ಪಿರಿಯಾಪಟ್ಟಣ ವಲಯ ಅರಣ್ಯಾಧಿಕಾರಿ ಕಿರಣ್‌ಕುಮಾರ್ ತಿಳಿಸಿದ್ದಾರೆ.

ಇಂದಿಗೂ ಸಂಕಷ್ಟದಲ್ಲಿರುವ ಕಾರ್ಮಿಕ ವರ್ಗ

ಕಾಂಗ್ರೆಸ್ ಕಾರ್ಮಿಕ ವರ್ಗದ ಅಧ್ಯಕ್ಷ ಗೋವಿಂದರಾಜು ವಿಷಾದ

ನಂಜನಗೂಡು, ಮೇ 2– ಪ್ರತಿಯೊಂದು ದೇಶದ ಆರ್ಥಿಕ ಪ್ರಗತಿ ಆ ದೇಶದ ಕಾರ್ಮಿಕರ ಮೇಲೆ ಅವಲಂಬಿತವಾಗಿದೆ. ಸರ್ಕಾರಗಳು ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದರೂ, ಪ್ರಸ್ತುತ ಶೋಷಣೆಯಿಂದಾಗಿ ಕಾರ್ಮಿಕ ವರ್ಗ ಸಂಕಷ್ಟದ ಪರಿಸ್ಥಿತಿಯಲ್ಲಿ ಜೀವಿಸುವಂತಾಗಿದೆ ಎಂದು ಕಾಂಗ್ರೆಸ್ ಕಾರ್ಮಿಕ ವರ್ಗದ ಅಧ್ಯಕ್ಷ ಗೋವಿಂದರಾಜು ವಿಷಾದಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಮಿಕ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕಾರ್ಮಿಕರ ಬೆವರ ಹನಿಯ ನಿಸ್ವಾರ್ಥ ಸೇವೆಗೆ ಗೌರವ ನೀಡುವ ಸಲುವಾಗಿ ಮೇ 1 ರಂದು ಕಾರ್ಮಿಕರ ದಿನ ಆಚರಿಸುತ್ತಿದ್ದೇವೆ. ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿ ನಿಂತಿದೆ. ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ಯೋಜನೆ ಜಾರಿಯಾಗಿದ್ದರೂ ನಿರಂತರ ಶೋಷಣೆಯಿಂದ ಕಾರ್ಮಿಕರು ಇನ್ನೂ ಸಂಕಷ್ಟದ ಪರಿಸ್ಥಿತಿಯಲ್ಲಿ ಜೀವಿಸುವಂತಾಗಿದೆ. ಅಲ್ಲದೆ ಅಸಂಘಟಿತ ಕಾರ್ಮಿಕ ವರ್ಗಕ್ಕೆ ಸೇರುವ ರೈತರು, ನಗರ ಪ್ರದೇಶದಲ್ಲಿ ದುಡಿಯುವ ಹೋಟೆಲ್ ಕಾರ್ಮಿಕರು, ಕೂಲಿ ಕಾರ್ಮಿಕರ ಪರಿಸ್ಥಿತಿ ಹೇಳ ತೀರದಾಗಿದೆ. ಕನಿಷ್ಠ ಕೂಲಿ ಕಾಯ್ದೆ ಜಾರಿಯಾಗಿದ್ದರೂ, ಅದು ಸಮರ್ಪಕವಾಗಿ ಜಾರಿಯಾಗದ ಕಾರಣ ಶೋಷಣೆಯಲ್ಲೇ ಬದುಕು ಸಾಗಿಸುವಂತಾಗಿದೆ. ಆದ್ದರಿಂದ ಸರ್ಕಾರಗಳು ದುಡಿಯುವ ಶ್ರಮಿಕ ವರ್ಗಕ್ಕೆ ಉಪಯೋಗವಾಗುವಂತಹ ಕಲ್ಯಾಣ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ ಶ್ರಮಿಕರಿಗೆ ಗೌರವ ಸಲ್ಲಿಸಬೇಕಿದೆ ಎಂದರು.



ನಂಜನಗೂಡಿನ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಮಿಕ ದಿನ ಆಚರಿಸಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿ, ಕಾರ್ಮಿಕರ ಕಲ್ಯಾಣ ನಿಧಿ ಸ್ಥಾಪಿಸುವ ಜೊತೆಗೆ ಕಾರ್ಮಿಕರ ಪರಿಶ್ರಮಕ್ಕೆ ಬೆಲೆ ನೀಡಿದ್ದು ಕಾಂಗ್ರೆಸ್ ಸರ್ಕಾರ ಮಾತ್ರ. ಕಾರ್ಮಿಕರ ಆರೋಗ್ಯದ ದೃಷ್ಟಿಯಿಂದ ಇಎಸ್‌ಐ ಆಸ್ಪತ್ರೆಗಳನ್ನು ಸ್ಥಾಪಿಸಿದೆ. ಮಲ್ಲಿಕಾರ್ಜುನ ಖರ್ಗೆ ಅವರು ಕಾರ್ಮಿಕ ಮಂತ್ರಿಯಾಗಿದ್ದ ವೇಳೆ ಇಎಸ್‌ಐ ಆಸ್ಪತ್ರೆಗಳನ್ನು ಉನ್ನತ ದರ್ಜೆಗೆ ಏರಿಸಿದ್ದರು. ಅಲ್ಲದೆ ದಿ.ಆರ್. ಧ್ರುವನಾರಾಯಣ್ ಅವರ ಶ್ರಮದಿಂದ ನಂಜನಗೂಡಿನಲ್ಲಿ 5 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಇಎಸ್‌ಐ ಆಸ್ಪತ್ರೆ ಸ್ಥಾಪನೆಯಾಗಿದೆ. ಜೊತೆಗೆ ಅಸಂಘಟಿತ ಕಾರ್ಮಿಕರ ಅನುಕೂಲಕ್ಕಾಗಿ ಪಾಸ್‌ಗಳನ್ನು ವಿತರಿಸಿ ರೈಲಿನಲ್ಲಿ ಪ್ರಯಾಣಿಸಲು ಅನುಕೂಲ ಮಾಡಿಕೊಟ್ಟಿದ್ದರು ಎಂದರು.

ಕಾರ್ಯಕ್ರಮದಲ್ಲಿ ಕಾರ್ಮಿಕ ದಿನಾಚರಣೆ ಅಂಗವಾಗಿ ನಿವೃತ್ತ ಕಾರ್ಮಿಕರಾದ ಸತೀಶ್ ಮತ್ತು ನಿವೃತ್ತ ಪೌರಕಾರ್ಮಿಕರಾದ ಗೌರಮ್ಮ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಮಾರಂಭದಲ್ಲಿ ದೊರೆಸ್ವಾಮಿ ನಾಯಕ, ಶಿವಪ್ಪ ದೇವರು, ಅಶೋಕ್, ಉಪ್ಪಿನಹಳ್ಳಿ ಶಿವಣ್ಣ, ರಂಗಸ್ವಾಮಿ, ವೀರೇಂದ್ರ, ಶ್ರೀಕಂಠ, ರಾಜೇಶ್, ನಂದೀಶ್, ಪುಟ್ಟಸ್ವಾಮಿ, ಕೃಷ್ಣ, ಶಿವಕುಮಾರ್, ಬಸವರಾಜು, ಸತೀಶ್, ರಮೇಶ್ ಸೇರಿದಂತೆ ಹಲವರಿದ್ದರು.

ಹುಚ್ಚೇಗೌಡ ನಿಧನ

ಭೇರ್ಯ, ಮೇ 2– ಇಲ್ಲಿಗೆ ಸಮೀಪದ ಬಟಿಗನಹಳ್ಳಿ ಗ್ರಾಮದ ನಿವಾಸಿ ಹುಚ್ಚೇಗೌಡ(82) ಗುರುವಾರ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರ ನಿಧನಕ್ಕೆ ಎಂಎಲ್‌ಸಿ ಅಡಗೂರು ಹೆಚ್.ವಿಶ್ವನಾಥ್, ಮಾಜಿ ಸಚಿವ ಸಾ.ರಾ.ಮಹೇಶ್, ಕೆಪಿಸಿಸಿ ಸದಸ್ಯ ದೊಡ್ಡಸ್ವಾಮೇಗೌಡ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಬಿ.ವೈ.ಶಿವಶಂಕರ್, ಮುಶೀರ್ ಅಹಮದ್, ಪತ್ರಕರ್ತ ಭೇರ್ಯ ಮಹೇಶ್, ನಿವೃತ್ತ ಸಿಟಿಬಿ ಅಧಿಕಾರಿ ಜವರೇಗೌಡ, ರಾಜ್ಯ ರಸ್ತೆ ಸಾರಿಗೆ ನಿಗಮದ ಸಂಚಾರಿ ಸಹಾಯಕ ನಿಯಂತ್ರಣಾಧಿಕಾರಿ ಬಿ.ಕೆ.ಪೂರ್ಣಯ್ಯ, ಗ್ರಾಪಂ ಸದಸ್ಯ ಫೈನಾನ್ಸ್ ಕುಮಾರ್, ಬಿ.ಕೆ. ಕುಮಾರ್, ಜೆಡಿಎಸ್ ಮುಖಂಡರಾದ ತನು, ರಶೀದ್, ಡಿಗ್ರಿ ಮಹದೇವ್ ಅನೇಕರು ಸಂತಾಪ ಸೂಚಿಸಿದ್ದಾರೆ

ಪ್ರಧಾನಿ ಮೋದಿ ಸಾವಿನ ಪ್ರಸ್ತಾಪ

ರಾಜು ಕಾಗೆ ವಿರುದ್ಧ ಮೈಸೂರಲ್ಲಿ ಮಹಿಳೆಯರ ಆಕ್ರೋಶ



ಬಿಜೆಪಿ ಮೈಸೂರು ನಗರ ಮಹಿಳಾ ಮೋರ್ಚಾ ವತಿಯಿಂದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಕಾಂಗ್ರೆಸ್ ಶಾಸಕ ರಾಜು ಕಾಗೆ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮೇ 2(ಎಸ್‌ಬಿಡಿ)– ಪ್ರಧಾನಿ ಮೋದಿ ಸತ್ತರೆ ಮುಂದೆ ಯಾರೂ ಪ್ರಧಾನಿ ಆಗುವುದಿಲ್ಲವೇ? ಎಂದು ಹೇಳಿದ್ದ ಕಾಂಗ್ರೆಸ್ ಶಾಸಕ ರಾಜು ಕಾಗೆ ವಿರುದ್ಧ ಬಿಜೆಪಿಯ ಮೈಸೂರು ನಗರ ಮಹಿಳಾ ಮೋರ್ಚಾ ವತಿಯಿಂದ ಪ್ರತಿಭಟನೆ ನಡೆಸಿ, ಮೋದಿಗೆ ದೀರ್ಘಾಯುಷ್ಯ ಕರುಣಿಸುವಂತೆ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಗುರುವಾರ ಸಂಜೆ ಪ್ರತಿಭಟನೆ ನಡೆಸಿ, ಶಾಸಕ ರಾಜು ಕಾಗೆ ವಿರುದ್ಧ ಧಿಕ್ಕಾರ ಕೂಗಿದರಲ್ಲದೆ ಇದು ಕಾಂಗ್ರೆಸ್ ನಾಯಕ ಕೆಟ್ಟ ಮನಃಸ್ಥಿತಿಗೆ ಸಾಕ್ಷಿ ಎಂದು ಆರೋಪಿಸಿದರು. ಇದೇ ವೇಳೆ ಪ್ರಧಾನಿ ಮೋದಿಗೆ ಜೈಕಾರ ಹಾಕಿ, ಅವರಿಗೆ ದೇವರು ದೀರ್ಘಾಯುಷ್ಯ ಕರುಣಿಸಲಿ ಎಂದು ಬೇಡಿಕೊಂಡರು.

ಈ ವೇಳೆ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜು ಮಾತನಾಡಿ, ಬೆಳಗಾವಿಯಲ್ಲಿ ಚುನಾವಣೆ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ಶಾಸಕ ರಾಜು ಕಾಗೆ ಮಾತನಾಡುವಾಗ 'ಪ್ರಧಾನಿ ಮೋದಿ ಸತ್ತರೆ ಈ ದೇಶದಲ್ಲಿ ಮುಂದೆ ಯಾರೂ ಪ್ರಧಾನಿ ಆಗುವುದೇ ಇಲ್ಲವೇ? ಎಂದು ನಾಲಿಗೆ ಹರಿಬಿಟ್ಟಿದ್ದಾರೆ. ಅವರೇಕೆ ಮೋದಿ ಅವರ ಸಾವು ಬಯಸುತ್ತಿದ್ದಾರೆ?. ಜಮ್ಮು–ಕಾಶ್ಮೀರಕ್ಕಿದ್ದ ವಿಶೇಷ 370ನೇ ಆಕ್ಟ್ ಅನ್ನು ರದ್ದು ಪಡಿಸಿದ್ದು, ಮಹಿಳೆಯರಿಗೆ ಶೇ.33 ಮೀಸಲಾತಿ ಕೊಟ್ಟಿದ್ದು, ಶತಮಾನಗಳ ಕನಸಾಗಿದ್ದ ರಾಮ ಮಂದಿರ ನಿರ್ಮಿಸಿ ಉದ್ಘಾಟಿಸಿದ್ದು, ಭಯೋತ್ಪಾದನೆಯನ್ನು ಮಟ್ಟಹಾಕಿ ದೇಶದಲ್ಲಿ ಸುರಕ್ಷತೆ ನಿರ್ಮಿಸಿದ್ದಕ್ಕೆ ಕಾಂಗ್ರೆಸ್ ನಾಯಕರು ಹೀಗೆ ಮಾತನಾಡುತ್ತಿದ್ದಾರಾ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ನಾಯಕರು ಭಯ ಹಾಗೂ ಹತಾಷೆಯಿಂದ ಹೀಗೆ ನಾಲಿಗೆ ಹರಿಬಿಡುತ್ತಿದ್ದಾರೆ. ದೇಶದ ಪ್ರಧಾನಮಂತ್ರಿಗಳನ್ನು ಅವಹೇಳನ ಮಾಡುತ್ತಿದ್ದಾರೆ. ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯಾವ ಧಾಟಿಯಲ್ಲಾದರೂ ಮಾತನಾಡಲು ಸಿದ್ಧರಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ರಾಜು ಕಾಗೆ ಅವರ ಕೆಟ್ಟ ಮನಃಸ್ಥಿತಿಯನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದರು.

ನಗರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಸವಿತಾ ಗೌಡ, ಸೌಭಾಗ್ಯಮ್ಮ, ಮಾಲಿನಿ, ಪುಷ್ಪಾ, ಮೀನಾಕ್ಷಿ, ಚಂದ್ರಕಲಾ, ಜ್ಯೋತಿ, ರಶ್ಮಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿಶೇಷ ಪೂಜೆ: ಪ್ರತಿಭಟನೆ ನಂತರ ಪ್ರಧಾನಿ ಮೋದಿ ಅವರು ಮತ್ತೆ ಪ್ರಧಾನಿಯಾಗಲಿ, ಅವರಿಗೆ ದೀರ್ಘಾಯುಷ್ಯ ಪ್ರಾಪ್ತವಾಗಲಿ ಎಂಬ ಸಂಕಲ್ಪದೊಂದಿಗೆ ಕೋಟೆ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಡಾ.ಲಕ್ಷ್ಮಿನಾರಾಯಣರಿಗೆ ನುಡಿ ನಮನ; ಅವರ ಒಡನಾಡಿಗಳ ಕಂಬನಿ



ಮೈಸೂರು ರಾಮಕೃಷ್ಣನಗರದಲ್ಲಿನ ರಮಾಗೋವಿಂದ ರಂಗಮಂದಿರದಲ್ಲಿ ಡಾ.ವಿ.ಲಕ್ಷ್ಮಿನಾರಾಯಣ ಅವರ ನುಡಿ ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಮೇ 2(ಎಸ್‌ಬಿಡಿ)– ಸಮಾಜದ ಹಿತಕ್ಕಾಗಿ ನಾಲ್ಕು ದಶಕಗಳಿಂದ ಬದ್ಧತೆಯಿಂದ ಕೆಲಸ ಮಾಡಿದ ಡಾ.ವಿ.ಲಕ್ಷ್ಮಿನಾರಾಯಣ ಅವರನ್ನು ಸದಾ ಸ್ಮರಿಸಿಕೊಳ್ಳಬೇಕು ಎಂದು ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್(ಜನ್ನಿ) ಹೇಳಿದರು.

ನಾಗರಿಕ ಹಕ್ಕುಗಳಿಗಾಗಿ ಜನರ ಒಕ್ಕೂಟ (ಪಿಯುಸಿಎಲ್), ಸಿಪಿಐ(ಎಂಎಲ್) ಲಿಬರೇಷನ್ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಹಾಗೂ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದ ಗುರುವಾರ ಆಯೋಜಿಸಿದ್ದ ಡಾ.ವಿ.ಲಕ್ಷ್ಮಿನಾರಾಯಣ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಕುಕ್ಕರಹಳ್ಳಿ ತಂಬೂರಿ ತಾಯಿ ಸಿದ್ದಮ್ಮ ಅವರ ಹಾಡೊಂದನ್ನು ಪ್ರಸ್ತುತಪಡಿಸಿ ನಂತರ ಮಾತನಾಡಿದರು.

ಲಕ್ಷ್ಮಿನಾರಾಯಣ ಸಮಾಜದ ಹಿತಕ್ಕಾಗಿ ನಾಲ್ಕು ದಶಕಗಳ ಕಾಲ ಅವಿರತವಾಗಿ ಬದ್ಧತೆಯಿಂದ ದುಡಿದ ಜೀವ ದುರಿತ(ಕೆಟ್ಟ) ಕಾಲದಲ್ಲಿ ದೊಡ್ಡ ಜೀವ ನಮ್ಮಿಂದ ಮರೆಯಾಗಿದೆ. ಆತ ಹೇಳದೇ ಕೇಳದೆ ಹೋಗಿ ಎಲ್ಲರಿಗೂ ನೋವುಂಟು ಮಾಡಿದ ಎಂದು ಭಾವುಕರಾಗಿ ನುಡಿದರು.

ಪಿಯುಸಿಎಲ್ ಮೈಸೂರು ಘಟಕದ ಅಧ್ಯಕ್ಷ ಪ್ರೊ.ಕಾಳಚನ್ನೇಗೌಡ ಮಾತನಾಡಿ, ಲಕ್ಷ್ಮಿನಾರಾಯಣ ಅವರು ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಸಾಧ್ಯವಾದಷ್ಟು ಪರಿಹಾರ ಕಲ್ಪಿಸುವ ಉತ್ತಮ ಚಿಕಿತ್ಸಕರಾಗಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ವಿಚಾರಧಾರೆಗಳನ್ನು ಪ್ರಚುರಪಡಿಸಿದ್ದರು. ಯುವ ಸಮುದಾಯದಲ್ಲಿ ವೈಚಾರಿಕ ಕ್ರಾಂತಿಕಾರಿ ಆಲೋಚನೆಗಳನ್ನು ಬಿತ್ತಿದರು. ಯಾರ ಮೇಲೆ ದೌರ್ಜನ್ಯವಾದರೂ, ಮಾನವ ಹಕ್ಕು ಉಲ್ಲಂಘನೆಯಾದರೂ ಮುಂಚೂಣಿಯಲ್ಲಿ ನಿಂತು ಸತ್ಯಶೋಧನೆ ಮಾಡುತ್ತಿದ್ದರು. ನಾವೆಲ್ಲಾ ಹೆಡ್ ಮಾಸ್ಟರ್ ಅನ್ನು ಕಳೆದುಕೊಂಡಿದ್ದೇವೆ ಎಂದು ವಿಷಾಧ ವ್ಯಕ್ತಪಡಿಸಿದರು.

ಲಕ್ಷ್ಮಿನಾರಾಯಣ ಅವರ ನಾದಿನಿ ರೂಪ ಮಾತನಾಡಿ, ರತಿರಾವ್ ಮತ್ತು ಲಕ್ಷ್ಮಿನಾರಾಯಣ ಅವರ ಅಂತರ್ಜಾತಿ ವಿವಾಹಕ್ಕೆ ನಮ್ಮ ತಂದೆ ವಿರೋಧಿಸಿದ್ದರು. ಆದರೆ ನಂತರದಲ್ಲಿ ಅವರಿಗೆ ಲಕ್ಷ್ಮಿನಾರಾಯಣ ಅವರೇ ಮೆಚ್ಚಿನ ಅಳಿಯರಾದರು. ಜಾತಕ ನೋಡಿದ ಜ್ಯೋತಿಷಿಯೊಬ್ಬರು ಎರಡೇ ತಿಂಗಳಿಗೆ ದೂರವಾಗುತ್ತಾರೆ ಎಂದಿದ್ದರು. ಆದರೆ ಇವರಿಬ್ಬರೂ ಅನ್ಯೂನ್ಯ ದಂಪತಿಯಾಗಿದ್ದರು ಎಂದು ತಿಳಿಸಿದರು.

ಲಕ್ಷ್ಮಿನಾರಾಯಣ ಅವರ ಪುತ್ರ ಅಪೂರ್ವ, ನಮ್ಮ ತಂದೆಗೆ ಪ್ರವಾಸ ಮಾಡುವುದು ಬಹಳ ಇಷ್ಟವಿತ್ತು. ಆಹಾರ ಪ್ರಿಯರಾಗಿದ್ದ ಅವರಿಗೆ ಓದುವುದೆಂದರೆ ಎಲ್ಲಕ್ಕಿಂತ ಮುಖ್ಯವಾಗಿತ್ತು. ಬಹಳ ವಿನಮ್ರ ವ್ಯಕ್ತಿತ್ವದ ನಮ್ಮ ತಂದೆಯ ಬಗ್ಗೆ ತುಂಬಾ ಹೆಮ್ಮೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಪ್ರೊ.ಕಾಳೇಗೌಡ ನಾಗವಾರ, ಸಿ.ಬಸವಲಿಂಗಯ್ಯ, ನಾ.ದಿವಾಕರ, ಜಿ.ಪಿ.ಬಸವರಾಜು, ಪ್ರೊ.ಜಗನ್ನಾಥ್, ಕೆ.ಆರ್.ಸುಮತಿ, ಕೆ.ಆರ್.ಗೋಪಾಲಕೃಷ್ಣ ಸ್ವಾನ್ಲಿ, ಪರಶುರಾಮ್, ಬಿ.ರವಿ, ಉಮಾದೇವಿ, ಸೀಮಾ, ಸವಿತಾ ಮಲ್ಲೇಶ್, ರಂಗಸ್ವಾಮಿ, ಹರಿಹರ ಆನಂದಸ್ವಾಮಿ, ಪದ್ಮಶ್ರೀ, ಲಕ್ಷ್ಮಿನಾರಾಯಣ ಅವರ ಸಹೋದ್ಯೋಗಿ ಸಾಯಿನಾಥ್ ಮುಂತಾದವರು ಭಾಗವಹಿಸಿ, ನುಡಿ ನಮನ ಸಲ್ಲಿಸಿದರು. ರತಿರಾವ್ ಹಾಗೂ ಕುಟುಂಬದವರು ಇದ್ದರು.

ಎಚ್.ಡಿ.ರೇವಣ್ಣಗೆ ಬಂಧನ ಭೀತಿ; ನಿರೀಕ್ಷಣಾ ಜಾಮೀನು ಕೋರಿ ಅರ್ಜಿ

ಬೆಂಗಳೂರು: ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ರಾಸಲೀಲೆ ವಿಡಿಯೋ ಪ್ರಕರಣದಲ್ಲಿ ಅವರ ತಂದೆ ಹಾಗೂ ಎ1 ಆರೋಪಿಯಾಗಿರುವ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರು ಬಂಧನ ಭೀತಿ ಎದುರಿಸುತ್ತಿದ್ದು, ಗುರುವಾರ ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಹಾಸನ ಜಿಲ್ಲೆ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರು ಇಂದು ನಿರೀಕ್ಷಣಾ ಜಾಮೀನು ಕೋರಿ ಬೆಂಗಳೂರಿನ ಸೆಷನ್ಸ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಎಸ್‌ಐಟಿ ಈಗಾಗಲೇ ಈ ಪ್ರಕರಣ ತನಿಖೆಯನ್ನು ಚುರುಕುಗೊಳಿಸಿದ್ದು, ಮಹತ್ವದ ಮಾಹಿತಿ ಕಲೆಹಾಕುತ್ತಿದೆ. ಅಲ್ಲದೇ ವಿಚಾರಣೆಗೆ ಹಾಜರಾಗುವಂತೆ ರೇವಣ್ಣ ಮತ್ತು ಪ್ರಜ್ವಲ್‌ಗೆ ನೋಟಿಸ್ ಜಾರಿ ಮಾಡಿದೆ. ಇದರ ಬೆನ್ನಲ್ಲೇ ರೇವಣ್ಣ ಕೋರ್ಟ್ ಮೆಟ್ಟಿಲೇರಿರುವುದು ಕುತೂಹಲ ಮೂಡಿಸಿದೆ.

ಪ್ರಜ್ವಲ್ ರೇವಣ್ಣ ಅವರು ನೂರಾರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಹಲವು ವಿಡಿಯೋಗಳು ಬಹಿರಂಗವಾದ ನಂತರ ಹಾಸನ ಸಂಸದರ ವಿರುದ್ಧದ ಆರೋಪಗಳ ತನಿಖೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಭಾನುವಾರ ವಿಶೇಷ ತನಿಖಾ ತಂಡವನ್ನು ರಚಿಸಿದೆ ಮತ್ತು ತನಿಖೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಎಸ್‌ಐಟಿಗೆ ಸೂಚಿಸಲಾಗಿದೆ. ಪೊಲೀಸರು ಐಪಿಸಿ ಸೆಕ್ಷನ್ 354ಎ (ಲೈಂಗಿಕ ಕಿರುಕುಳ), 354ಡಿ (ಮಹಿಳೆಗೆ ಮುಜುಗರ), 506 (ಬೆದರಿಕೆ), 509 (ಮಹಿಳೆಯರ ಮರ್ಯಾದೆಗೆ ಅವಮಾನ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ರೇವಣ್ಣ ಅವರನ್ನು ಎ1 ಆರೋಪಿ ಮತ್ತು ಪ್ರಜ್ವಲ್ ರೇವಣ್ಣ ಅವರನ್ನು ಎ2 ಆರೋಪಿಯನ್ನಾಗಿ ಮಾಡಿದ್ದಾರೆ.

SITE FOR SALE
SHOURISH LAYOUT
3000 Sq.ft., Site No. 1,
East facing.
Rs. 3500 Per Sq.ft.
Mob: 9480063135

ಮದುವೆ, ಶುಭ ಸಮಾರಂಭಗಳಿಗೆ
50% ರಿಯಾಯಿತಿ
ಕಾಂಚೀಪುರಂ ರೇಷ್ಮೆ ಸೀರೆಗಳು
ಮಾರಾಟ ಮತ್ತು
ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಈ ಅವಕಾಶ ಕೆಲವೇ ದಿನಗಳು ಮಾತ್ರ
ಹೋಟೆಲ್ ಮಯೂರ ಹೊಯ್ಸಳ
ಜೆಎಲ್‌ಬಿ ರಸ್ತೆ, ಮೈಸೂರು
ಮೊ. : 9481820079





SEEMA TIMBER TRADERS
Bogadi Ring Road Signal Towards
Hinkal Petrol Bunk Road, Mysore-26
All Season wood
and good quality, Holesale
& Retail, Teak cut Sizes,
Red saal, Neem Sizes &
Carpenter work done here
Please contact
9945299874


20x30 ಮನೆ ಮಾರಾಟಕ್ಕಿದೆ
2 ವರ್ಷದ ಟ್ರಿಪ್ಲೆಕ್ಸ್, ಫುಲ್ ಟೀಕ್, 3 ಬೆಡ್‌ರೂಂ, 3 ಹಾಲ್, ಯುಟಿಲಿಟಿ, ಸಿಟ್‌ಔಟ್ ಎಲ್ಲಾ ಇರುವ ಉತ್ತಮವಾದ 20x30 ಮನೆ ಆಂದೋಲನ ಸರ್ಕಲ್ ಹತ್ತಿರ ಮಾರಾಟಕ್ಕಿದೆ. ಸಂಪರ್ಕಿಸಿ:
Mob: 9945245946

neem BOND PLATINUM®
PLYWOOD DOORS
10 YEARS WARRANTY
@ FACTORY DEPOT RATES
✆9731591267, 9901291267

DTCP Approved Layout
Only few Sites available
30x40 Site @ RS 18 Lac
Bank Loan available
Behind Chamundi Hill
Next to Marashettihalli
contact
9538583377

CHANGE OF NAME
I, DEEPAK KUMAR BHAWARLAL KOTHARI, resident of 370, Ananda Marga, Siddarthanagara, Mysuru-570011, changed my daughter's name as PRAACHI JAIN, from the formerly called name, PRAACHI, vide an affidavit Sworn on 30.04.2024 before Sri. S.V. Nagendra, Notary, Mysuru.
Sd/- Deepak Kumar Bhawarlal Kothari

MUDA APPROVED SITES FOR SALE
30X40 & 30X50
EAST & WEST FACING AVAILABLE
READY FOR REGISTRATION
Location:
Adjacent J P Nagar, Mysuru
Price @ Rs 65 lakhs onwards
Call: 96200 99122




SAVENSA
BUSINESS SOLUTIONS PRIVATE LIMITED
LOOKING FOR A JOB?
WANTED
TELECALLERS REQUIRED - 15 NO'S
Contact : 9986316666
Freshers also Welcome
Attractive : Salary + Allowance + Incentives
WALK IN DIRECTLY
SAVENSA BUSINESS SOLUTIONS PVT LTD.
No. 527/ 486, Pooja Complex, 2nd Floor, Dr. Rajkumar Road, Yaraganahalli, Mysore - 570019
Above Muthoot Finance
Timings : 10.30 am to 1 pm

DTCP SITES FOR SALE
DTCP Sites
With RERA
Near Jayapura,
H.D. Kote Road, Mysore.
9590491194,9606783264

ಸೈಟು ಬೇಕಾಗಿವೆ
ಲಾಲ್ ಬಹದ್ದೂರು ಶಾಸ್ತ್ರಿನಗರ ಶಾಂತಿವೇರಿ ಗೋಪಾಲಗೌಡ ನಗರ, ವಸಂತನಗರ ಹಾಗೂ ಸಪ್ತ ಮಾತೃಕಾ ಎಲ್ಲಾ ಲೇಔಟ್‌ಗಳಲ್ಲಿ ದಯಮಾಡಿ ಮಾಲೀಕರು ಸಂಪರ್ಕಿಸಿ
9844444767 / 9686714571

WANTED
(Seeking)
for NSD Trained Teacher
ENEDSA SCHOOL
Mahadevapura
(J.P.Nagar Last Stop)
Mysuru-570008
7204851318





CITIZEN CONVENT
Affiliated to Karnataka State Board (English Medium)
Behind Quba Masjid, KEB Colony, Udayagiri, Mysuru
Ph : 0821-2456170 / 93417 96930 / 96862 14726
Email : citizenconvent@gmail.com I Web : www.citizenconvent.org
TEACHING STAFF REQUIRED
• Primary - D.Ed., / B.Ed.,
• Higher Primary & High School - B.A., / M.A., B.Sc., M.Sc., / B.Ed., / M.Ed., English, Mathematics, Science & Social
• Computer - BCA / MCA
• Physical Education - B.P.Ed., / M.P.Ed.,
Attractive salary for Deserving Candidates. Kindly attach your passport size photo to your resume
WALK-IN-INTERVIEW on 4th May 2024 Time : 10am to 1pm
ADMISSIONS OPEN FOR ACADEMIC YEAR 2024 - 2025
NURSERY to 10th STANDARD

2 BHK
HOME INTERIORS
Starting @ ₹2.5 Lacs*
Home Space Mart™
TALK TO OUR DESIGN TEAM
✆9108923123

HOUSE FOR SALE
Near NPS Vijayanagar
4th Stage
MUDA Approved
30x40 Duplex 3 BHK
7760847677
9108011927

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

10ನೇ ವರ್ಷದ ಸವಿನೆನಪು

ಎಂ.ಬಿ.ಆನಂದಕುಮಾರ್
ಎಸ್.ಬಿ.ಎಂ. (ನೌಕರ)
ನೀನು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ತಂದೆ, ತಾಯಿ ಮತ್ತು ಕುಟುಂಬವರ್ಗದರು

13ನೇ ವರ್ಷದ ಚಿರಸ್ಮರಣೆ

ಆರ್.ರಮೇಶ್ (ವಿಕ್ರಾಂತ್, ಜಿ.ಕೆ.ಟೈರ್ಸ್)
ಸದಾ ನಿಮ್ಮ ನೆನಪಿನಲ್ಲಿರುವ
ಧರ್ಮಪತ್ನಿ, ರುಕ್ಮಿಣಿ ಮತ್ತು ಮಕ್ಕಳು, ರಾಜೇಶ್ವರಿ, ರಜಿನಿ ಕುಮಾರ್ ಮತ್ತು ಅನುಷ್‌ಗೌಡ ಮತ್ತು ತೋಳಪ್ಪ ರಾಮಣ್ಣನವರು ಕುಟುಂಬವರ್ಗದವರು
(ಕೆ.ಜಿ.ಕೊಪ್ಪಲು) ಮೈಸೂರು


5ನೇ ವರ್ಷದ ಚಿರಸ್ಮರಣೆ

ಜಿ.ಪಿ. ಬೀರೇಗೌಡರು
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖಿತಪ್ತರು
ಪತ್ನಿ: ಶ್ರೀಮತಿ ದೇವೀರಮ್ಮ ಮತ್ತು ಮಗ – ಸೊಸೆ, ಮೊಮ್ಮಕ್ಕಳು – ಎಂ. ರಾಜೇಶ್ವರಿ, ಎಂ. ದಿವ್ಯಾ ಹಾಗೂ ಬಂಧುಮಿತ್ರರು

TEACHERS WANTED

Sl no	Subject / Teacher	No of Post
1	Mathematics- PCM	01
2	Kannada	01
3	Primary Teacher	02

Above said posts are for English medium HPS & High School.
BHAGYA JYOTHI SCHOOL
Raghavendra Nagar, Mysore -29.
✆: 2470611, 96320 89987

3ನೇ ವರ್ಷದ ಪುಣ್ಯಸ್ಮರಣೆ

ನಂದೀಶ್ ಎಂ.ಎನ್.
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿ
ದುಃಖಿತಪ್ತರು: ಪತ್ನಿ–ರಮ್ಯಶ್ರೀ, ಮಗಳು–ಗಾನವಿ, ಅಳಿಯ–ರವಿ ಮತ್ತು ಕುಟುಂಬವರ್ಗ

ಮೊದಲ ವರ್ಷದ ಸವಿನೆನಪು

ಶ್ರೀಮತಿ ನಿಂಗಮ್ಮ
(ಲೇ|| ಶ್ರೀ ಕೆಂಚೇಗೌಡರ ಧರ್ಮಪತ್ನಿ)
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು:
ಮೃತರ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು
ಬೋಗಾದಿ ಗ್ರಾಮಸ್ಥರು

ಚಿರಸ್ಮರಣೆ

ಲೋಕೇಶ್ ನಂಜಪ್ಪ
M.Tech
ಪ್ರೀತಿಯ ಮಗನೆ ನೀನು ನಮ್ಮನ್ನು ಅಗಲಿ ಇಂದಿಗೆ 18 ವರ್ಷ ಕಳೆಯಿತು, ಆ ಭಗವಂತನು ನಿನ್ನ ಆತ್ಮಕ್ಕೆ ಸದಾ ಶಾಂತಿಯನ್ನು ಕರುಣಿಸಲೆಂದು ಹಾರೈಸುತ್ತ ಸದಾ ನಿನ್ನ ನೆನಪಿನಲ್ಲಿರುವ
ದುಃಖಿತಪ್ತರು: ತಂದೆ – ಹೆಚ್.ಆರ್.ನಂಜಪ್ಪ, ತಾಯಿ– ಶ್ರೀಮತಿ ಸುಶೀಲಮಣಿ ತಂಗಿ–ಶ್ರೀಮತಿ ಜಯಲಕ್ಷ್ಮಿ, ಕುಮಾರಿ ಭಾವ–ಎ.ಎಂ. ಮಲ್ಲಿಕಾರ್ಜುನ ಮಾವಂದಿರು, ತಾತಂದಿರು, ಅಜ್ಜಿಯಂದಿರು ಹಾಗೂ ಕುಟುಂಬವರ್ಗದವರು

